ಸ್ವಸಹಾಯ ಗುಂಪುಗಳಿಗೆ ಬ್ಯಾಂಕು ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ : ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ

ಎಂ.ಫಿಲ್ ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ಮಂಜುಶ್ರೀ.ಎನ್.

ನೋಂದಣಿ ಸಂಖ್ಯೆ : 141111030064

ಮಾರ್ಗದರ್ಶಕರು

ಡಾ. ಎನ್.ಗುರುರಾಜ ಭಟ್
ಪ್ರೊಫೆಸರ್,
ಎ.ಜೆ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್,
ಮಂಗಳೂರು

2015

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – 575 001

ಸ್ವಸಹಾಯ ಗುಂಪುಗಳಿಗೆ ಬ್ಯಾಂಕು ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ : ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ

ಎಂ.ಎಲ್ ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ಮಂಜುಶ್ರೀ.ಎಸ್.

ನೋಂದಣಿ ಸಂಖ್ಯೆ : 141111030064

ಮಾರ್ಗದರ್ಶಕರು

ಡಾ॥ ಎಸ್.ಗೋವಿಂದ ಭಟ್
ಪ್ರೊಫೆಸರ್,
ಎ.ಜೆ.ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್,
ಮಂಗಳೂರು

2015

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು – 575 001.

ಪ್ರಮಾಣಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ "ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳ ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ : ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ ಎಂಬ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನ ಫಲಶೃತಿಯಾಗಿದೆ. ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ॥ ಎಸ್.ಗೋವಿಂದ ಭಟ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕ : 18.08.2016

ಸ್ಥಳ : ಮಂಗಳೂರು

ಮಂಜುಶ್ರೀ.ಎಸ್
ಸಂಶೋಧಕರು.

ಯೋಗ್ಯತಾ ಪತ್ರ

ಮಂಜುಶ್ರೀ ಎಸ್. ರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕು ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ನಿಬಂಧವು ಸಂಶೋಧಕಿಯ ಸ್ವಂತ ಪರಿಶ್ರಮ, ಅಭಿಪ್ರಾಯ, ಸಂಗ್ರಹ, ಬೋಧನೆ, ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಪ್ರಬಂಧದ ವಿಷಯವನ್ನು ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಸಂಶೋಧನಾ ಮಾರ್ಗದರ್ಶಕರು,

ಡಾ॥ ಎಸ್.ಗೋವಿಂದ ಭಟ್

ಪ್ರೊಫೆಸರ್,

ಎ.ಜೆ.ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್,

ಮಂಗಳೂರು

ಕೋಷ್ಟಕಗಳ ವಿವರ

ಪರಿವಿಡಿ

ಅಧ್ಯಾಯ – 1

ಅಧ್ಯಯನ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – 1

ಪೀಠಿಕೆ :-

ಭಾರತದಲ್ಲಿ ಚಾರಿತ್ರಿಕ ಯಾತನೆಗೆ ಒಳಗಾಗಿರುವ ಅಂಚಿಗೆ ಸರಿಸಲ್ಪಟ್ಟ ಒಂದು ಪ್ರಧಾನ ಗುಂಪು ಎಂದರೆ ಮಹಿಳೆಯರು. ವಾಸ್ತವದಲ್ಲಿ ಇದೊಂದು ಲಿಂಗತ್ವ ಸಮಸ್ಯೆ. ಒಟ್ಟಾರೆಯಾಗಿ ಮಹಿಳಾ ಸಬಲೀಕರಣಕ್ಕೆ ನೀಡಲಾಗುತ್ತಿರುವ ಕರೆಗೆ ಕಾರಣವೆಂದರೆ, ಅವರಿಗೆ ಸ್ವಾಯತ್ತತೆಯನ್ನು ನೀಡುವುದು. ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಉತ್ತಮ ಪಡಿಸುವುದು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಅತ್ಯಗತ್ಯವಾಗಿದೆ. ಮಹಿಳೆಯ ಸ್ಥಾನಮಾನವು ನೇರವಾಗಿ ಆರ್ಥಿಕ ಮಟ್ಟವನ್ನು ಸಂಬಂಧಿಸಿದೆ. ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಹೆಚ್ಚು, ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಸೌಲಭ್ಯಗಳಿಂದ ವಂಚಿತರಾಗುತ್ತಾ ಬಡತನದ ಬೇಗೆಯಲ್ಲಿ ಬಳಲುತ್ತಾ ತುಳಿತಕ್ಕೊಳಗಾಗುತ್ತ ಬಂದಿದ್ದಾರೆ.

ದಕ್ಷಕಾರ್ಯಾಚರಣೆಯ ಮೂಲಕ ಬಡ ಮಹಿಳೆಯರನ್ನು, ಅದರಲ್ಲೂ ಗ್ರಾಮೀಣ ಮಹಿಳೆಯರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಸಂಘಟಿಸಿ ಅವರ ಏಳಿಗೆಯ, ಅಭಿವೃದ್ಧಿಯ ಉತ್ತಮ ಹಂತಗಳನ್ನು ತಲುಪಿಸುವುದು ಸ್ವ ಸಹಾಯ ಗುಂಪುಗಳ ಉದ್ದೇಶವಾಗಿದೆ. ಸ್ವಸಹಾಯ ಗುಂಪುಗಳನ್ನು ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಡ್ವಾಕ್ರಾ ಯೋಜನೆಗೆ ಬದಲಾಗಿ ಜಾರಿಗೊಳಿಸಲಾಯಿತು. ಈ ಸಂಘಟನೆಯು ಮಹಿಳೆಯರ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ.

ಸ್ವಸಹಾಯ ಗುಂಪುಗಳು ಮಹಿಳೆಯರನ್ನು ಸಂಘಟಿಸಿ ಹೆಚ್ಚು ಸಶಕ್ತರನ್ನಾಗಿಸಲು ಸಫಲವಾಗಿದೆ. ಸ್ವಸಹಾಯ ಗುಂಪುಗಳು ಗ್ರಾಮೀಣ ಬಡ ಜನರ ಮೇಲೆ ಧನಾತ್ಮಕ ಪರಿಣಾಮ ಬೀರಿದೆ. ಬ್ಯಾಂಕುಗಳ ಸೇವೆಗಳನ್ನು ಬಡ ಜನರಿಗೆ ಅದರಲ್ಲೂ ಮಹಿಳೆಯರಿಗೆ ಪರಿಚಯಿಸುವಲ್ಲಿ ಹಾಗೂ ಒದಗಿಸುವಲ್ಲಿ ಮತ್ತು ಅವರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಪ್ರೇರೇಪಿಸುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಸ್ವಸಹಾಯ ಸಂಘಗಳು ಶಕ್ತಿಯುತ ಸಾಧನವಾಗಿ ಕೆಲಸ ಮಾಡುತ್ತಿವೆ.

ಮಹಿಳೆ ಮತ್ತು ಸ್ವಸಹಾಯ ಗುಂಪು

2011 ಗಣತಿಯಂತೆ ನಮ್ಮ ದೇಶದಲ್ಲಿ 586.47 ಅಂದರೆ 48.46 ಪ್ರತಿಶತ ಸುಮಾರು ಅರ್ಧದಷ್ಟು ಮಹಿಳೆಯರು ಅದರಲ್ಲೂ ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಬಹುತೇಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಿನೆಲ್ಲಾ ಗ್ರಾಮೀಣ ಮಹಿಳೆಯರು ಬಲು ಹಿಂದಿನಿಂದಲೂ ಬಡತನದ ಬೇಗೆಯಲ್ಲಿ ಬಳಲುತ್ತಿದ್ದಾರೆ. ಮಾತ್ರವಲ್ಲ ಇವರಲ್ಲಿ ಹೆಚ್ಚಿನವರು ಅನಕ್ಷರಸ್ಥರು ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಗ್ರಾಮೀಣ ಮಹಿಳೆಯರಿಗೆ ತರಭೇತಿ ನೀಡಿ ಸಂಘಟಿತರನ್ನಾಗಿಸುವುದರ ಮೂಲಕ ಅವರನ್ನು ಹೆಚ್ಚು ಸಶಕ್ತರನ್ನಾಗಿಸಬಹುದು. ಎಲ್ಲಾ ವಿಧದ ಅಭಿವೃದ್ಧಿಗೆ ಆರ್ಥಿಕ ಅಭಿವೃದ್ಧಿ ಮುಖ್ಯವಾದುದು. ಗ್ರಾಮೀಣ ಕುಟುಂಬಗಳು ಅಥವಾ ಮಹಿಳೆಯರು ಉದ್ಯೋಗ, ಆಸ್ತಿ, ಶಿಕ್ಷಣ ಮತ್ತು ಕೌಶಲ್ಯದ ಕೊರತೆಯಿಂದ ಬಳಲುತ್ತಿದ್ದಾರೆ. ಇಂತಹ ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳು ಮಹತ್ತರ ಪಾತ್ರವಹಿಸುತ್ತದೆ. ಸ್ವಸಹಾಯ ಸಂಘಗಳು ಬಡತನ ನಿರ್ಮೂಲನೆ ಹಾಗೂ ತನ್ಮೂಲಕ ಮಹಿಳಾ ಸಬಲೀಕರಣ ಉದ್ದೇಶವನ್ನು ಹೊಂದಿದೆ. ಕಿರುಹಣಕಾಸು ಯೋಜನೆಯಡಿಯಲ್ಲಿ ಮಹಿಳೆಯರ ಸಬಲೀಕರಣ ಮತ್ತು ಬಡತನ ನಿರ್ಮೂಲನೆ ಹಾಗೂ ಇತರ ಸಮಾಜದ ಅಭಿವೃದ್ಧಿ ಕೆಲಸಗಳು ಸ್ವಸಹಾಯ ಸಂಘಗಳ ಮೂಲಕ ಆಗುತ್ತಾ ಇವೆ. ಸ್ವಸಹಾಯ ಗುಂಪುಗಳ ರಚನೆ ಮತ್ತು ಕಾರ್ಯನಿರ್ವಹಣೆ ಮಹಿಳೆಯರ ಅಥವಾ ದುರ್ಬಲ ವರ್ಗದವರನ್ನು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಸಂಘಟಿಸಿ ಅವರನ್ನು ಉನ್ನತ ಸ್ತರಕ್ಕೆ ತರುವಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಅದಲ್ಲದೆ ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳು ಮಹತ್ತರವಾದ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪೂರಕವಾಗಿ ಸ್ವಸಹಾಯಗಳಿಗೆ ಕೆಲವು ಬ್ಯಾಂಕುಗಳು ಆರ್ಥಿಕ ಸಹಾಯವನ್ನು ನೀಡುತ್ತವೆ.

ಸ್ವಸಹಾಯ ಗುಂಪು ಅಂದರೆ ಒಂದು ವಸತಿ ಸ್ಥಳದ ನಗರ ಹಾಗೂ ಹಳ್ಳಿ ಪ್ರದೇಶದ ಕನಿಷ್ಠ ಸದಸ್ಯರ ಗುಂಪೊಂದನ್ನು ರಚಿಸಿ ಅದರ ಸದಸ್ಯರ ಏಳಿಗೆಗಾಗಿ, ಆರ್ಥಿಕ ಬೆಳವಣಿಗೆಗಾಗಿ ಮತ್ತು ಸಾಮಾಜಿಕ ಬದಲಾವಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಒಂದು ಸಂಘಟನೆಯಾಗಿದೆ. ಸ್ವಸಹಾಯ ಗುಂಪುಗಳು ಪರಸ್ಪರ ಹೊಂದಾಣಿಕೆ ಸಹಾಯ ಮಾಡುತ್ತಾ ಉಳಿತಾಯ ಮನೋವೃತ್ತಿ ಹೊಂದಿದ ಜನರ ಒಂದು ಗುಂಪಾಗಿದೆ.

ಕಿರು ಹಣಕಾಸು, ಸ್ವ ಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಈ ಮೂರು ಪರಿಕಲ್ಪನೆ ನಮ್ಮ ದೇಶದಲ್ಲಿ ಹಳ್ಳಿಗಳ ಸರ್ವಾಂಗೀಣ ಬೆಳವಣಿಗೆಯ ದ್ಯೋತಕವಾಗಿ ಪರಿಣಮಿಸಿದೆ. ಇಂದಿನ ಜಾಗತೀಕರಣದ ಯುಗದಲ್ಲಿ ಗ್ರಾಮೀಣ ಪ್ರದೇಶಗಳು ಸಮಗ್ರವಾಗಿ ಯಶಸ್ಸಿನ ಪಥದಲ್ಲಿ ಸಾಗುವಲ್ಲಿ ಈ ಮೇಲೆ ಗುರುತಿಸಿದ ಮೂರು ಸಂಗತಿಗಳು ನಿರ್ಣಾಯಕ ಪಾತ್ರ ವಹಿಸುತ್ತದೆ.

ಸ್ವಸಹಾಯ ಗುಂಪು ರಚನೆಯ ಉದ್ದೇಶಗಳು

- ಉಳಿತಾಯ ಭಾವನೆಯನ್ನು ಜನರಲ್ಲಿ ಹೆಚ್ಚಿಸುವುದು.
- ಸಾಲವನ್ನು ದೊರಕಿಸಿ ಕೊಡುವುದು.
- ಪರಸ್ಪರ ಗುಂಪುಗಳಲ್ಲಿ ಸಹಭಾಗಿತ್ವ ಮೂಡಿಸುವುದು.
- ಸಹಕಾರದಿಂದ ಆರ್ಥಿಕ ಉನ್ನತಿಯನ್ನು ಸಾಧಿಸುವುದು.
- ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವುದು.
- ಸದಸ್ಯರಲ್ಲಿ ನಾಯಕತ್ವದ ಗುಣಗಳನ್ನು ಮೂಡಿಸುವುದು.
- ಸದಸ್ಯರ ಸರ್ವತೋಮುಖ ಅಭಿವೃದ್ಧಿ ಪಡಿಸುವುದು.

ಸ್ವಸಹಾಯ ಗುಂಪುಗಳು ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸ್ಥಾನಮಾನವನ್ನು ಸಮಾಜದಲ್ಲಿ ಹೆಚ್ಚಿಸಲು ಮತ್ತು ಅವರನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡಲು ಆರ್ಥಿಕ ಸಹಾಯವನ್ನು ನೀಡುವುದರ ಮೂಲಕ ಅವರಲ್ಲಿ ಧೈರ್ಯ ಕೌಶಲ್ಯಗಳನ್ನು ತುಂಬಿಸುವ ಕೆಲಸ ಮಾಡುತ್ತಿವೆ. ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಯೊಂದಿಗೆ ವ್ಯಾಪಾರ, ಕಿರು ಹಣಕಾಸಿನ ವ್ಯವಹಾರ ಸಂಘಟನೆ ಲೆಕ್ಕಪತ್ರ ಇಟ್ಟುಕೊಳ್ಳುವ ರೀತಿ ಇದರ ಮೂಲಕ ಗ್ರಾಮೀಣ ಮಹಿಳೆಯರಿಗೆ ಸಿಗುವ ವ್ಯಾವಹಾರಿಕ ಜ್ಞಾನ, ಇದರಿಂದ ಅವರಿಗೆ ಸಿಗುವ ಆತ್ಮಸ್ಥೈರ್ಯ ಅವರ ಜೀವನ ಕ್ರಮವನ್ನೇ ಬದಲಾಯಿಸಿದೆ. ಸ್ವಸಹಾಯ ಗುಂಪಿನ ಯಶಸ್ಸು ಗ್ರಾಮೀಣ ಮಹಿಳೆಯರ ಪಾಲಿಗೆ ಹೊಸ ಶಕ್ತಿಯನ್ನು ಸೃಷ್ಟಿಸಿದೆ. ಸ್ವಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೌಶಲ್ಯವೃದ್ಧಿ ಆದಾಯ ತರುವಂತಹ ಚಟುವಟಿಕೆಗಳು ಮತ್ತು ಹಣಕಾಸಿನ ಸಹಾಯ ಇವುಗಳ ಮುಖಾಂತರ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಸಹಕರಿಸಿದೆ.

ಸ್ವಸಹಾಯ ಸಂಘಗಳ ರಚನೆಯ ಹಂತದಲ್ಲಿಯೇ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬ್ಯಾಂಕುಗಳೊಂದಿಗೆ ಸಂಬಂಧ ಕಲ್ಪಿಸಲು ಕ್ರಮಕೈಗೊಳ್ಳಲಾಗುತ್ತದೆ. ಗುಂಪುಗಳು ತಮ್ಮ ಹಣವನ್ನು ಬ್ಯಾಂಕುಗಳಲ್ಲಿ ಜಮಾ ಮಾಡಬೇಕಾಗುತ್ತದೆ. ಗುಂಪುಗಳು ತಮ್ಮ ಉಳಿತಾಯದಲ್ಲಿ ಮೊದಲು ಆಂತರಿಕ ಸಾಲ ಪಡೆಯುವುದು ಮತ್ತು ಮರುಪಾವತಿ ಮಾಡುವ ರೂಢಿಯು ಮುಂದುವರಿದಲ್ಲಿ ಅವುಗಳ ಮೌಲ್ಯಮಾಪನ ಮಾಡಿ ಬ್ಯಾಂಕುಗಳಿಂದ ಸಾಲದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು. ಸಾಮಾನ್ಯವಾಗಿ ಬ್ಯಾಂಕಿನವರು ನೇರವಾಗಿ ಸ್ವಸಹಾಯ ಗುಂಪುಗಳಿಗೆ ನೆರವು ಒದಗಿಸುವ ಅಂಶ ಹೆಚ್ಚು ಪ್ರಚಲಿತವಾಗಿದೆ. ಬ್ಯಾಂಕು ಸ್ವಸಹಾಯ ಗುಂಪಿಗೆ ನೀಡಿದ ಸಾಲವನ್ನು ಆ ಸ್ವಸಹಾಯ ಗುಂಪು ತನ್ನ ಸದಸ್ಯರಿಗೆ ವಿತರಿಸುವ ಕ್ರಮ ಕೈಗೊಳ್ಳುತ್ತದೆ.

ಬ್ಯಾಂಕುಗಳೊಂದಿಗೆ ಸಂಪರ್ಕ ಕಲ್ಪಿಸಲು ಸ್ವಸಹಾಯ ಗುಂಪು ಸಾಮಾನ್ಯವಾಗಿ ಕಡೆಯ ಪಕ್ಷ ಆರು ತಿಂಗಳಿಂದ ಸಮರ್ಪಕವಾಗಿ ಮತ್ತು ಪಾರದರ್ಶಕವಾಗಿ ಕಾರ್ಯ ನಿರ್ವಹಿಸುತ್ತಿರಬೇಕು. ಗುಂಪುಗಳು ಕ್ರಮಬದ್ಧ ಉಳಿತಾಯ ಮತ್ತು ಸಾಲ ನಿರ್ವಹಣೆಯಲ್ಲಿ ತೊಡಗಿದ್ದು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರಬೇಕು. ಗುಂಪುಗಳು ಸರಿಯಾಗಿ ಲೆಕ್ಕಪತ್ರಗಳು, ದಾಖಲೆಗಳನ್ನು ನಿರ್ವಹಿಸುತ್ತಿರಬೇಕು. ಗುಂಪು ತನ್ನ ಮೂಲ ಉದ್ದೇಶವಾದ ಪರಸ್ಪರ ಸಹಾಯ ಹಾಗೂ ಒಗ್ಗಟ್ಟನ್ನು ಪ್ರತಿಬಿಂಬಿಸುವಂತಿರಬೇಕು.

ಸಂಶೋಧನಾ ಸಮಸ್ಯೀಕರಣ :

ಪ್ರಸಕ್ತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸ್ವ ಸಹಾಯ ಸಂಘಗಳ ಕುರಿತಾಗಿದೆ. ಇದರಲ್ಲಿ ಸ್ವಸಹಾಯ ಗುಂಪುಗಳ ಕಾರ್ಯವಿಧಾನ ಹಾಗೂ ಇದರ ಮಹಿಳಾ ಸದಸ್ಯರ ಸಬಲೀಕರಣದಲ್ಲಿ ಬಂಟ್ವಾಳ ತಾಲೂಕಿನ ಸ್ವ ಸಹಾಯ ಗುಂಪುಗಳ ಪಾತ್ರ ಕುರಿತು ಅಧ್ಯಯನವನ್ನು ಯೋಜಿಸಲಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಹತ್ತು ಹಲವು ಯೋಜನೆಗಳು ಮಹಿಳಾ ಸದಸ್ಯರ ಸಬಲೀಕರಣದಲ್ಲಿ ಎಷ್ಟರ ಮಟ್ಟಿಗೆ ಸಫಲವಾಗಿದೆ ಎನ್ನುವುದನ್ನು ದತ್ತಾಂಶಗಳ ಮೂಲಕ ವಿಶ್ಲೇಷಿಸುವುದು.

ಅಧ್ಯಯನದ ಮಹತ್ವ

ಇತ್ತೀಚಿನ ದಿನಗಳಲ್ಲಿ ಸ್ವ ಸಹಾಯ ಗುಂಪು ಮಹಿಳಾ ಸಬಲೀಕರಣ, ಕಿರು ಹಣಕಾಸು ಯೋಜನೆ ಇವುಗಳೆಲ್ಲ ಬಹು ಚರ್ಚಿತ ವಿಷಯಗಳಾಗಿವೆ. ಅದರಲ್ಲೂ ಶ್ರೀ ಕ್ಷೇತ್ರ ಧರ್ಮಸ್ಥಳ ಪ್ರಾಯೋಜಿತ ಸ್ವಸಹಾಯ ಗುಂಪುಗಳು ಹಳ್ಳಿಯ ಕೆಲಸಗಳಲ್ಲಿ ಮಹಿಳೆಯರಿಗೆ ಹಾಗೂ ಇತರ ಸದಸ್ಯರಿಗೆ ಒಂದು ವರವಾಗಿ ಪರಿಣಮಿಸಿದೆ ಎಂದು ಹೇಳಲಾಗುತ್ತಿದೆ. ಈ ಸದಸ್ಯರ ಕೆಲಸದ ರೀತಿಯಲ್ಲಿ, ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಯನ್ನೇ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸ್ವ ಸಹಾಯ ಗುಂಪುಗಳು ಹಾಗೂ ಮಹಿಳಾ ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಧ್ಯಯನ ಪ್ರಾಮುಖ್ಯತೆ ಪಡೆಯುತ್ತದೆ. ಈ ಅಧ್ಯಯನವು ಸ್ವ ಸಹಾಯ ಗುಂಪುಗಳ ಹಿಂದಿನ ಕಾರ್ಯ ವಿಧಾನಗಳನ್ನು ವಿಮರ್ಶಿಸಲು ಸಹಾಯವಾಗುವುದಲ್ಲದೆ, ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲು ಅಥವಾ ಪ್ರಸಕ್ತ ಯೋಜನೆಗಳನ್ನು ಉತ್ತಮಗೊಳಿಸಲು, ಹಾಗೂ ಯೋಜನೆಗಳಲ್ಲಿನ ಲೋಪದೋಷಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದರಿಂದ ಸದಸ್ಯರಿಗೂ ಅನುಕೂಲವಾಗುವುದು. ಈ ಹಿನ್ನೆಲೆಯಲ್ಲಿ ಸದ್ರಿ ಅಧ್ಯಯನವು ಪ್ರಾಮುಖ್ಯವಾಗುತ್ತದೆ.

ಬಂಟ್ವಾಳ ತಾಲೂಕಿನ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಯಾವ ರೀತಿ ಸಹಕಾರ ನೀಡಿವೆ ಎಂಬುದನ್ನು ಈ ಅಧ್ಯಯನವು ತಿಳಿಯಲು ಸಹಾಯ ಮಾಡುತ್ತದೆ. ಇದರ ಮೂಲಕ ಸ್ವಸಹಾಯ ಗುಂಪುಗಳ ಗುಣಮಟ್ಟ ಹೆಚ್ಚಿಸಲು ಪ್ರಯತ್ನಿಸಬಹುದು. ಅದಲ್ಲದೆ ಕೆಲವು ಯೋಜನೆಗಳನ್ನು ಗುಂಪುಗಳ ಉನ್ನತಿಗಾಗಿ ಕೈಗೊಳ್ಳಬಹುದು.

ಅಧ್ಯಯನದ ಉದ್ದೇಶಗಳು :

ಪ್ರಸಕ್ತ ಅಧ್ಯಯನದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ :

- ಸ್ವಸಹಾಯ ಸಂಘದ ಮಹಿಳಾ ಸದಸ್ಯರ ಸಮಸ್ಯೆಗಳೇನು ಎಂಬುವುದನ್ನು ತಿಳಿಯುವುದು.
- ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಲ್ಲಿ ಸ್ವ ಸಹಾಯ ಗುಂಪುಗಳ ಪಾತ್ರವನ್ನು ತಿಳಿಯುವುದು.
- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಬಂಟ್ವಾಳ ಇದರ ರಚನೆ ಮತ್ತು ಕಾರ್ಯವಿಧಾನ ತಿಳಿಯುವುದು.
- ಸ್ವಸಹಾಯ ಗುಂಪುಗಳಿಂದ ಮಹಿಳಾ ಸಬಲೀಕರಣವಾಗಿದೆಯೇ ಎಂದು ಪರಿಶೀಲಿಸುವುದು.
- ಸ್ವಸಹಾಯ ಸಂಘದ ಅಭಿವೃದ್ಧಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡುವುದು.

ಪ್ರಸಕ್ತ ಅಧ್ಯಯನದ ತೊಡಕುಗಳು

ಈ ಅಧ್ಯಯನವು ಕೆಲವು ತೊಡಕುಗಳಿಂದ ಹೊರತಾಗಿಲ್ಲ. ಅಧ್ಯಯನದ ತೊಡಕುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧) ಈ ಅಧ್ಯಯನ ಕ್ಷೇತ್ರವು ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿಗೆ ಸೀಮಿತವಾಗಿದೆ. ಆದುದರಿಂದ ಅಧ್ಯಯನದ ಫಲಿತಾಂಶವನ್ನು ಇತರೆ ಕ್ಷೇತ್ರಗಳಿಗೆ ಅನ್ವಯಿಸಲಾಗುವುದಿಲ್ಲ.

೨) ಒಂದು ವರ್ಷದ ನಿಗಧಿತ ಅವಧಿಯ ಕಾರಣದಿಂದ ಅಧ್ಯಯನವನ್ನು ಒಂದು ಸ್ವಸಹಾಯ ಗುಂಪು ಹಾಗೂ ನೂರು ಸದಸ್ಯರ ಅಧ್ಯಯನಕ್ಕೆ ಮಿತಿಗೊಳಿಸಲಾಗಿದೆ. ಆದುದರಿಂದ ಅಧ್ಯಯನದ ಫಲಿತಾಂಶವನ್ನು ಇತರ ಸ್ವ ಸಹಾಯ ಗುಂಪು ಹಾಗೂ ಸದಸ್ಯರಿಗೆ ಅನ್ವಯಿಸಲಾಗುವುದಿಲ್ಲ.

೩) ಅಧ್ಯಯನವನ್ನು ಮಹಿಳಾ ಸದಸ್ಯರಿಗಷ್ಟೇ ಸೀಮಿತಗೊಳಿಸಿರುವುದರಿಂದ ಫಲಿತಾಂಶವು ಪುರುಷ ಸದಸ್ಯ ಅಧ್ಯಯನದ ಹೊರತಾಗಿದೆ. ಅಂತೆಯೇ ಇದು ಎಲ್ಲಾ ವರ್ಗದ ಸದಸ್ಯರನ್ನು ಪ್ರತಿನಿಧಿಸುವುದಿಲ್ಲ.

4) ಈ ಅಧ್ಯಯನವು ಹಣಕಾಸಿನ ವಿಷಯವನ್ನು ಒಳಗೊಂಡಿರುವುದರಿಂದ ಸದಸ್ಯರು ಪ್ರಶ್ನಾವಳಿಯ ಎಲ್ಲಾ ಪ್ರಶ್ನೆಗಳಿಗೆ ಮುಕ್ತವಾಗಿ ಮಾಹಿತಿ ನೀಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಇಂತಹ ಸಂಶಯ ಪ್ರವೃತ್ತಿಯು ಅಧ್ಯಯನದ ಮೇಲೆ ಸ್ವಲ್ಪ ಮಟ್ಟಿನ ಪರಿಣಾಮ ಬೀರುವ ಸಾಧ್ಯತೆ ಇದೆ.

ದತ್ತಾಂಶಗಳ ಆಕರ

ಮುಖ್ಯವಾಗಿ ಯಾವುದೇ ಒಂದು ಅಧ್ಯಯನವನ್ನು ನಡೆಸಲು ಎರಡು ವಿಧಗಳಿಂದ ನಾವು ಮಾಹಿತಿಯನ್ನು ಸಂಗ್ರಹಿಸುತ್ತೇವೆ. ಸ್ವಸಹಾಯ ಗುಂಪುಗಳಿಗೆ ಬ್ಯಾಂಕು ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ ಎಂಬ ಅಧ್ಯಯನಕ್ಕೂ ಎರಡೂ ವಿಧಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

- ಪ್ರಾಥಮಿಕ ಮೂಲಗಳು
- ಅನುಷಂಗಿಕ ಮೂಲಗಳು

ಪ್ರಾಥಮಿಕ ಮೂಲಗಳೆಂದರೆ ನಮ್ಮ ಅಧ್ಯಯನಕ್ಕೆ ಪಡೆಯುವ ಪ್ರತ್ಯಕ್ಷ ಮಾಹಿತಿಗಳು ಉದಾಹರಣೆಗೆ ನೇರ ಸಂದರ್ಶನ ಮಾಹಿತಿ, ವಿಶ್ಲೇಷಣೆ, ಪ್ರಶ್ನಾವಳಿ, ಗುಂಪುಚರ್ಚೆ, ಗಮನಿಸುವುದು ಇತ್ಯಾದಿ.

ಅನುಷಂಗಿಕ ಮೂಲಗಳೆಂದರೆ ನಾವು ಪರೋಕ್ಷವಾಗಿ ಪಡೆಯುವ ಮಾಹಿತಿಗಳು ಉದಾಹರಣೆಗೆ ವಾರ್ತಾಪತ್ರಿಕೆಗಳು, ಇಂಟರ್‌ನೆಟ್ ಸಂಶೋಧನ ಪ್ರಬಂಧಗಳು, ಗ್ರಂಥಗಳು ಹಾಗೂ ಇನ್ನೂ ಹಲವು ಮೂಲಗಳು.

ಈಗಾಗಲೇ ತಿಳಿಸಿದ ಸಂಶೋಧನ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಪಟ್ಟಿ ಮಾಡುವಿಕೆ, ಸೂಚಿಕರಣ ಮತ್ತು ಸಂಖ್ಯಾ ಶಾಸ್ತ್ರೀಯ ವಿಧಾನಗಳ ಬಳಕೆಯ ಮೂಲಕ ಮಾಹಿತಿಯನ್ನು ವಿಶ್ಲೇಷಿಸಿ ವರದಿ ತಯಾರಿಸಲಾಗಿದೆ.

ಸಂಶೋಧನಾ ವ್ಯಾಪ್ತಿ

ಈ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಒಂದು ಸ್ವಸಹಾಯ ಗುಂಪಿಗೆ ಮಿತಗೊಳಿಸಲಾಗಿದೆ. ಅಧ್ಯಯನ ನೂರು ಮಹಿಳಾ ಸದಸ್ಯರಿಗೆ ಸೀಮಿತಗೊಳಿಸಲಾಗಿದೆ. 2014–15ನೇ ಶೈಕ್ಷಣಿಕ ವರ್ಷವನ್ನು ಸಂಶೋಧನ ಅವಧಿಯಾಗಿ ತೆಗೆದುಕೊಳ್ಳಲಾಗಿದೆ. ಅಧ್ಯಯನದಲ್ಲಿ ಮಹಿಳೆಯರ ಸಬಲೀಕರಣದ ಬಗ್ಗೆ ಒತ್ತು ಕೊಡಲಾಗಿದೆ.

ಅಧ್ಯಾಯಗಳು

ಈ ಸಂಶೋಧನ ಅಧ್ಯಯನವನ್ನು ಐದು ಮುಖ್ಯ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪೀಠಿಕೆ, ಉದ್ದೇಶಗಳು, ಸಮಸ್ಯೀಕರಣ, ಅಧ್ಯಯನದ ತೊಡಕುಗಳು, ಇತಿಮಿತಿಗಳ ಬಗ್ಗೆ ವಿವರಣೆ ನೀಡಲಾಗಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶ ಮತ್ತು ಸಾಹಿತ್ಯ ಪರಾಮರ್ಶೆಯನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರವನ್ನು ಸವಿವರವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕೈಗೊಂಡ ಪ್ರದೇಶದಲ್ಲಿ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆ, ಮಾಹಿತಿ ಸಂಗ್ರಹಣೆಯ ವಿಧಾನದ ಬಗ್ಗೆ ವಿವರಿಸಲಾಗಿದೆ.

ಐದನೇಯ ಅಧ್ಯಯನದಲ್ಲಿ ಸಂಶೋಧನ ಫಲಿತಗಳನ್ನು ಮತ್ತು ಸೂಚನೆಗಳನ್ನು ಕೊಡಲಾಗಿದೆ. ಸಂಪ್ರಬಂಧದ ಕೊನೆಯಲ್ಲಿ ಪರಾಮರ್ಶನಾ ಗ್ರಂಥಗಳನ್ನು ತಿಳಿಸಲಾಗಿದೆ.

ಅಧ್ಯಾಯ – 2

ಅಧ್ಯಯನ ಪ್ರದೇಶ ಮತ್ತು ಸಾಹಿತ್ಯ ಪರಾಮರ್ಶೆ

ಅಧ್ಯಾಯ-2

ಅಧ್ಯಯನ ಪ್ರದೇಶ

ಮಹಿಳೆ ಮತ್ತು ಸ್ವ ಸಹಾಯ ಗುಂಪುಗಳ ಅಧ್ಯಯನದ ಮಹತ್ವ, ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ವ್ಯಾಪ್ತಿ ಮತ್ತು ಸಂಶೋಧನಾ ಅಧ್ಯಾಯಗಳ ಬಗ್ಗೆ ಅಧ್ಯಾಯ ಒಂದರಲ್ಲಿ ಚರ್ಚಿಸಿದ್ದು, ಇದೀಗ ಎರಡನೇ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶವಾದ ನಮ್ಮ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಬಗ್ಗೆ ವಿವರಿಸಲಾಗಿದೆ.

ಕರ್ನಾಟಕ : ಕರ್ನಾಟಕ ಒಂದು ಸಂಪದ್ಭರಿತ ಪರಂಪರೆಯನ್ನು ಹೊಂದಿದ್ದು. ಅದರ ಪ್ರಾಕೃತಿಕ ಸಂಪತ್ತು ಉಜ್ವಲ ಭವಿಷ್ಯವನ್ನು ರೂಪಿಸಲು ಜನತೆಯನ್ನು ಹುರಿದುಂಬಿಸುತ್ತದೆ. ಅದರ ವಿಶೇಷ ಭೌಗೋಳಿಕ ಸನ್ನಿವೇಶ ಸಂಪತ್ತು ವೈವಿಧ್ಯಕ್ಕೆ ಕೈಗಾರಿಕಾ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ. ಇದು ಭಾರತದ ದಕ್ಷಿಣದ ರಾಜ್ಯಗಳಲ್ಲಿ ಒಂದಾಗಿದೆ. ಸುಮಾರು 2000 ವರ್ಷಗಳ ಹಿಂದಿನಿಂದಲೂ ಕರ್ನಾಟಕ ಎಂಬ ಪದ ಬಳಕೆಯಲ್ಲಿರುವುದು ತಿಳಿದು ಬರುತ್ತದೆ. ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶವನ್ನು ಒಟ್ಟುಗೂಡಿಸಿ ಕರ್ನಾಟಕ ರಾಜ್ಯವನ್ನಾಗಿ ಗುರುತಿಸಲಾಗುತ್ತದೆ. ಭಾರತದ ದಕ್ಷಿಣ ಕನ್ನಡ ಪ್ರಸ್ಥಭೂಮಿ ಎನಿಸಿರುವ ಕರ್ನಾಟಕ ಅನೇಕ ಶತಮಾನಗಳ ಇತಿಹಾಸವನ್ನು ಹೊಂದಿದೆ. ಕರ್ನಾಟಕವು ತನ್ನದೇ ಆದ ವಿಶಿಷ್ಟ ಸನ್ನಿವೇಶ, ಭೂ ಸ್ವರೂಪ, ವಿವಿಧ ಪ್ರಾಣಿಸಂಕುಲ, ಉತ್ಕೃಷ್ಟವಾದ ಮಣ್ಣು, ಜಲ ಸಂಪನ್ಮೂಲ, ಖನಿಜ ಸಂಪತ್ತು, ಸಾರಿಗೆ ಸಂಪರ್ಕ, ಮಾಧ್ಯಮಗಳು, ರಾಜಕೀಯ, ಸಾಮಾಜಿಕ, ಆರ್ಥಿಕ ಕೈಗಾರಿಕೆ ಮತ್ತು ಸಾಂಸ್ಕೃತಿಕ ಬೆಳವಣಿಗೆ ಹಾಗೂ ವೃತ್ತಿಪರ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ, ವಾಯುವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ಪೂರ್ವದಲ್ಲಿ ಆಂಧ್ರಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡಿನಿಂದ, ನೈರುತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು 20 ಜಿಲ್ಲೆಗಳನ್ನು, ತಾಲೂಕುಗಳನ್ನು 228 ಪಟ್ಟಣಗಳನ್ನು, 27,880 ಕ್ಕೂ ಹೆಚ್ಚು ಹಳ್ಳಿಗಳನ್ನು ಒಳಗೊಂಡಿದೆ. ಇದು ಭಾರತದ ಪರ್ಯಾಯ ದ್ವೀಪದ ಪಶ್ಚಿಮದ ಮಧ್ಯ ಭಾಗದಲ್ಲಿದೆ.

ದಕ್ಷಿಣ ಕನ್ನಡ : ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕ ರಾಜ್ಯದ ಒಂದು ಭಾಗವಾಗಿದ್ದು, ಪರಶುರಾಮ ಸೃಷ್ಟಿಸಿದ ನಾಡೆಂದು ಹೆಸರುವಾಸಿಯಾಗಿದೆ. ಈ ನಾಡಿನ ಉಗಮದ ಬಗ್ಗೆ ತನ್ನದೇ ಆದ ವಿಸ್ತಾರವಾದ ಚರಿತ್ರೆಯನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಕಡಲ ಕಿನಾರೆಯನ್ನು ಹೊಂದಿದ ಜಿಲ್ಲೆಗಳ ಪೈಕಿ ಒಂದಾಗಿದ್ದು, ಜಿಲ್ಲೆಯು ಸುಮಾರು 60 ಕಿ.ಮೀ. ಉದ್ದದ ಅರಬ್ಬೀ ಸಮುದ್ರದ ಕಡಲತೀರವನ್ನು ಹೊಂದಿದೆ. ಜಿಲ್ಲೆಯು ಪರಶುರಾಮನ ನಾಡೆಂದೇ ಪ್ರಖ್ಯಾತವಾಗಿದ್ದು, ತನ್ನದೇ ಆದ ಇತಿಹಾಸವನ್ನು ಹೊಂದಿದೆ. 1650 ರಲ್ಲಿ ಈ ಜಿಲ್ಲೆಯು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಆನಂತರ 1763 ರಲ್ಲಿ ಹೈದರಾಲಿಯು ಮೈಸೂರು ರಾಜ್ಯಕ್ಕೆ ಈ ಜಿಲ್ಲೆಯನ್ನು ಸೇರಿಸಿದನು. ಆ ಬಳಿಕ ಆತನ ಮಗನಾದ ಟಿಪ್ಪು ಸುಲ್ತಾನನು ಈ ಜಿಲ್ಲೆಯನ್ನು ಆಳುತ್ತಿದ್ದು, 1799 ರ ಮೈಸೂರು ಕದನದ ಬಳಿಕ ಇದು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಯಿತು. ಸ್ವಾತಂತ್ರ್ಯ ನಂತರ 1956 ರಲ್ಲಿ ಭಾಷಾವಾರು ಪ್ರಾಂತ್ಯದ ರಚನೆಯ ಬಳಿಕ ಇದು ಕರ್ನಾಟಕದ 20 ಜಿಲ್ಲೆಗಳಲ್ಲಿ ಒಂದಾಗಿ ಅಸ್ತಿತ್ವಕ್ಕೆ ಬಂತು. 1997 ರಲ್ಲಿ ಜಿಲ್ಲೆಯು ವಿಭಜಿಸಲ್ಪಟ್ಟು ಪ್ರತ್ಯೇಕ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಾಗಿ ರೂಪುಗೊಂಡಿತು. ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆ. ದಕ್ಷಿಣದಲ್ಲಿ ಕೊಡಗು ಜಿಲ್ಲೆ ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ, ಉತ್ತರದಲ್ಲಿ ಉಡುಪಿ ಜಿಲ್ಲೆಗಳಿವೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರವಿದೆ.

ಬಂಟ್ವಾಳ :

ಬಂಟ್ವಾಳವು ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75 ತಾಲೂಕು ಕೇಂದ್ರದ ಮೂಲಕವೇ ಹಾದು ಹೋಗುವ ಜಿಲ್ಲೆ. ರಾಜ್ಯ , ರಾಷ್ಟ್ರೀಯ ಸಂಪರ್ಕ ಕೊಂಡಿಯಾಗಿದೆ. ಬಂಟ್ವಾಳ ತಾಲೂಕು ಅಕ್ಟೋಬರ್ 1–1959 ರಲ್ಲಿ ಅಧಿಕೃತವಾಗಿ ಘೋಷಿತವಾಯಿತು. ಪಾಣೆಮಂಗಳೂರು, ವಿಟ್ಲ ಫಿರ್ಕಗಳಲ್ಲಿ 81 ಗ್ರಾಮಗಳು ಆಗ ಅಸ್ತಿತ್ವಕ್ಕೆ ಬಂದಿದ್ದವು. ಬಂಟ್ವಾಳ ಮತ್ತು ಪಾಣೆಮಂಗಳೂರು ಇತಿಹಾಸದ ಕಾಲದಿಂದಲೂ ಮಹತ್ವಪೂರ್ಣ ಎರಡು ಊರುಗಳು. ಆದರೆ ಬಂಟ್ವಾಳ ಬೈಪಾಸ್ ಮತ್ತು ಪಾಣೆಮಂಗಳೂರು ಬೈಪಾಸ್ ರಸ್ತೆಗಳು ಆದ ಬಳಿಕ ಎರಡು ನಗರಗಳ ಮಹತ್ವ ಕಡಿಮೆಯಾಗಿ ಬಿ.ಸಿರೋಡ್(ಬಂಟ್ವಾಳ ಕ್ರಾಸ್ ರೋಡ್) ಮಹತ್ವವನ್ನು ಪಡೆದಿದೆ.

ಭೌಗೋಳಿಕ ಲಕ್ಷಣ

ಬಂಟ್ವಾಳ ತಾಲೂಕು ದ. ಕ ಜಿಲ್ಲೆಯ ಭೌಗೋಳಿಕ ಕೇಂದ್ರ ಸ್ಥಾನದಲ್ಲಿದೆ. ಬೆಳ್ತಂಗಡಿ, ಪುತ್ತೂರು, ಮಂಗಳೂರು ತಾಲೂಕಿನಿಂದ ಆವರಿಸಲ್ಪಟ್ಟ ಬಂಟ್ವಾಳ ತಾಲೂಕು 71,758 ಹೆಕ್ಟೇರ್ ವಿಸ್ತೀರ್ಣ ಹೊಂದಿದೆ.

ವಾರ್ಷಿಕ ಸರಾಸರಿ 3773 ಮಿ.ಮೀ ಮಳೆಯನ್ನು ಪಡೆಯುತ್ತದೆ. ಮಂಗಳೂರಿನಿಂದ ಪೂರ್ವಕ್ಕೆ 25ಕಿ.ಮೀ ಅಂತರದಲ್ಲಿದೆ. ಬಂಟ್ವಾಳ ತಾಲೂಕು 12–53'46' ಉತ್ತರ ಅಕ್ಷಾಂಶ ಹಾಗೂ 75–02'–27' ಪೂರ್ವ ರೇಖಾಂಶದ ನಡುವೆ ಇದೆ. ಬಂಟ್ವಾಳ ತಾಲೂಕು ಸಮುದ್ರ ಮಟ್ಟಕಿಂತ 21 ಅಡಿ ಎತ್ತರದಲ್ಲಿದೆ. ನೇತ್ರಾವತಿಯ ಮಡಿಲಲ್ಲಿರುವ ನಿಸರ್ಗ ಸೌಂದರ್ಯದ ಫಲವಂತಿಕೆಯ ಆಯಕಟ್ಟಿನ ಪ್ರದೇಶವಾದ ಬಂಟ್ವಾಳದ ಮೂಲಕವೇ ಅವಿಭಜಿತ ದಕ್ಷಿಣ ಕನ್ನಡ ಅಂದರೆ ಕರ್ನಾಟಕದ ಕರಾವಳಿಯೂ ರಾಜ್ಯದ ರಾಜಧಾನಿ ಬೆಂಗಳೂರು ಮುಂತಾದ ಕಡೆಗೆ ಹೆದ್ದಾರಿಯ ಮೂಲಕ ಸಂಪರ್ಕ ಪಡೆಯಿತು.

ಜನಸಂಖ್ಯೆ

2011 ರ ಜನಸಂಖ್ಯೆ ಸಮೀಕ್ಷೆ ಪ್ರಕಾರ ಒಟ್ಟು 54563 ಕುಟುಂಬಗಳು 1,38,959 ಪುರುಷರು, 1,40,523 ಮಹಿಳೆಯರಿದ್ದಾರೆ. ಒಟ್ಟು 2,79,482 ಜನಸಂಖ್ಯೆ ಹೊಂದಿದೆ. 1852ಕ್ಕೆ ಮೊದಲು ಕೆನರಾ ಪ್ರಾಂತ್ಯದ ಅತೀದೊಡ್ಡ ತಾಲೂಕು ಎಂಬ ಗೌರವಕ್ಕೆ ಬಂಟ್ವಾಳ ಪಾತ್ರವಾಗಿತ್ತು ಆ ಕಾಲದಲ್ಲಿ ತಾಲೂಕಿನಲ್ಲಿ ಸುಮಾರು 411 ಹಳ್ಳಿಗಳಿದ್ದವು. ಆಗಿನ ಜನಸಂಖ್ಯೆ 1,69,416 ಆಗಿತ್ತು.

ಉದ್ಯಮ ಕೈಗಾರಿಕೆ

ಬಂಟ್ವಾಳ ವಾಣಿಜ್ಯ ಉದ್ಯಮಕ್ಕೆ ಸಂಬಂದಿಸಿದಂತೆ ಸ್ವಾತಂತ್ರ್ಯ ಪೂರ್ವದಿಂದಲೇ ಹೆಸರುವಾಸಿಯಾಗಿತ್ತು. ಬಂಟ್ವಾಳ ತಾಲೂಕು ಸಾಮಾಜಿಕವಾಗಿ ಮಾತ್ರವಲ್ಲದೆ ಕೃಷಿ, ಉದ್ಯಮ, ಕೈಗಾರಿಕಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದೆ. ಸ್ವರ್ಣೋದ್ಯಮಕ್ಕೆ ಬಂಟ್ವಾಳ ಹೆಸರುವಾಸಿ. ಜನಸಾಮಾನ್ಯರು ಬಹುತೇಕ ಕೃಷಿಯನ್ನು ಅದರಲ್ಲೂ ವಾಣಿಜ್ಯ ಕೃಷಿ ಅಡಿಕೆ ತೆಂಗನ್ನೂ ಅವಲಂಭಿಸಿದ್ದಾರೆ.

ಉದ್ದಿಮೆಯ ಕ್ಷೇತ್ರವಾಗಿ ಗಮನಿಸಿದರೆ ಬೀಡಿ, ಗೃಹಕೈಗಾರಿಕೆ ಗೇರುಬೀಜ, ಮರದಮಿಲ್ಲು, ಸಣ್ಣ–ಪುಟ್ಟ ಕೈಗಾರಿಕೆ ಎಂಬಿತ್ಯಾದಿ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದಾರೆ. ಕೃಷಿ ಆಧಾರಿತ ಉದ್ದಿಮೆಗಳು ತಾಲೂಕಿನಲ್ಲಿ ವಿಶೇಷವಾಗಿ ಕಂಡುಬರುವುದಿಲ್ಲ. ಹಾಳೆ ತಟ್ಟೆ ಉದ್ಯಮ ಮತ್ತು ಉಪ್ಪಿನಕಾಯಿ ಉದ್ಯಮಗಳು ವಿದೇಶಕ್ಕೆ ತನ್ನ ಉತ್ಪನ್ನವನ್ನು ಸರಬರಾಜು ಮಾಡಿರುವುದೂ ಇಲ್ಲಿನ ಗಮನಾರ್ಹ ಸಂಗತಿ.

ಸಾರಿಗೆ ಸಂಪರ್ಕ, ವೈದ್ಯಕೀಯ ಸೇವೆ, ಶೈಕ್ಷಣಿಕ ಸಂಸ್ಥೆಗಳು ಸಹಕಾರಿ ಕ್ಷೇತ್ರ ವಾಣಿಜ್ಯ ವ್ಯವಹಾರ ಹೇಳಿಕೊಳ್ಳುವಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿಲ್ಲವೆನ್ನಬಹುದು. ಬಿ.ಸಿ ರೋಡ್ ಈಗ ಕರಾವಳಿಯ ಪ್ರಮುಖ ವಾಣಿಜ್ಯ ನಗರಿಯೂ ಹೌದು.

ಶಿಕ್ಷಣ

ಬಾಸೆಲ್ ಮಿಷನ್ ಬಂಟ್ವಾಳದಲ್ಲಿ ಪ್ರಥಮವಾಗಿ ಶಾಲೆ ಸ್ಥಾಪಿಸಿತ್ತು. ಆದರೆ ಸರಿಯಾದ ವ್ಯವಸ್ಥೆ ಇಲ್ಲದೆ ಮುಚ್ಚುವ ಸ್ಥಿತಿ ಬಂದಾಗ 1892ರಲ್ಲಿ ಬಂಟ್ವಾಳ ದೇವಳದ ಹಿರಿಯ ಮುಕ್ತೇಸರ ಬಿ. ಸರ್ವೋತ್ತಮ ಬಾಳಿಗ ಅವರು ದೇವರ ಭಂಢಾರದ ಹಣ ಪಾವತಿಸಿ ಬಂಟ್ವಾಳದಲ್ಲಿ ಪ್ರಥಮವಾಗಿ ಅಧಿಕೃತ ಶೈಕ್ಷಣಿಕ ಪ್ರಾರಂಭಿಸಿದರು. ಎಂದು ದಾಖಲೆ ಹೇಳುತ್ತದೆ. 298 ಪ್ರಾಥಮಿಕ ಶಾಲೆಗಳು 74 ಪ್ರೌಢಶಾಲೆಗಳು, 23 ಪದವಿಪೂರ್ವ ಕಾಲೇಜುಗಳು ಹಾಗೂ 7 ಪದವಿ ಕಾಲೇಜುಗಳು ತಾಲೂಕಿನಲ್ಲಿ ಶೈಕ್ಷಣಿಕ ಸೇವೆ ಸಲ್ಲಿಸುತ್ತಿದೆ.

ಪ್ರವಾಸಿಕೇಂದ್ರಗಳು

ಧಾರ್ಮಿಕ ಕ್ಷೇತ್ರದಲ್ಲಿ ಗುರುತಿಸಬಹುದಾದ ಬೃಹತ್ ದೇಗುಲಗಳು ಇತಿಹಾಸದ ದಾಖಲೆಗಳನ್ನು ಹೊಂದಿದೆ. ಇಲ್ಲಿನ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನವೂ ಅತ್ಯಂತ ಪ್ರಸಿದ್ಧ ತಿರುಪತಿಯ ಶ್ರೀ ವೆಂಕಟರಮಣ ಬಾಲಾಜಿಯ ಸಾನಿಧ್ಯ ಇಲ್ಲಿ ಎಂಬುದು ಸನಾತನ ನಂಬಿಕೆ ಪೊಳಲಿ ದೇವಸ್ಥಾನದ ವಾಸ್ತು ವೈಭವವೇ ಅನನ್ಯ. ಇಲ್ಲಿನ ಮೃಣ್ಮಯ ಮೂರ್ತಿಗಳು ಭಾರತದಲ್ಲೇ ವಿಶಿಷ್ಟ ಎಂಬ ಮನ್ನಣೆ. ಕಾರಿಂಜೇಶ್ವರ ಕ್ಷೇತ್ರವಂತೂ ನಿಸರ್ಗ ವೈಭವದ ನಡುವೆಯೇ ರೂಪುಗೊಂಡಿದೆ. ನಂದಾವರ ಶ್ರೀ ಶಂಕರನಾರಾಯಣ ದುರ್ಗಾಂಭಾ ಕ್ಷೇತ್ರ ನೇತ್ರಾವತಿಯ ದಡದಲ್ಲಿದೆ. ಮತ್ತು ಅಪೂರ್ವ ಇತಿಹಾಸದ ದಾಖಲೆಯನ್ನು ಹೊಂದಿದೆ. ಬಂಟ್ವಾಳದ ನರಹರಿ ಬೆಟ್ಟ, ಕಡೇಶಿವಾಲಯದ ಶಿವ ದೇಗುಲ ಇವುಗಳು ತಾಲೂಕಿನ ಪ್ರಸಿದ್ಧ ಕ್ಷೇತ್ರಗಳು. ಹೀಗೆ ಪುರಾಣ ಇತಿಹಾಸ ಪ್ರಸಿದ್ಧ ಮತ್ತು ಆಧುನಿಕ ನಿರ್ಮಾಣದ ಕ್ಷೇತ್ರಗಳಿಂದ ಬಂಟ್ವಾಳ ತಾಲೂಕಿನ ಹಿರಿಮೆ ಗರಿಮೆಗಳು ಹೆಚ್ಚಿವೆ.

ಪಣೋಲಿಬೈಲಿನ ಕಲ್ಲುರ್ಟಿ ದೈವಸ್ಥಾನದ ಉಲ್ಲೇಖವೂ ಇಲ್ಲಿ ಅತೀ ಮುಖ್ಯ ತುಳುನಾಡಿನ ಅಗೇಲು ಸೇವೆಗೆ ಈ ಕ್ಷೇತ್ರ ಪ್ರಸಿದ್ಧಿಯನ್ನು ಪಡೆದಿದೆ. ಅಗ್ರಾರ್, ಮೊಡಂಕಾಪು, ಲೊರೆಟ್ಟೋ ,ಮುಂತಾದ ಚರ್ಚು ಮಸೀದಿಗಳು . ದರ್ಗಾಗಳು, ಜಿನಮಂದಿರಗಳು ಬಂಟ್ವಾಳವನ್ನು ಸರ್ವಧರ್ಮ ಸಂಗಮದ ಕ್ಷೇತ್ರವನ್ನಾಗಿಸಿವೆ.

ಕನ್ನಡ, ತುಳು, ಸಾಹಿತ್ಯ ಕ್ಷೇತ್ರಕ್ಕೆ ಬಂಟ್ವಾಳ ಮೂಲದ ಮಹಾನ್ ಸಾಹಿತಿಗಳ ಕೊಡುಗೆ ಅಪಾರ. ಸಾಹಿತ್ಯ,ಸಂಸ್ಕೃತಿ ಪರಂಪರೆ ಕ್ರೀಡೆ, ಸಂಪ್ರದಾಯ ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ಬಂಟ್ವಾಳದ ಸಾಧನೆ ಅದ್ವಿತೀಯ. ಈ ಪರಂಪರೆಯ ಜೊತೆಗೆ ಸಮಕಾಲೀನವಾದ ಕೊಡುಗೆಯಿಂದಲೂ ಬಂಟ್ವಾಳ ಹೆಮ್ಮೆಯ ಸ್ಥಾನ ಪಡೆದಿದೆ. ಬಹುಮಂದಿ ರಾಜಕೀಯ ನೇತಾರರನ್ನು ರೂಪಿಸುತ್ತಿರುವ ಹಿರಿಮೆಯೂ ಬಂಟ್ವಾಳಕ್ಕಿದೆ.

ಐತಿಹಾಸಿಕ ಪರಂಪರೆ ಹಿನ್ನೆಲೆಯುಳ್ಳ ಬಂಟ್ವಾಳ ತಾಲೂಕಿನ ಕೇಂದ್ರ ಮೊದಲು ಬಂಟ್ವಾಳದಲಿತ್ತು. ತದನಂತರ ಬಂಟ್ವಾಳ ಪೇಟೆಯಿಂದ ತಾಲೂಕು ಕೇಂದ್ರ ಬಿ.ಸಿ ರೋಡಿಗೆ ಸ್ಥಳಾಂತರವಾಯಿತು. ಬಿ.ಸಿರೋಡ್ ಎಂಬ ಹೆಸರು

ಬರಲು ಕಾರಣವಾಯ್ತು. ಬಿ.ಸಿ.ರೋಡ್ ಎಂದರೆ ಬಂಟ್ವಾಳ ಕ್ರಾಸ್ ಎಂದರ್ಥ, ಬಿ.ಸಿ.ರೋಡ್ ಕಳೆದ 40 ವರ್ಷಗಳಿಂದ ಶರವೇಗದಲ್ಲಿ ಬೆಳೆಯುತ್ತಾ ಸಾಗಿದೆ. 21ನೇ ಶತಮಾನದ ಆಧುನಿಕ ವ್ಯವಸ್ಥೆಗೆ ಪೂರಕವಾದ ಪ್ರಗತಿಯಲ್ಲಿ ದಾಪುಗಾಲು ಇಡುತ್ತಾ ಸಾಗಿದೆ ಈ ನಮ್ಮ ಬಂಟ್ವಾಳ ತಾಲೂಕು.

ಸಾಹಿತ್ಯ ಪರಾಮರ್ಶೆ

ಅಧ್ಯಯನ ಪ್ರದೇಶವಾದ ಬಂಟ್ವಾಳ ತಾಲೂಕಿನ ಬಗ್ಗೆ ಸಂಕ್ಷಿಪ್ತವಾಗಿ ಹಿಂದಿನ ಅಧ್ಯಾಯದಲ್ಲಿ ಅಧ್ಯಸಿಸಿ ಪ್ರಸ್ತುತ ಅಧ್ಯಾಯದಲ್ಲಿ ಸ್ವಸಹಾಯ ಗುಂಪುಗಳ ಪರಿಕಲ್ಪನೆ ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಾಗಲೇ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನೂರಾರು ಸಂಖ್ಯೆಯ ಲೇಖನಗಳು, ಗ್ರಂಥಗಳು, ವರದಿಗಳು, ಪೂರ್ವಾಧ್ಯಾಯನ ಪರಾಮರ್ಶೆಗಳು ನಿಯತಕಾಲಿಕೆಗಳಲ್ಲಿ ಬೆಳಕು ಕಂಡಿವೆ. ಅದೇ ವೇಳೆಗೆ ಹಲವು ಮಹತ್ವದ ಕೃತಿಗಳು ಅರಳಿವೆ. ಈ ಪರಿಕಲ್ಪನೆಯನ್ನು ಗಮನದಲ್ಲಿರಿಸಿಕೊಂಡು ಬೇರೆ ಬೇರೆ ವಿಶ್ವ ವಿದ್ಯಾನಿಲಯಗಳಲ್ಲಿ ಹಲವು ಬಗೆಯ ಅಧ್ಯಯನ ಶಿಸ್ತುಗಳ ನೆರವಿನೊಂದಿಗೆ ಸಂಶೋಧನೆ ಕೆಲಸಗಳು ನಡೆದಿವೆ. ಕಾಲದಿಂದ ಕಾಲಕ್ಕೆ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಈ ಕುರಿತು ಹಲವು ವರದಿಗಳನ್ನು ಪ್ರಕಟಿಸಿವೆ. ಸ್ವಸಹಾಯ ಗುಂಪುಗಳ ಕಾರ್ಯ ಚಟುವಟಿಕೆಗಳನ್ನು ಭಿತ್ತರಿಸುವ ಪತ್ರಿಕೆಗಳಿವೆ. ಈ ನಿಟ್ಟಿನಲ್ಲಿ ಕೆಳಗಿನ ಸಾಹಿತ್ಯ ವಿಮರ್ಶೆಯು ಅಧ್ಯಯನ ವಿಷಯದ ತಾತ್ವಿಕ ನೆಲೆಗಟ್ಟನ್ನು ಅಧ್ಯೆಸಿಕೊಳ್ಳಲು ಮತ್ತು ಅಧ್ಯಯನಕ್ಕೆ ನಿಖರವಾದ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸಲು ಹಾಗೂ ಅಧ್ಯಯನಕ್ಕೆ ವಿಸ್ತಾರವಾದ ನೆಲೆಯನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗಿದೆ.

ಆರ್ಥಿಕವಾಗಿ ಮಹಿಳಾ ಸಬಲೀಕರಣ ಬಗ್ಗೆ **ಕಾರ್ (1996)** ಎಂಬುವರು ದಕ್ಷಿಣ ಏಶಿಯಾದ ದೃಷ್ಟಿಯಲ್ಲಿ ಮಹಿಳಾ ಸಬಲೀಕರಣ ಸಾಂಘಿಕವಾದರೆ ಮಾತ್ರ ಆಗಬಹುದು. ಎಲ್ಲಾ ಮಹಿಳೆಯರು ಒಟ್ಟಾಗಿ ತಮ್ಮ ಸಂಪತ್ತನ್ನು ಒಟ್ಟುಗೂಡಿಸಿ ವಿನಿಯೋಗಿಸಿ ಅದರಿಂದ ಲಾಭವನ್ನು ಪಡೆದಾಗ ಸುಲಭವಾಗಿ ಆಗಬಹುದು ಎಂದಿದ್ದಾರೆ. ಒಬ್ಬೊಬ್ಬರಾಗಿ ಪ್ರಯತ್ನಿಸಿದರೆ ಬಹಳ ಸುದೀರ್ಘ ಪ್ರಯತ್ನ ಬೇಕು. ಆದರೆ ಅವರೆಲ್ಲ ಒಗ್ಗಟ್ಟಾದರೆ ಮಹಿಳೆಯರು ಆರ್ಥಿಕವಾಗಿ ಸಬಲರಾಗಬಹುದು.

ರುದರ್ ಪೋರ್ಡ್ (1996) ಹೇಳಿಕೆಯಂತೆ, ಬಡವರಿಗೆ ಹಣಕಾಸಿನ ಸೇವೆ ಅವರಲ್ಲಿ ಆದಾಯ (ಗಳಿಕೆ) ಹೆಚ್ಚಳ ಮಹಿಳಾ ಸಬಲೀಕರಣ ಅಥವಾ ಉದ್ಯಮಗಳ ಪ್ರಾರಂಭ ಮಾಡುವ ಗುರಿಯಿಂದ ಕಡಿಮೆ ಹಣದ ಇನ್‌ವೆಸ್ಟ್‌ನಿಂದ ಹೆಚ್ಚು ಲಾಭ ಪಡೆಯುವ ಉದ್ದೇಶದಿಂದ ಸ್ವಸಹಾಯ ಗುಂಪುಗಳು ಕಾರ್ಯ ನಿರ್ವಹಿಸುತ್ತವೆ.

ಮುಹಜಿ ಹಿಂದಿ ಮತ್ತು ಸತ್ಯಸಾಯಿ (2000) ರವರು ಸ್ವಸಹಾಯ ಗುಂಪುಗಳ ಸಮಾಜೋ ಆರ್ಥಿಕ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಿ ಕೆಲವೊಂದು ಅಂಶಗಳನ್ನು ಹೇಳಿದ್ದಾರೆ. ಅವೆಂದರೆ,

- 84 ಪ್ರತಿಶತ ಸದಸ್ಯರು ಬಹಳ ಆರ್ಥಿಕವಾಗಿ ಹಿಂದುಳಿದವರು (ಸ್ಮಾಲ್ ಫಾರ್ಮ್ 29 ಪ್ರತಿಶತ, ಮಾರ್ಜಿನಲ್ ಫಾರ್ಮ್ 23 ಪ್ರತಿಶತ ಮತ್ತು ಕೃಷಿ ಕಾರ್ಮಿಕರು 32 ಪ್ರತಿಶತ)
- 58.6 ಪ್ರತಿಶತ ಸ್ವಸಹಾಯ ಗುಂಪುಗಳ ಸದಸ್ಯರ ಆಸ್ತಿಯ ಮೌಲ್ಯದ ಮಹತ್ತರವಾದ ಏರಿಕೆ.
- ಸ್ವಸಹಾಯ ಗುಂಪುಗಳ ರಚನೆಯ ಹಿಂದೆ ಕೇವಲ 23 ಪ್ರತಿಶತ ಜನರು ಉಳಿತಾಯ ಮಾಡುತ್ತಿದ್ದು, ಗುಂಪಿಗೆ ಸೇರಿದ ನಂತರ ನೂರಕ್ಕೆ ನೂರರಷ್ಟು ಜನರೂ ಉಳಿತಾಯ ಮಾಡುತ್ತಾರೆ.

ಸತೀಶ್ (2001) ರಲ್ಲಿ ಸ್ವಸಹಾಯ ಗುಂಪುಗಳ ಅಧ್ಯಯನ ನಡೆಸಿ ಅವುಗಳ ಕಾರ್ಯಕ್ಷಮತೆಯಿಂದ ಸಮಾಜ ಅಭಿವೃದ್ಧಿ ಕಂಡಿದೆ ಎಂದು. ವಿವರಿಸಿದ್ದಾರೆ. ಅವರು ಸ್ವಸಹಾಯ ಗುಂಪುಗಳ ರಚನೆ ವ್ಯವಸ್ಥಿತವಾಗಿರಬೇಕು, ಗುಂಪುಗಳು ನಮ್ಮ ದೇಶದ ಗ್ರಾಮೀಣ ಕ್ಷೇತ್ರದಲ್ಲಿ ಆರಂಭಿಸಬೇಕು ಎಂದಿದ್ದಾರೆ.

ಪಿ.ಕೆ.ಸಿಂಗ್ (2001) ರವರು ಸ್ವಸಹಾಯ ಗುಂಪು ರಚನೆ ಆರಂಭವಾಗುವ ಮೊದಲು ಹಾಗೂ ಸ್ವಸಹಾಯ ಗುಂಪುಗಳ ಪ್ರಾರಂಭ ಆದ ನಂತರ ಬದಲಾವಣೆಗಳನ್ನು ತುಲನಾತ್ಮಕವಾಗಿ ಉತ್ತರಪ್ರದೇಶದಲ್ಲಿ ಅಧ್ಯಯನ ನಡೆಸಿದ್ದಾರೆ. ಅವರು ಸ್ವಸಹಾಯ ಗುಂಪುಗಳ ಪ್ರಾರಂಭ ಆದ ನಂತರದ ಸಮಯದಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಕಂಡುಕೊಂಡಿದ್ದಾರೆ. ಅವರು ಸರಾಸರಿ ಆಸ್ತಿಗಳ ಬೆಲೆಯಲ್ಲಿ ಸ್ವಸಹಾಯ ಗುಂಪುಗಳ ರಚನೆಯಿಂದ 46 ಪ್ರತಿಶತ ನಷ್ಟು ಹೆಚ್ಚಳವನ್ನು ಅದೇರೀತಿ ಅವರ ವಾರ್ಷಿಕ ಆದಾಯ 28 ಪ್ರತಿಶತ ಹೆಚ್ಚಾಗಿದೆ ಎಂಬುದು ಅವರ ಅಭಿಪ್ರಾಯ.

ಪಾಂಡಿಯನ್ (2002) ರಲ್ಲಿ ಆರ್ಥಿಕವಾಗಿ ಮಹಿಳಾ ಸಬಲೀಕರಣ ಎಂದರೆ, ಮಹಿಳಾ ಅಭಿವೃದ್ಧಿ ಆರಂಭವಾಗುವ ಪ್ರಕ್ರಿಯೆ. ಆರ್ಥಿಕವಾಗಿ ಹಣಕಾಸಿನ ವ್ಯವಹಾರದಲ್ಲಿ ಮಹಿಳೆಯರು ಪಾಲ್ಗೊಂಡು ಬಡವರು ಅಭಿವೃದ್ಧಿಗೊಳ್ಳುವುದು. ಮಹಿಳೆಯರ ಸ್ಥಾನಮಾನದಲ್ಲಿ ಏರಿಕೆ ಕಾಣುವುದು.

ಪುವಜೆ ಓಂದಿ ಮತ್ತು ಬಾದ್ಯತಾ (2002) ರಲ್ಲಿ ಒರಿಸ್ಸಾ, ಚತ್ತೀಸ್‌ಗಡ, ಜಾರ್ಖಾಂಡ್‌ಗಳಲ್ಲಿ ಸ್ವಸಹಾಯ ಗುಂಪುಗಳ ರಚನೆಯ ಉಪಯೋಗಗಳನ್ನು ಹೇಳಿದ್ದಾರೆ.

- ಸ್ವ ಸಹಾಯ ಗುಂಪು ಮತ್ತು ಬ್ಯಾಂಕುಗಳ ಜೊತೆಗೂಡಿ ಸಾಲ ನೀಡುವಿಕೆಯಿಂದ ಸದಸ್ಯರ ಆದಾಯದಲ್ಲಿ ಗಮನಾರ್ಹ ಹೆಚ್ಚಳವಾಗಿದೆ.
- ಸುಲಭ ಮತ್ತು ಅಗತ್ಯದ ಸಮಯದಲ್ಲಿ ಸಾಲಸೌಲಭ್ಯಗಳು ಸಿಗುವುದರಿಂದ ಸದಸ್ಯ ಆರ್ಥಿಕ ಗುಣಮಟ್ಟ ಮತ್ತು ಕೃಷಿಯೇತರ ಚಟುವಟಿಕೆಗಳು ಹೆಚ್ಚಾಗಿವೆ.
- ಸ್ವ ಸಹಾಯ ಗುಂಪುಗಳ ಸದಸ್ಯರ ಸಾಮಾಜಿಕವಾದ ಸಬಲೀಕರಣಗೊಂಡಿದೆ. ಮನೆಯಲ್ಲಿನ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಜೊತೆಗೆ ಮನೋಸ್ಥಿತಿಯು ಸಕಾರಾತ್ಮಕವಾಗಿ ಬದಲಾಗಿದೆ.

ಕೃಷ್ಣಯ್ಯ (2003) ರವರು ಆಂಧ್ರಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಬಗ್ಗೆ ವಿವರಿಸಿದ್ದಾರೆ. ಗುಂಪುಗಳ ರಚನೆಯಿಂದ ಮಹಿಳೆಯರು ತಮ್ಮ ಕೃಷಿಯ ಚಟುವಟಿಕೆಯ ಜೊತೆಗೆ ಇತರೆ ಕೃಷಿಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಅದಲ್ಲದೆ ಗುಂಪುಗಳ ಸಾಲದ ಮರುಪಾವತಿ ಹೆಚ್ಚಾಗಿ ಆಗುತ್ತಿದೆ. ಅದು ಗುಂಪುಗಳ ಸದಸ್ಯರ ಭಾಗವಹಿಸುವಿಕೆಯಿಂದ ಸಾಧ್ಯವಾಗಿದೆ. ಸದಸ್ಯರ ಸಾಲಮರುಪಾವತಿ ಹೆಚ್ಚಳವಾದುದರಿಂದ ಬ್ಯಾಂಕುಗಳ ಸಾಲ ನೀಡುವಿಕೆಯಲ್ಲಿಯೂ ಯಾವುದೇ ವ್ಯತ್ಯಯವಾಗದೇ ಇರುವುದು ಆಂಧ್ರಪ್ರದೇಶದಲ್ಲಿ ಕಂಡು ಬಂದಿದೆ.

ವಿಶ್ವಸಂಸ್ಥೆ (2006) ಯ ಅಂಗ ಸಂಸ್ಥೆಗಳು ನಡೆಸಿದ ಸಮೀಕ್ಷೆಯ ಮಧ್ಯಪ್ರದೇಶದಲ್ಲಿ ಬ್ಯಾಂಕ್ ಪ್ರಬಂಧಕರ ಸಮೀಕ್ಷೆಯಲ್ಲಿ ಮಹಿಳಾ ಸಾಲಗಾರರು ಹೆಚ್ಚು ನಂಬಿಕೆಗೆ ಅರ್ಹ ಹಾಗೂ ಕಡಿಮೆ ಸುಸ್ಥಿದಾರ ನಷ್ಟ ಭಯವನ್ನು ನೀಡುವಂತಹವರು ಎಂದು ಅಭಿಪ್ರಾಯಪಡಲಾಗಿದೆ. ಇದು ಮಹಿಳಾ ಸಬಲೀಕರಣದ ಯೋಜನೆಗಳಿಗೆ ಅಂಚಿನ ರೇಖೆಯಾಗಿದೆ ಎಂದು ಪರಿಗಣಿಸಲಾಗಿದೆ.

ಗುಂಡೇಗೌಡ (2008) ರವರು ಮಹಿಳಾ ಸಬಲೀಕರಣ ಸ್ವಸಹಾಯ ಸಂಘಗಳ ಮೂಲಕ ಎಂಬ ಲೇಖನದಲ್ಲಿ ಸಬಲೀಕರಣ ಎಂಬ ಪದದ ಅರ್ಥವನ್ನು ವಿವರಿಸುತ್ತಾ ಮಹಿಳೆಯ ಸರ್ವತೋಮುಖ ಅಭಿವೃದ್ಧಿ ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಮಹಿಳೆಯರು ಸಬಲೀಕರಣ ಹೊಂದುವುದು. ಅವರು ಸ್ವಸಹಾಯ ಸಂಘಗಳ ಜೊತೆ ಬ್ಯಾಂಕ್ ವಿಲೀನಗೊಂಡ ಬಗ್ಗೆ ಕೂಲಂಕುಶವಾದ ಅಧ್ಯಯನ ನಡೆಸಿದ್ದಾರೆ. ಸ್ವಸಹಾಯ ಸಂಘಗಳ ಕಾರ್ಯವೈಖರಿಯನ್ನು ವಿವರಿಸುತ್ತಾ ಮಹಿಳಾ ಸಬಲೀಕರಣವನ್ನು ವಿವರಿಸಿದ್ದಾರೆ. ಗ್ರಾಮೀಣ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಅಗತ್ಯ ಎಂಬುದನ್ನು ಅಧ್ಯಯಿಸಿ

ಸ್ವಸಹಾಯ ಸಂಘಗಳ ಭವಿಷ್ಯ ಭಾರತಕ್ಕೆ ಪ್ರಮುಖವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಕೊನೆಯದಾಗಿ ಮಹಿಳೆಯರ ಅಭಿವೃದ್ಧಿಯಾಗದೆ ಯಾವುದೇ ಅಭಿವೃದ್ಧಿ ಅಪೂರ್ಣ ಎಂದಿದ್ದಾರೆ.

ಟಿ.ವೆಂಕಟಾಚಲಯ್ಯರವರು (2010) ಮಹಿಳೆ ಸ್ವಸಹಾಯ ಗುಂಪು ಮತ್ತು ಬ್ಯಾಂಕ್‌ಗಳ ಜೊತೆ ವಿಲೀನೀಕರಣದ ಬಗ್ಗೆ ಕರ್ನಾಟಕ ರಾಜ್ಯದ ಅಧ್ಯಯನ ನಡೆಸಿರುತ್ತಾರೆ. ಸ್ವಸಹಾಯ ಗುಂಪುಗಳು ಮತ್ತು ಬ್ಯಾಂಕುಗಳ ಜೊತೆಗಿನ ವ್ಯಾವಹಾರಿಕ ಅಧ್ಯಯನವನ್ನು ನಡೆಸಿರುತ್ತಾರೆ. ಸ್ವಸಹಾಯ ಗುಂಪುಗಳ ಚಳುವಳಿ ಒಂದು ಸಾಮಾಜಿಕ ಚಳುವಳಿಯಾಗಿದೆ. ಇದು ವಿಶ್ವದಾದ್ಯಂತ ಅತಿ ದೊಡ್ಡ ಕಿರು ಹಣಕಾಸಿನ ಒಂದು ಜಾಲವೇ ಆಗಿದೆ. ಕಿರುಹಣಕಾಸಿನ ಮೂಲಕ ಗ್ರಾಮೀಣ ಬಡ ಮಹಿಳೆಯರ ಹಾಗೂ ಹಿಂದುಳಿದ ವರ್ಗಗಳ ಜನರ ಅಭಿವೃದ್ಧಿಗೆ ಕಾರಣವಾಗಿದೆ. ಕಿರುಹಣಕಾಸಿನ ವ್ಯವಸ್ಥೆ ಇಲ್ಲದೆ ಇರುವಾಗ ಉಳಿತಾಯ ಪ್ರವೃತ್ತಿ ಸ್ವಲ್ಪ ಕಡಿಮೆ ಕಂಡು ಬರುತ್ತಿತ್ತು. ಸರಕಾರೇತರ ಸಂಸ್ಥೆಗಳು ಮತ್ತು ಗ್ರಾಮೀಣ ಬ್ಯಾಂಕುಗಳು ಬಡವರಿಗೆ ಸಾಲ ದೊರಕಿಸುವಲ್ಲಿ ಸಹಕಾರಿಯಾಗಿದೆ. ಅವರು ಸ್ವಸಹಾಯ ಗುಂಪುಗಳ ಸಾಲ, ಬಂಡವಾಳ, ಬಡ್ಡಿದರ ಮತ್ತು ಮರುಪಾವತಿಯ ಬಗ್ಗೆ ನಮ್ಮ ರಾಜ್ಯದಲ್ಲಿ ಅಧ್ಯಸಿಸಿದ್ದಾರೆ. ಅಲ್ಲದೆ, ಸ್ವಸಹಾಯ ಗುಂಪುಗಳು ಮತ್ತು ಮಹಿಳಾ ಸಬಲೀಕರಣದಲ್ಲಿ ಬ್ಯಾಂಕ್ ವಿಲೀನೀಕರಣ ಹೇಗೆ ಸಹಕಾರಿಯಾಗಿದೆ ಎಂಬುದನ್ನು ವಿವರಿಸಿದ್ದಾರೆ.

ಡಾ ॥ ಕೆ.ರಾಜೇಂದ್ರನ್ (2012) ಮೈಕ್ರೋ ಫೈನಾನ್ಸ್ ತ್ರೂ ಸೆಲ್ಫ್ ಹೆಲ್ಪ್ ಗ್ರೂಪ್ಸ್ ಎ ಸರ್ವೆಆಫ್ ರೀಸೆಂಟ್ ಲಿಟ್‌ರೇಚರ್ ಇನ್ ಇಂಡಿಯಾ ಎಂಬ ಲೇಖನದಲ್ಲಿ ಕಿರು ಹಣಕಾಸು ಮತ್ತು ಸ್ವಸಹಾಯ ಗುಂಪುಗಳು ಸಬಲೀಕರಣ ಮತ್ತು ಬಡತನ ನಿರ್ಮೂಲನೆಗೆ ಒಂದು ಅಗತ್ಯವಾದ ಪಾತ್ರವಹಿಸುತ್ತದೆ. ಸಬಲೀಕರಣ ಭಾರತದಲ್ಲಿನ ಅನುಭವಗಳು ಒಂದು ಬೆಳವಣಿಗೆಗೆ ಸಕಾರಾತ್ಮಕ ಪರಿಣಾಮಗಳನ್ನು ಬೀರಿದೆ.

ಮೀನು ಮಹೇಶ್ವರಿ ಹಾಗೂ ಶೋಭಾ ಗೋಯಾಳ 2014 ಸಮಾಜೋ ಆರ್ಥಿಕ ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಗುಂಪಗಳ ಪಾತ್ರದ ಬಗ್ಗೆ ಅಧ್ಯಯನವನ್ನು ನಡೆಸಿದ್ದಾರೆ. ಕಿರುಹಣಕಾಸು ಓಳಗೊಳ್ಳುವ ಅಭಿವೃದ್ಧಿಯನ್ನು ಕಾಣುವಲ್ಲಿ ಸಹಕಾರಿಯಾಗಿದೆ. ಅಲ್ಲದೆ, ಗ್ರಾಮೀಣ ಬಡವರ ಚಿಕ್ಕ ಹಿಡುವಳಿದಾರ, ಭೂರಹಿತ ಕೃಷಿಕರ ಮಹಿಳೆಯರ ಹಾಗೂ ಇನ್ನೂ ಹಲವು ದೂರ ಸರಿದವರ ಅಭಿವೃದ್ಧಿಗೆ ಕಾರಣವಾಗಿದೆ. ಈ ಯೋಜನೆಯು ಬಾಂಗ್ಲಾ ದೇಶದ ಗ್ರಾಮೀಣ ಬ್ಯಾಂಕನ್ನು ಪ್ರತಿಬಿಂಬಿಸುತ್ತದೆ.

ಎಸ್.ನೆಡುಮಾರನ್, ಕೆ.ಪಲನಿಸ್ವಾಮಿ, ಎಲ್.ಪಿ.ಸ್ವಾಮಿನಾಥನ್ ರವರು ತಮಿಳುನಾಡಿನಲ್ಲಿ ಸ್ವಸಹಾಯ ಗುಂಪುಗಳ ಪರಿಣಾಮದ ಬಗ್ಗೆ ಅಭ್ಯಸಿಸಿದ್ದಾರೆ. ಅದರಲ್ಲೂ ಸರಿಸುಮಾರು 60 ಪ್ರತಿಶತ ರಷ್ಟು ಸ್ವಸಹಾಯ ಗುಂಪುಗಳ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ಅದೇ ರೀತಿ ಗುಂಪುಗಳ ರಚನೆ ಕೆಳಹಂತಹ ಸರಕಾರದ ಸಹಾಯದಿಂದ ಹಿಂದುಳಿದ ಸಮಾಜದ ಜನರ ಸಮಾಜೋ ಆರ್ಥಿಕ ಅಭಿವೃದ್ಧಿಗೆ ಮಹತ್ತರ ಪಾತ್ರವಹಿಸಿದೆ.

ಎಸ್.ಕೆ.ಡಿ.ಆರ್.ಡಿ.ಪಿ ಆರ್ಥಿಕ ನೆರವಿನೊಂದಿಗೆ ಮಹಿಳೆಯರ ಸಬಲೀಕರಣದಲ್ಲೂ ಮಹತ್ತರ ಪಾತ್ರ ವಹಿಸುತ್ತದೆ. ಬ್ಯಾಂಕು ಸಾಲದ ಸಹಾಯದಿಂದ ತಮ್ಮ ಮುಂದಿನ ಭವಿಷ್ಯವನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ. ಸಬಲೀಕರಣದ ಕಾರ್ಯಕ್ರಮಗಳನ್ನು ಜ್ಞಾನವಿಕಾಸವೆಂದೂ ಕರೆಯುತ್ತಾರೆ.

ಬೀಡಿ ಕಟ್ಟುವುದು, ಕೃಷಿ ದಿನಗೂಲಿ ಈ ಎರಡು ಮಹಿಳೆಯರ ಮುಖ್ಯ ಆದಾಯದ ಮೂಲಗಳಾಗಿವೆ. ಮಹಿಳೆಯರು ವಾರದಲ್ಲಿ ಎರಡು ಸಲ ಒಟ್ಟಾಗಿ ಸೇರಿ ಗುಂಪುಗಳ ಸದಸ್ಯರ ಜೊತೆ ಚರ್ಚಿಸಿ ಆರೋಗ್ಯ, ಕುಟುಂಬಕಲ್ಯಾಣ, ಸ್ವಚ್ಛತೆ, ಮಕ್ಕಳ ಶಿಕ್ಷಣ ಮತ್ತು ಇನ್ನಿತರ ವಿಚಾರಗಳಲ್ಲಿ ತಮ್ಮೊಡನೆ ಚರ್ಚಿಸಿ ಅಥವಾ ತರಬೇತಿ ಮೂಲಕ ಮುಂದುವರಿದಿದ್ದಾರೆ. ಪರಸ್ಪರ ಉಳಿತಾಯ ಮನೋಭಾವದ ಜೊತೆಗೆ ಪರರ ಸಾಧನೆಯಿಂದ ಪ್ರೇರಿತರಾಗಿ ತಾವೂ ಪಾಲ್ಗೊಳ್ಳುವಂತೆ ಪ್ರೇರಿತರಾಗಿದ್ದಾರೆ. ಮಹಿಳೆಯರಲ್ಲಿ ಆತ್ಮವಿಶ್ವಾಸದ ಮನೋಭಾವ ಹೆಚ್ಚಾಗಿದೆ. ಜ್ಞಾನವಿಕಾಸ ಕೇಂದ್ರಗಳು ಮಹಿಳೆಯರನ್ನು ತೋಟಗಾರಿಕೆ, ಹೈನುಗಾರಿಕೆ, ತರಕಾರಿ ಬೆಳೆಸುವಿಕೆ, ಹಾಗೂ ಹೋಮ್ ಇಂಡಸ್ಟ್ರೀಸ್‌ಗಳಲ್ಲಿ ತರಬೇತಿಯನ್ನು ನೀಡಿ ಅವರಲ್ಲಿ ಆರ್ಥಿಕ ಸ್ವಾವಲಂಬನೆಯ ಬೀಜ ಬಿತ್ತಿದೆ.

ಡಾ॥ ರವೀಂದ್ರ.ಕೆ (2014) ಅವರು ಸ್ವಸಹಾಯ ಗುಂಪುಗಳು ಬಡತನ ನಿರ್ಮೂಲನೆಯು ಮುಖ್ಯಪಾತ್ರ ವಹಿಸಿ ಒಳಗೊಳ್ಳುವ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಅವರ ಸ್ವಸಹಾಯ ಗುಂಪುಗಳಿಂದ ಬಡತನ ನಿರ್ಮೂಲನೆಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆರ್ಥಿಕವಾಗಿ ಬಡವರು ಇಂದು ಸ್ವಾವಲಂಭಿಗಳಾಗಿ ಜೀವನ ನಡೆಸಲು ಸ್ವಸಹಾಯ ಗುಂಪುಗಳು ಅನುಕೂಲವಾಗಿದೆ. ಅವರ ಅಧ್ಯಯನದ ಪ್ರಕಾರ ಸ್ವಸಹಾಯ ಗುಂಪುಗಳು ಅನುಕೂಲವಾಗಿದೆ. ಅವರ ಅಧ್ಯಯನದ ಪ್ರಕಾರ ಸ್ವಸಹಾಯ ಗುಂಪುಗಳು ಯಾವ ರಾಜ್ಯದಲ್ಲಿ ಅಧಿಕವಾಗಿದೆಯೋ ಅಲ್ಲಿ ಬಿಪಿಎಲ್ (ಬಡತನ ರೇಖೆಗಿಂತ ಕೆಳಗೆ) ಜನಸಂಖ್ಯೆ ಬಹಳ ಕಡಿಮೆ ಇದೆ. ಅವರು ಸ್ವಸಹಾಯ ಗುಂಪುಗಳ ಸಂಖ್ಯೆ ಮತ್ತು ಬಡತನದ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ಪ್ರೊ. ಜೋಶಿಯವರ (2015) ಪ್ರಕಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಒಂದು ಸಮಗ್ರ ಗ್ರಾಮಾಭಿವೃದ್ಧಿಗೆ ಮಾದರಿ. ಕ್ರಷಿ ಸಲಕರಣೆಗಳ ಪೂರೈಕೆ, ಉಪಯುಕ್ತ ತಂತ್ರಜ್ಞಾನದ ಬಳಕೆ, ಸ್ವಾವಲಂಬಿ ಬದುಕಿನ ಮಾರ್ಗದರ್ಶನ ಪರಸ್ಪರ ಸಹಕಾರದ ಬದುಕಿನತ್ತ ಪ್ರಯಾಣ ಮತ್ತು ಕಠಿಣ ಪರಿಶ್ರಮದಿಂದಷ್ಟೇ ಬಡತನ ನಿವಾರಣೆ ಸಾಧ್ಯವೆಂಬ ವಿಚಾರವನ್ನು ಹರಡುವ ಧರ್ಮದ ತಳಹದಿಯಲ್ಲಿ ರೂಪುಗೊಂಡ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಪರಿಕಲ್ಪನೆಯನ್ನು ಸಾಕಾರಗೊಳಿಸಿ ಮಹತ್ಸಾಧನೆ ಮಾಡಿದೆ ಎಂಬುದು ಅವರ ಅಭಿಪ್ರಾಯ. ಅವರು ಎಸ್.ಕೆ.ಡಿ.ಆರ್.ಡಿ.ಪಿ ಯು ಸುಸ್ಥಿರ ಗ್ರಾಮಾಭಿವೃದ್ಧಿ ಯೋಜನೆಯಾಗಿ ಬೆಳೆದಿದೆ ಎಂದು ವಿವರಿಸಿದ್ದಾರೆ.

ಡಾ॥ ವಿ.ಎ.ಪಾಟೀಲರವರು ಸ್ವ ಸಹಾಯ ಗುಂಪುಗಳ ಮೂಲಕ ಮಹಿಳಾ ಸಬಲೀಕರಣದ ಅಧ್ಯಯನ ಶಿರೋಲ ತಾಲೂಕಿನಲ್ಲಿ ಅಧ್ಯಯನ ನಡೆಸಿದ್ದಾರೆ. ಭಾರತದ ಅರ್ಧದಷ್ಟು ಮಹಿಳಾ ಜನಸಂಖ್ಯೆ ಹೊಂದಿದ್ದು, ಕೇವಲ 16 ಪ್ರತಿಶತ ಮಹಿಳೆಯರು ಉದ್ಯೋಗವನ್ನು ಹೊಂದಿದ್ದು, ಅದರಲ್ಲೂ 16 ರಿಂದ 80 ಪ್ರತಿಶತ ಅಸಂಘಟಿತ ವಲಯದಲ್ಲಿ ಉದ್ಯೋಗ ಹೊಂದಿದ್ದಾರೆ. ಮಹಿಳಾ ಸಬಲೀಕರಣ ಎಂಬುದು ಸ್ವಸಹಾಯ ಗುಂಪುಗಳಿಂದಾದ ಒಂದು ಬಹುಮುಖ ಅಭಿವೃದ್ಧಿಯಾಗಿದೆ. ಶಿರೋಲ್ ತಾಲೂಕಿನಲ್ಲಿ ಉಳಿತಾಯ ಪ್ರವೃತ್ತಿಯಲ್ಲಿ ಮಹಿಳೆಯರು ಪಾಲ್ಗೊಂಡು ಸಮಗ್ರವಾಗಿ ದೇಶದ ಅಭಿವೃದ್ಧಿಯಲ್ಲಿ ಕಾರಣೀಭೂತರಾಗಿದ್ದಾರೆ.

ಲಲಿತಾ ಎನ್ ಮತ್ತು ಬಿ.ಎಸ್.ನಾಗರಾಜನ್ (2002) ಅವರು ತಮಿಳುನಾಡಿನ ಆಯಾ ಕೆಲವು ಜಿಲ್ಲೆಗಳಲ್ಲಿ ವಿಮರ್ಶಾತ್ಮಕವಾಗಿ ಸ್ವಸಹಾಯ ಗುಂಪುಗಳ ಕಾರ್ಯವೈಖರಿಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಸ್ವ ಸಹಾಯ ಸಂಘಗಳ ಮುಖಾಂತರ ಕಿರುಹಣಕಾಸಿನ ವ್ಯವಹಾರ ಮುಖಾಂತರ ಆರ್ಥಿಕ ಅಭಿವೃದ್ಧಿಯ ಬಗ್ಗೆ ಚರ್ಚಿಸಿದ್ದಾರೆ.

ಪಾರ್ವತಿ ವೆಂಕಟೇಶ್ (2011) ಕಿರು ಹಣಕಾಸು – ಸ್ವ ಸಹಾಯ ಸಂಘ ಇವುಗಳ ಬಗ್ಗೆ ಭಾರತದಲ್ಲಿ ಸ್ವ ಸಹಾಯ ಸಂಘಗಳ ಬ್ಯಾಂಕ್ ವಿಲೀನ ಮಾದಿರಿಯನ್ನು ಅಭ್ಯಸಿಸಿದ್ದಾರೆ. ಅವರ ಅಧ್ಯಯನದಲ್ಲಿ ಬ್ಯಾಂಕ್‌ಗಳ ಜೊತೆಯಲ್ಲಿ ಸ್ವ ಸಹಾಯ ಸಂಘಗಳು ಸಕಾರಾತ್ಮಕವಾಗಿ ಅಭಿವೃದ್ಧಿ ಹೊಂದಿವೆ.

ಡಾ॥ ಜೆ.ಪಿ.ಕಪೂರ್ "ಕಿರು ಹಣಕಾಸು ಮತ್ತು ಮಹಿಳಾ ಸಬಲೀಕರಣ" ಎಂಬ ಪುಸ್ತಕದಲ್ಲಿ ಹಿಮಾಚಲ ಪ್ರದೇಶದ ಶಿಮ್ಲಾ ಮತ್ತು ಕಂಗ್ರಾ ಜಿಲ್ಲೆಗಳ ತುಲನಾತ್ಮಕ ಅಧ್ಯಯನ ನಡೆಸಿದ್ದಾರೆ. ಅವರು ಹಿಮಾಚಲ ಪ್ರದೇಶದ ಜನರ ಅಭಿವೃದ್ಧಿ ಸ್ವ ಸಹಾಯ ಗುಂಪಿನ ಸಹಾಯದಿಂದ ಹೇಗೆ ಆಗಿದೆ ಎಂಬುದನ್ನು ವಿವರಿಸಿದ್ದಾರೆ. ಎರಡೂ ಜಿಲ್ಲೆಗಳ ಜನರ ವ್ಯಕ್ತಿತ್ವ ವಿಕಸನವಾಗಿದೆ ಎಂಬುದು ಕೂಡಾ ಅವರ ಅಭಿಪ್ರಾಯ. ಅಲ್ಲದೇ ಕಿರುಹಣಕಾಸಿನ ಸಹಾಯದಿಂದ ಅಲ್ಲಿನ ಮಹಿಳೆಯರ ಸಾಮಾಜಿಕ ಆರ್ಥಿಕ ಅಭಿವೃದ್ದಿಯಾದ ಬಗ್ಗೆ ವಿವರಿಸಿದ್ದಾರೆ. ಶಿಮ್ಲಾ ಮತ್ತು ಕಾಂಗ್ರಾ ಜಿಲ್ಲೆಗಳಲ್ಲಿ ಸ್ವಸಹಾಯ ಗುಂಪುಗಳಿಂದ ಬಡತನ ನಿರ್ಮೂಲನೆಯಾಗಿರುವ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಅದರಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಬಗ್ಗೆ ಮತ್ತು ಅದರ ಪಾತ್ರವನ್ನೂ ವಿವರಿಸಿದ್ದಾರೆ. ಶಿಮ್ಲಾ ಮತ್ತು ಕಾಂಗ್ರಾ ಜಿಲ್ಲೆಯನ್ನು ತುಲನೆ ಮಾಡಿದಾಗ ಕಾಂಗ್ರಾ ಜಿಲ್ಲೆಯು ಹೆಚ್ಚಿನ ಬೆಳವಣಿಗೆಯನ್ನು ಕಂಡಿದೆ.

ಈ ಎಲ್ಲಾ ಸಂಶೋಧನೆ ಮಹಿಳೆಯರ ಸಬಲೀಕರಣದ ವಿವಿಧ ವಿಚಾರಗಳನ್ನು ಹೊರಜಗತ್ತಿಗೆ ತಿಳಿಸಿದೆ. ಈವರೆಗೆ ಸ್ವ ಸಹಾಯ ಗುಂಪುಗಳ ಸಂಬಂಧಪಟ್ಟಂತೆ ವಿಸ್ತ್ರತವಾದ ಚರ್ಚೆಯನ್ನು ಮಾಡಲಾಗಿದೆ. ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಸಾಹಿತ್ಯ ವಿಮರ್ಶೆ ಮಾಡಿದಾಗ ಬಹುತೇಕ ಅಂಶಗಳಲ್ಲಿ ಸಾಮ್ಯತೆ ಇರುವುದನ್ನು ಕಾಣಬಹುದಾಗಿದೆ. ಮಹಿಳೆಯರ ಸಬಲೀಕರಣ ಕೇವಲ ಸಾಂಕೇತಿಕ ಮತ್ತು ಪ್ರಮಾಣಾತ್ಮಕ ಏರಿಕೆಯನ್ನು ಕಾಣುವುದು ಮಾತ್ರವಲ್ಲ, ಬದಲಾಗಿ ಸಕಾರಾತ್ಮಕ ಮುನ್ನಡೆಯನ್ನು ಸಾಧಿಸುವುದಾಗಿದೆ. ಮೇಲಿನ ಪರಾಮರ್ಶೆಯಿಂದ ತಿಳಿದು ಬರುವುದೇನೆಂದರೆ,

- ಕೆಲವರು ತಮಿಳುನಾಡಿನ, ಹಿಮಾಚಲ ಪ್ರದೇಶದ ಹೀಗೆ ಬೇರೆ ಬೇರೆ ಪ್ರದೇಶಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆದರೆ ಬಂಟ್ವಾಳ ತಾಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳ ಬಗ್ಗೆ ಯಾವುದೇ ಅಧ್ಯಯನ ಕಂಡು ಬಂದಿಲ್ಲ.
- ಕೆಲವರು ಸ್ವ ಸಹಾಯ ಗುಂಪುಗಳ ಬಗ್ಗೆ ಅಧ್ಯಯನ ನಡೆಸಿರುತ್ತಾರೆ. ಆದರೆ ಬಂಟ್ವಾಳ ತಾಲೂಕಿನ ಸ್ವ ಸಹಾಯ ಸಂಘಗಳ ಅಧ್ಯಯನ ನಡೆದಿರುವುದಿಲ್ಲ.

ಉಪಸಂಹಾರ : ಮಹಿಳಾ ಸಬಲೀಕರಣದ ವಿವಿಧ ಆಯಾಮಗಳ ಬಗ್ಗೆ ರಾಷ್ಟ್ರಾದ್ಯಂತ ಹಲವಾರು ಅಧ್ಯಯನ ಮತ್ತು ಸಂಶೋಧನೆಗಳು ನಡೆದಿವೆ. ಮಹಿಳಾ ಸಬಲೀಕರಣ ಮತ್ತು ಸ್ವಸಹಾಯ ಗುಂಪುಗಳ ಬಗ್ಗೆ ವಿವಿಧ ಸಂಶೋಧಕರು ನಡೆಸಿದ ಸಂಶೋಧನೆಯನ್ನು ಪರಾಮರ್ಶಿಸಿ ಬಂಟ್ವಾಳ ತಾಲೂಕಿನ ಮಹಿಳೆಯರ ಸಬಲೀಕರಣದ ಬಗ್ಗೆ ಅಧ್ಯಯನ ನಡೆಸಲು ಸಾಹಿತ್ಯಾವಲೋಕನ ಮಾಡಲಾಗಿದೆ.

ಅಧ್ಯಾಯ – 3

ಮಹಿಳೆಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಸ್ವ ಸಹಾಯ ಗುಂಪುಗಳ ಪಾತ್ರ

ಅಧ್ಯಾಯ – 3

ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳ ಪಾತ್ರ

ಪೀಠಿಕೆ :

ಮಹಿಳೆಯರ ಸಬಲೀಕರಣದ ಬಗ್ಗೆ ಸಾಹಿತ್ಯಾವಲೋಕನ ಕಳೆದ ಅಧ್ಯಾಯದಲ್ಲಿ ಸವಿವರವಾಗಿ ವಿವರಿಸಲಾಗಿದೆ. ಇದೀಗ ಪ್ರಸಕ್ತ ಅಧ್ಯಾಯದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕಾರ್ಯಕ್ರಮಗಳ ಬಗ್ಗೆ ವಿವರಿಸಲಾಗುತ್ತದೆ.

ಕಳೆದ ಮೂರು ದಶಕಗಳಿಂದೀಚೆಗೆ ಮಹಿಳಾ ಸ್ವಾತಂತ್ರ್ಯ, ಮಹಿಳಾ ಸಬಲೀಕರಣ, ಮಹಿಳಾ ಜಾಗೃತಿ ಕುರಿತಂತೆ ವ್ಯಾಪಕ ಚಿಂತನೆ, ಸಮಾಲೋಚನೆಗಳು ನಡೆಯುತ್ತಿದೆ. ದೇಶದ ಜನಸಂಖ್ಯೆಯ ಸುಮಾರು ಅರ್ಧದಷ್ಟಿರುವ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಲಶಾಲಿಗಳಾದರೆ ಮಾತ್ರ ರಾಷ್ಟ್ರದ ಪ್ರಗತಿ ಸಾಧ್ಯ.

ಮಹಿಳಾ ಸಬಲೀಕರಣ ಎಂಬುದು ಬಹು ಆಯಾಮಗಳನ್ನು ಹೊಂದಿರುವ ಒಂದು ಸಾಮಾಜಿಕ ಪ್ರಕ್ರಿಯೆ. ಮಹಿಳೆಯರು ತಮ್ಮ ಆರ್ಥಿಕ ಸ್ವಾತಂತ್ರ್ಯ ಪಡೆಯುವುದರ ಜೊತೆಗೆ ರಾಜಕೀಯ ಭಾಗವಹಿಸುವಿಕೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗುವ ಬೇರೆ ಬೇರೆ ಅಂಶಗಳ ಮೇಲೆ ನಿಯಂತ್ರಣವನ್ನು ಸಾಧಿಸುವುದು ಮತ್ತು ಅವುಗಳನ್ನು ಹೊಂದುವಂತೆ ಮಾಡುವ ಪ್ರಕ್ರಿಯೆಯೇ ಸಬಲೀಕರಣ. ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ಆತ್ಮವಿಶ್ವಾಸ, ಅರಿವು, ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಪಡೆಯುವುದೇ ಮಹಿಳಾ ಸಶಕ್ತೀಕರಣವಾಗುತ್ತದೆ. ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಒಂದು ಪರಿಕ್ರಮವಾಗಿದೆ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಸಹಾಯ ಮತ್ತು ಪುರುಷರ ಸಹಕಾರ ಉತ್ತೇಜನ ನೀಡುವ ಅಂಶಗಳಾಗಿದೆ. ಭಾರತದ ಗ್ರಾಮೀಣ ಪ್ರದೇಶದ ಮಹಿಳೆಯರು ಸರಳರು, ಮುಗ್ಧರು ಮತ್ತು ಅಮಾಯಕರು.

ಮಹಿಳೆಯರ ಸಬಲೀಕರಣಕ್ಕಾಗಿ ದೇಶದೆಲ್ಲೆಡೆ ವಿವಿಧ ಸಂಘ ಸಂಸ್ಥೆಗಳು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು, ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅಂತಹುದೇ ಒಂದು ಉತ್ತಮ ಸಂಸ್ಥೆಯಾದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಗ್ಗೆ ಮತ್ತು ಅದರ ಮೂಲಕ ಮಹಿಳಾ ಸಬಲೀಕರಣ ಬಂಟ್ವಾಳ ತಾಲೂಕಿನಲ್ಲಿ ಆದ ಮಹತ್ತರವಾದ ಬದಲಾವಣೆಗಳು ಇವುಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮೀಣ ಮಹಿಳೆಯರಲ್ಲಿ ಅರಿವು ಹಾಗೂ ಕ್ರಿಯಾಶೀಲತೆಯನ್ನು ಬೆಳೆಸಿ ಅವರನ್ನು ಜಾಗೃತಿ ಗೃಹಿಣಿಯರನ್ನಾಗಿ ರೂಪಿಸುವುದರೊಂದಿಗೆ ಉಳಿತಾಯ, ಸಾಲ ನಿರ್ವಹಣೆಯ ಮೂಲಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಸುವುದು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ(ರಿ) ಬಂಟ್ವಾಳ ಇದರ ಮೂಲಧ್ಯೇಯವಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ(ರಿ), ಬಂಟ್ವಾಳ ತಾಲೂಕು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಂಟ್ವಾಳ ತಾಲೂಕಿಗೆ ಪಾದಾರ್ಪಣೆಯಾಗಿರುವುದು 2004 ನೇ ದಶಂಬರ್ 24 ರಂದು. ಬಹುತೇಕ ವ್ಯವಸಾಯಗಾರರನ್ನೇ ಹೊಂದಿರುವ ಹಾಗೂ ಅಡಿಕೆ, ತೆಂಗು ಮೊದಲಾದ ವಾಣಿಜ್ಯ ಬೆಳೆಗಳೇ ಇಲ್ಲಿಯ ಪ್ರಮುಖ ಬೆಳೆಗಳು. ರೈತರ ದೈನಂದಿನ ಸಮಸ್ಯೆ, ಕೂಲಿಯಾಳುಗಳ ಅಭಾವ, ನಿರ್ವಹಣಾ ವೆಚ್ಚ ಹೆಚ್ಚಳ ಮೊದಲಾದ ಕಷ್ಟಗಳ ಸಂದರ್ಭದಲ್ಲಿ ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರ ಮಾನವೀಯ ಕಳಕಳಿಯ ಪ್ರತೀಕವಾಗಿ ಅವರ ಮಾರ್ಗದರ್ಶನದ ಗ್ರಾಮಾಭಿವೃದ್ಧಿ ಯೋಜನೆಯ ಆಗಮನ ಗ್ರಾಮೀಣ ದಿಶೆಯನ್ನು ಬದಲಾಯಿಸಿತು. ತಮ್ಮ ಸಮಸ್ಯೆಗಳನ್ನು ಚಿಂತಿಸುವ, ಯೋಚಿಸುವ ಜನ ನಾವು ನಮ್ಮವರು ನಮ್ಮ ಸುತ್ತಮುತ್ತಲಿನವರ ಬಗ್ಗೆ ಯೋಚಿಸಲು ಆರಂಭಿಸಿತು. ಪೂಜ್ಯರು ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು ಬೋಧಿಸಿದ "ಹತ್ತು ಮನಸ್ಸುಗಳು ಒಂದಾಗಿ ಆತ್ಮೀಯತೆಯಿಂದ ದುಡಿದಲ್ಲಿ ಆರ್ಥಿಕ ಸ್ವಾವಲಂಬನೆಯೊಂದಿಗೆ ಸರ್ವತೋಮುಖ ಅಭಿವೃದ್ಧಿ ಸುಲಭ ಸಾಧ್ಯ" ಎನ್ನುವ ಮಂತ್ರವು ಜನತೆಗೆ ಅದ್ಭುತ ಪ್ರೇರಣೆ ನೀಡಿತು. ಕೃಷಿ ಅಭಿವೃದ್ಧಿ, ಸಂಘಟನೆ ಸಹಬಾಳ್ವೆಗೆ ಹೊಸ ಅರ್ಥವನ್ನು ನೀಡಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಬಂಟ್ವಾಳ ತಾಲೂಕು ಇದರ ಉದ್ದೀಪನಗೊಂಡಿರುವುದು ದಿ। ಮಾತೃಶ್ರೀ ರತ್ನಮ್ಮ ಹೆಗ್ಗಡೆಯವರ ದಿವ್ಯಹಸ್ತದಲ್ಲಿ ಆದುದು. ಪೂಜ್ಯರ ಹುಟ್ಟೂರ ಜನತೆಯ ಮನಸ್ಸಿನಲ್ಲಿ ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ. ಆರ್ಥಿಕ ಸಂಕಷ್ಟದಲ್ಲಿರುವ ಲಕ್ಷಾಂತರ ಮಂದಿಗೆ ಸಹಾಯ ಮಾಡಬೇಕೆಂದರೆ ಅದು ದಾನದಿಂದಲ್ಲ ಸ್ವಾವಲಂಬನೆಯ ಮಂತ್ರದಿಂದ ಎನ್ನುವ ವೀರೇಂದ್ರ ಹೆಗ್ಗಡೆಯವರ ಅಚಲ ನಂಬಿಕೆ ಎಸ್.ಕೆ.ಡಿ.ಆರ್.ಡಿ.ಪಿ

ಯೋಜನೆಯ ಯಶೋಗಾಥೆಗೆ ಕಾರಣವಾಗಿದೆ. ಯೋಜನೆಯ ಅಡಿಯಲ್ಲಿ ಬರುವ ಜನರ ವಾಸ್ತವಿಕ ಅಗತ್ಯಗಳಿಗೆ ಬೇಕಾದ ಕಿರು ಸಾಲ ಒದಗಿಸುವ ನಿಧಿಗೆ "ಪ್ರಗತಿ ನಿಧಿ" ಎಂದು ಹೆಸರು ಕೃಷಿರಂಗಕ್ಕೆ ಬೇಕಾದ ಪರಸ್ಪರ ಸಹಕಾರದ ಪರಂಪಪರೆ ಬೆಳೆಸುತ್ತಿರುವ ಪ್ರಗತಿಬಂಧು ಸ್ವ–ಸಹಾಯ ಗುಂಪುಗಳು ದೊಡ್ಡ ಸಂಖ್ಯೆಯಲ್ಲಿವೆ. "ಜೀವನ ಧಾಮ" ಎಂಬುದು ನಿರ್ಗತಿಕ ಕುಟುಂಬಗಳಿಗೆ ಮನೆ ಕಟ್ಟಿ ಕೊಡುವ ಯೋಜನೆ. "ಜ್ಞಾನದೀಪ"ವು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ನೆರವಾಗುವ ಉಪಯುಕ್ತ ಕಾರ್ಯಕ್ರಮ "ಜನಜಾಗೃತಿ" ದುಶ್ಚಟಗಳಿಂದ ಮುಕ್ತರಾಗಿಸುವ ಚಳುವಳಿಯ ಸರಿ. ರಾಜ್ಯ ಸರ್ಕಾರಕ್ಕೆ ಸ್ಫೂರ್ತಿ ನೀಡಿದ ಆರೋಗ್ಯ ಮತ್ತು ನೈರ್ಮಲ್ಯೀಕರಣ ಯೋಜನೆಯೇ "ಸುರಕ್ಷಾ". ಆರೋಗ್ಯ ಕುಟುಂಬ ಕಲ್ಯಾಣ ಮಕ್ಕಳ ಶಿಕ್ಷಣಗಳ ಬಗ್ಗೆ ಗ್ರಾಮೀಣ ಬಡ ಮಹಿಳೆಯರಿಗೆ ಮಾಹಿತಿ ನೀಡುವ ಕೇಂದ್ರಗಳಿಗೆ "ಜ್ಞಾನವಿಕಾಸ ಕೇಂದ್ರ"ಗಳೆಂಬ ನಾಮಕರಣ. "ಸಂಪೂರ್ಣ ಸುರಕ್ಷಾ" ಮಹಿಳೆಯರಿಗಾಗಿಯೇ ಇರುವ ಕಿರು ಆರೋಗ್ಯ ವಿಮಾ ಯೋಜನೆಯಾದರೆ ಉತ್ತಮ ಕುಟುಂಬದ ಸಂಬಂಧಗಳ ಮಹತ್ವವನ್ನು ಸಾರಿ ಹೇಳುವ "ಗೆಳತಿ" ಕಾರ್ಯಕ್ರಮ ಬೆಳೆಯುತ್ತಿದೆ.

ಅನೇಕ ಅಂಗಸಂಸ್ಥೆಗಳನ್ನು ಹೊಂದಿದ ಎಸ್.ಕೆ.ಡಿ.ಆರ್.ಡಿ.ಪಿ ಒಂದು ಸಮಗ್ರ ಗ್ರಾಮಾಭಿವೃದ್ಧಿ ಯೋಜನೆ. 2012ರಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿ ಪರಿಸರ ಸ್ನೇಹಿ ಸೌರಶಕ್ತಿಯನ್ನು ಜನಪ್ರೀಯಗೊಳಿಸಲು ಕಿರುಹಣಕಾಸು ಬಳಸಿಕೊಂಡು ದೊಡ್ಡ ಸಾಧನೆಯ ಫಲವಾಗಿ ಏಶ್ಯನ್ ಸ್ವರ್ಣಪ್ರಶಸ್ತಿ ದೊರಕಿರುವುದು ಹೆಮ್ಮೆಯ ವಿಷಯ. ಸರಿಯಾದ ನಾಯಕತ್ವ ಅದರ ಹುಟ್ಟಿನಿಂದ ಈ ತನಕ ಇರುವುದೇ ನಮ್ಮ ದೇಶದಲ್ಲೇ ಅದ್ವಿತೀಯ ಸುಸ್ಥಿರ ಗ್ರಾಮಾಭಿವೃದ್ಧಿ ಯೋಜನೆಯಾಗಿ ಬೆಳೆದು ಬಂದಿದೆ ಎಸ್.ಕೆ.ಡಿ.ಆರ್.ಡಿ.ಪಿ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಬಂಟ್ವಾಳ ತಾಲೂಕು ಇದರ ಕೆಲವು ಕಾರ್ಯಕ್ರಮಗಳ ವಿವರ ಇಂತಿದೆ :

1. ಒಳಗೊಂಡಿರುವ ಒಟ್ಟು ಗ್ರಾಮಗಳು : 84
2. ಒಟ್ಟು ಗ್ರಾಮ ಪಂಚಾಯತ್‌ಗಳು : 47
3. ಹೋಬಳಿಗಳು : 03

ಬಂಟ್ವಾಳ ತಾಲೂಕಿನಲ್ಲಿ 149 ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳಿದ್ದು, ಸಂಘಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಒಕ್ಕೂಟಗಳನ್ನು ರಚಿಸಲಾಗಿದೆ. ಇಲ್ಲಿನ ಸಿಬ್ಬಂದಿ ವರ್ಗದವರಲ್ಲಿ ಒಬ್ಬ ನಿರ್ದೇಶಕರು, ಒಬ್ಬ ಯೋಜನಾಧಿಕಾರಿ, ಅನೇಕ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಕಚೇರಿ ಮ್ಯಾನೇಜರ್‌ಗಳು, ಕೃಷಿ ಮೇಲ್ವಿಚಾರಕರು, ಜ್ಞಾನ ವಿಕಾಸ ಸಮನ್ವಯಾಧಿಕಾರಿಗಳು, ಆಂತರಿಕ ಲೆಕ್ಕ ಪರಿಶೋಧಕರು ಹಾಗೂ ಇನ್ನೂ ಪಲವು ಪ್ರತಿನಿಧಿಗಳು ಯೋಜನೆಯ ಕೆಲಸದಲ್ಲಿ ನಿರತರಾಗಿದ್ದಾರೆ. ಬಂಟ್ವಾಳ ತಾಲೂಕಿನ ಪ್ರಗತಿಬಂಧು ಕಾರ್ಯಕ್ರಮದ ವಿವರ ಇಂತಿದೆ.

ಕೋಷ್ಟಕ 3.1 : ಬಂಟ್ವಾಳ ತಾಲೂಕಿನ ಪ್ರಗತಿಬಂಧು ಮತ್ತು ಸ್ವಸಹಾಯ ಗುಂಪುಗಳ ಕಾರ್ಯಕ್ರಮದ ವಿವರ

ಕ್ರ.ಸಂ.	ವಿವರ	ಪ್ರಗತಿ ಬಂಧು	ಸ್ವಸಹಾಯ
1	ಒಟ್ಟು ಗುಂಪುಗಳು	742	2616
2	ಒಳಗೊಂಡ ಸದಸ್ಯರು	3913	28180
3	ಉಳಿತಾಯ (ಲಕ್ಷಗಳಲ್ಲಿ)	46.18	226.50
4	ವಿತರಿಸಲಾದ ಪ್ರಗತಿನಿಧಿ (ಕೋಟಿಗಳಲ್ಲಿ)	12.58	110.80
5	ಮರುಪಾವತಿಯಾದ ಒಟ್ಟು ಪ್ರಗತಿನಿಧಿ (ಕೋಟಿಗಳಲ್ಲಿ)	95.09	
6	ಮರುಪಾವತಿಯಾಗಲು ಬಾಕಿಯಿರುವ ಪ್ರಗತಿನಿಧಿ(ಕೋಟಿಗಳಲ್ಲಿ)	129.72	

ಮೂಲ : ಸಾಧನಾ ವಾರ್ಷಿಕ ವರದಿ 2015

ಬಂಟ್ವಾಳ ತಾಲೂಕಿನ ಎಸ್.ಕೆ.ಡಿ.ಆರ್.ಡಿ.ಪಿ ಯು ಅನೇಕ ಸುರಕ್ಷಾ ವಿಮಾ ಕಾರ್ಯಕ್ರಮಗಳನ್ನು ಮತ್ತು ಆರೋಗ್ಯ ಸಂಬಂಧಿತ ಜೀವ ವಿಮಾ ಪಾಲಿಸಿಗಳನ್ನು ಕೂಡಾ ತನ್ನ ಸದಸ್ಯರ ಕುಟುಂಬಗಳಿಗೆ ಒದಗಿಸಿವೆ. ಸಂಪೂರ್ಣ ಸುರಕ್ಷಾ ಕಾರ್ಯಕ್ರಮ ಹಾಗೂ ಆರೋಗ್ಯ ಸಂಬಂಧಿತ ವಿಮೆಯ ವಿವರ ಇಂತಿದೆ :

ವಿಮೆ ಮಾಡಿದ ಕುಟುಂಬ : 20814

ಒಳಗೊಂಡ ಸದಸ್ಯರು : 78,393.00

ಸಂಗ್ರಹಿಸಿದ ಮೊತ್ತ : 29,789340.00

ಕೋಷ್ಟಕ 3.2 : ವಿಮಾ ಸೌಲಭ್ಯಗಳ ಕಾರ್ಯಕ್ರಮಗಳ ವರದಿ

ಕ್ರ.ಸಂ.	ವಿವರ	ಸೌಲಭ್ಯ ಪಡೆದ ಕುಟುಂಬ	ಮೊತ್ತ
1	ಆರೋಗ್ಯ ವಿಮೆ	2,963	2,03,13,191.00
2	ಹೆರಿಗೆ ಭತ್ತೆ	301	12,15,500.00
3	ಮರಣ ಸಾಂತ್ವನ	376	18,80,000.00
4	ಅಪಘಾತ ಮರಣ ಸಾಂತ್ವನ	4	40,000.00
	ಒಟ್ಟು	**3,644**	**23,4,48,691.00**

ಮೂಲ : ಸಾಧನಾ ವಾರ್ಷಿಕ ವರದಿ 2015

ರಾಷ್ಟ್ರೀಯ ಸ್ವಾವಲಂಬನಾ ಯೋಜನೆ

ಕೇಂದ್ರ ಸರಕಾರವು ಭಾರತ ದೇಶದ ಎಲ್ಲಾ ನಾಗರಿಕರಿಗೆ ಅನ್ವಯವಾಗುವಂತೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಲ್ಲಿ ಸದಸ್ಯತನ ಪಡೆದ ವ್ಯಕ್ತಿ ತನ್ನ ವೃದ್ಧಾಪ್ಯದಲ್ಲಿ ಮಾಸಿಕ ಆದಾಯ ತರುವ ಯೋಜನೆಯಾಗಿದೆ. 18 ವರ್ಷ ಮೇಲ್ಪಟ್ಟ ಸದಸ್ಯರು 60 ವರ್ಷದವರೆಗೆ ಈ ಯೋಜನೆಗೆ ಸದಸ್ಯರಾಗಿ ವಾರ್ಷಿಕ ರೂ.1,000/ ದಿಂದ ರೂ. 2,000/- ರವರೆಗೆ ಹಣವನ್ನು ತೊಡಗಿಸಬಹುದು.

ನಾಗರಿಕ ಪ್ರಜ್ಞಾ ಅಭಿಯಾನ

ಭಾರತ ದೇಶವು ಸಂಸ್ಕೃತ ಸಂಪನ್ನ ದೇಶ. ಪ್ರತಿಯೊಬ್ಬ ನಾಗರಿಕನು ತನ್ನ ಮನೆ, ತಮ್ಮ ಸುತ್ತಮುತ್ತಲ ಪರಿಸರವನ್ನು ಸ್ವಚ್ಛತೆಯಲ್ಲಿಡಲು ಶಕ್ತಿಮೀರಿ ಪ್ರಯತ್ನಿಸಬೇಕು. ಸ್ವಚ್ಛತೆ ಸ್ವಾಭಿಮಾನದ ಸಂಕೇತ ಎಂಬ ಮಾತಿಗೆ ಪೂರಕವಾಗಿ ಪೂಜ್ಯ ಖಾವಂದರು ನಾಗರೀಕ ಪ್ರಜ್ಞೆ ಎಂಬ ಕಾರ್ಯಕ್ರಮವನ್ನು ಎಲ್ಲಾ ತಾಲೂಕುಗಳಲ್ಲಿ ಪ್ರಾರಂಭಿಸಿದ್ದು. ಬಂಟ್ವಾಳ ತಾಲೂಕಿನಲ್ಲಿ ಪ್ರಸ್ತುತ 20 ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಜನರಿಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮ :

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. "ತೊಟ್ಟಿಲು ತೂಗುವ ಕೈ ದೇಶವನ್ನು ಆಳುವುದು" "ಯಶಸ್ವಿ ಪುರುಷನ ಹಿಂದೆ ಮಹಿಳೆಯ ಶಕ್ತಿ ಅಡಗಿದೆ" ಎಂಬ ಮಾತಿಗೆ ಪೂರಕವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಸ್ವಾವಲಂಬಿ ಜೀವನವನ್ನು ನಡೆಸುವ ನಿಟ್ಟಿನಲ್ಲಿ ದುರ್ಬಲ ವರ್ಗದ ಮಹಿಳೆಯರನ್ನು ಆತ್ಮವಿಶ್ವಾಸ, ಮಾನಸಿಕ ಸ್ಥೈರ್ಯ, ಕುಟುಂಬ ನಿರ್ವಹಣಾ ಜಾಣ್ಮೆ, ಹಣಕಾಸು ವ್ಯವಹಾರ ಜ್ಞಾನ, ಮಕ್ಕಳ ಪಾಲನೆ, ವೈಯಕ್ತಿಕ ಶುಚಿತ್ವ ಉತ್ಪಾದನೆಯಲ್ಲಿ ಹೆಚ್ಚಳ ಇವೇ ಮೊದಲಾದ ಗುರಿಗಳನ್ನು ಇರಿಸಿ ಆರಂಭಿಸಿದ ಕಾರ್ಯಕ್ರಮ ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮ ತಾಲೂಕಿನಲ್ಲಿ ಒಟ್ಟು 24 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, 1092 ಮಂದಿ ಸದಸ್ಯರಿದ್ದಾರೆ. ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮದ ವಿವರ ಈ ಕೆಳಗಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

ಕೋಷ್ಟಕ : 3.3 : ಜ್ಞಾನವಿಕಾಸ ಕಾರ್ಯಕ್ರಮಗಳ ವಿವರ

ಕ್ರ.ಸಂ.	ವಿಷಯ	ನಡೆಸಲಾದ ಕಾರ್ಯಕ್ರಮಗಳ ಸಂಖ್ಯೆ	ಭಾಗವಹಿಸಿದ ಕುಟುಂಬಗಳು
1	ಪೌಷ್ಠಿಕ ಆಹಾರ ಮಾಹಿತಿ	12	330
2	ಆರೋಗ್ಯಕ್ಕೆ ಸಂಬಂಧಪಟ್ಟ ಮಾಹಿತಿ	24	1085
3	ಕಾನೂನು ಮಾಹಿತಿ	22	1116
4	ಕೌಟುಂಬಿಕ ಸಾಮರಸ್ಯ	17	604
5	ಅಧ್ಯಯನ ಪ್ರವಾಸ	11	340
6	ವಾರ್ಷಿಕೋತ್ಸವ ಕಾರ್ಯಕ್ರಮ	5	1207
7	ಸ್ವ ಉದ್ಯೋಗ	16	651
8	ಜ್ವಲಂತ ಕಾರ್ಯಕ್ರಮಗಳು	20	677
9	ಶಿಕ್ಷಣಕ್ಕೆ ಸಂಬಂಧಪಟ್ಟ ಮಾಹಿತಿ ಕಾರ್ಯಕ್ರಮ	24	825
10	ಬೀದಿನಾಟಕ ಇತರೇ ಮಾಧ್ಯಮ	3	1215
11	ಮಹಿಳಾ ದಿನಾಚರಣೆ/ಮಹಿಳಾ ವಿಚಾರಗೋಷ್ಠಿ/ ಸಮಾವೇಶ	3	220
12	ಚಲನಚಿತ್ರ ಕಾರ್ಯಕ್ರಮ	2	380
13	ಜ್ಞಾನವಿಕಾಸ ಕೌಶಲ್ಯ ದಿನ	12	512

ಮೂಲ : ಸಾಧನಾ ವಾರ್ಷಿಕ ವರದಿ 2015

ಕೋಷ್ಟಕ : 3.4 : ಜನಜಾಗೃತಿ ಕಾರ್ಯಕ್ರಮಗಳ ವಿವರ

ಕ್ರ.ಸಂ.	ವಿವರ	ಪ್ರಸ್ತುತ ವರ್ಷ	ಇದುವರೆಗೆ
1	ತಾಲೂಕು ಜನಜಾಗೃತಿ ವೇದಿಕೆ ಮಹಾಸಭೆ	2	37
2	ನಡೆಸಿದ ಮದ್ಯವರ್ಜನಾ ಶಿಬಿರಗಳು	2	43
3	ಶಿಬಿರಾರ್ಥಿಗಳ ಸಂಖ್ಯೆ	106	2682
4	ನವಜೀವನ ಸಮಿತಿಗಳು	12	244
5	ಒಟ್ಟು ಸದಸ್ಯರು	155	2414
6	ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕಾರ್ಯಕ್ರಮ – ಸ್ವಾಸ್ಥ್ಯ ಸಂಕಲ್ಪ	21	199
7	ಮಾಹಿತಿ ಪಡೆದ ವಿದ್ಯಾರ್ಥಿಗಳು	2381	27401

ಮೂಲ : ಸಾಧನಾ ವಾರ್ಷಿಕ ವರದಿ 2015

ಕೋಷ್ಟಕ 3.5 : ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ

ಕ್ರ.ಸಂ	ವಿವರ	ಪ್ರಸ್ತುತ	ಒಟ್ಟು
1.	ಮನೆ ರಚನೆ/ರಿಪೇರಿ	2096	24335
2.	ಶೌಚಾಲಯ	380	11876
3.	ಕೆರೆ/ಬಾವಿ/ಬೋರ್‌ವೆಲ್	101	1381
4.	ವಿದ್ಯುತ್ ಅಳವಡಿಕೆ	462	8599
5.	ಸೋಲಾರ್ ಅಳವಡಿಕೆ	565	1534

ಮೂಲ : ಸಾಧನಾ ವಾರ್ಷಿಕ ವರದಿ 2015

ಕೋಷ್ಟಕ : 3.6 : ಸಮುದಾಯ ಅಭಿವೃದ್ಧಿ ಕಾರ್ಯಕ್ರಮ

ಕ್ರ.ಸಂ.	ಕಾಮಗಾರಿಯ ವಿವರ	ಒಟ್ಟು ಕಾಮಗಾರಿಗಳ ಸಂಖ್ಯೆ	ಸಮುದಾಯದಿಂದ ಮಂಜೂರು ಮಾಡಿದ ಅನುದಾನ (ಲಕ್ಷಗಳಲ್ಲಿ)
1.	ದೇವಸ್ಥಾನ ಜೀರ್ಣೋದ್ಧಾರದ	18	56.50
2.	ಶಾಲಾ ರಂಗ ಮಂದಿರ/ಕಟ್ಟಡ ರಚನೆ, ಶೌಚಾಲಯ	15	3.03
3.	ಯುವಕ ಸಂಗ ಭಜನಾ ಮಂದಿರ ಸಮುದಾಯ ಭವನ	29	13.46
4.	ಹಿಂದೂ ರುದ್ರ ಭೂಮಿ	8	1.38
5.	ಹಾಲು ಉತ್ಪಾದಕರ ಕಟ್ಟಡ ರಚನೆ	4	1.30
	ಒಟ್ಟು	**74**	**75.67**

ಮೂಲ : ಸಾಧನಾ ವಾರ್ಷಿಕ ವರದಿ 2015

ಕೋಷ್ಟಕ : 3.7 : ತರಬೇತಿಯಿಂದಾದ ಪ್ರಗತಿ ಪರಿಣಾಮ

ಕ್ರ.ಸಂ.	ವಿವರ	ಅಳವಡಿಸಿದ ಕುಟುಂಬಗಳು
1.	ಹಸು ಖರೀದಿ	136
2.	ಗೋಬರ ಅನಿಲ ಸ್ಥಾವರ	68
3.	ಎರೆಘಟಕ ನಿರ್ಮಾಣ	9
4.	ಕಾಂಪೋಸ್ಟ್ ಗೊಬ್ಬರ ತಯಾರಿ	64
5.	ಸೋಲಾರ್	565
6.	ಕುಕ್ ಸ್ಟವ್	477

ಮೂಲ : ಸಾಧನಾ ವಾರ್ಷಿಕ ವರದಿ 2015

ಕೃಷಿ ಅಧ್ಯಯನ ಪ್ರವಾಸ

ಬಂಟ್ವಾಳ ತಾಲೂಕಿನಲ್ಲಿ ಪ್ರಸ್ತುತ ವರ್ಷದಲ್ಲಿ ಒಟ್ಟು 23 ಕೃಷಿ ಅಧ್ಯಯನ ಪ್ರವಾಸದಲ್ಲಿ ಒಟ್ಟು 1000 ಆಯ್ದ ರೈತರಿಗೆ ಪುತ್ತೂರು, ಬೆಳ್ತಂಗಡಿ, ಸುಳ್ಯ ಮತ್ತು ಕಾರ್ಕಳ ತಾಲೂಕಿನ ಪ್ರಗತಿಪರ ರೈತರ ಕೃಷಿ ತಾಕುಗಳಿಗೆ ಭೇಟಿ ನೀಡಿ ಅಲ್ಪಾವಧಿ ಕೃಷಿ, ದೀರ್ಘಾವಧಿ ಕೃಷಿ, ಪಶುಸಂಗೋಪನೆ, ಸ್ವ ಉದ್ಯೋಗ, ಇತ್ಯಾದಿ ಚಟುವಟಿಕೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುವಲ್ಲಿ ಶ್ರೀ ಕ್ಷೇತ್ರ ಧ.ಗ್ರಾ.ಯೋಜನೆಯು ಸಫಲವಾಗಿದೆ.

ಕೃಷಿ ವಿಚಾರ ಸಂಕಿರಣ

ಬಂಟ್ವಾಳ ತಾಲೂಕಿನಲ್ಲಿ ಪ್ರಸ್ತುತ ವರ್ಷದಲ್ಲಿ ಒಟ್ಟು 10 ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮ ನಡೆಸಿದ್ದು, ಭತ್ತ ಕೃಷಿಯಲ್ಲಿ ಯಾಂತ್ರೀಕತೆ, ತೋಟದ ಬೆಳೆಗಳು ಮತ್ತು ಅದರ ನಿರ್ವಹಣೆ, ಲಾಭದಾಯಕ ಹೈನುಗಾರಿಕೆ ಎಂಬ ವಿಷಯಗಳ ಬಗ್ಗೆ ವಿಚಾರಗೋಷ್ಠಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 3500 ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ.

ಕೃಷಿ ವಿಚಾರ ಕಾರ್ಯಕ್ರಮ ಬಂಟ್ವಾಳ ವಲಯ ಕೃಷಿ ವಿಚಾರ ಕಾರ್ಯಕ್ರಮ ಮುಡಿಪು ವಲಯ

ಕೃಷಿ ಅನುದಾನ ವಿತರಣೆ :

ಬಂಟ್ವಾಳ ತಾಲೂಕಿನಲ್ಲಿ ಪ್ರಸ್ತುತ ವರ್ಷದಲ್ಲಿ ಮಲ್ಲಿಗೆ ಕೃಷಿ, ಪಪ್ಪಾಯಿ ಕೃಷಿ, ತರಕಾರಿ ಕೃಷಿ, ಹೈನುಗಾರಿಕೆ, ಹಟ್ಟಿರಚನೆ, ನೀರಾವರಿ ಮೂಲ ಹಾಗೂ ವಿಧಾನ, ಪಶುಸಂಗೋಪನೆ, ಸೋಲಾರ್, ಗೋಬರ್ ಗ್ಯಾಸ್, ಯಂತ್ರೋಪಕರಣ ಇತ್ಯಾದಿ ಉದ್ದೇಶಗಳಿಗೆ ಪ್ರಗತಿನಿಧಿ ಪಡೆದು ಅನುಷ್ಠಾನ ಮಾಡಿದ ಒಟ್ಟು ರೈತರಿಗೆ ರೂ. 7.25 ಲಕ್ಷ ಅನುದಾನ ವಿತರಣೆ ಮಾಡುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ.ಯೋ (ರಿ) ಬಂಟ್ವಾಳ ಪ್ರಮುಖ ಪಾತ್ರ ವಹಿಸಿದೆ.

ತಾಲೂಕಿನ ಕೃಷಿ ಯಂತ್ರಧಾರೆ

ಯಂತ್ರೋಪಕರಣಗಳನ್ನು ಖರೀದಿ ಮಾಡಲು ಅಸಾಧ್ಯವಾದ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅವರ ಮನೆ ಬಾಗಿಲಿನಲ್ಲಿ ಕ್ಲಪ್ತ ಸಮಯಕ್ಕೆ ಮತ್ತು ಕೈಗೆಟಕುವ ಬಾಡಿಗೆ ದರದಲ್ಲಿ ದೊರಕುವಂತೆ ಮಾಡಲು ಜಿ.ಪಂ.ಕೃಷಿ ಇಲಾಖೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಂಟ್ವಾಳ ತಾಲೂಕು ಜಂಟಿ ಆಶ್ರಯದಲ್ಲಿ ಹೋಬಳಿ ಮಟ್ಟದ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ

ಪ್ರಾರಂಭಿಸಲಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ), ಬಂಟ್ವಾಳ ತಾಲೂಕಿನ ಸ್ವಸಹಾಯ ಸಂಘದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಕಿರುನೋಟವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 3.8 : ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ), ಬಂಟ್ವಾಳ ತಾಲೂಕು,

ಬಂಟ್ವಾಳ ತಾಲೂಕಿನ ಸಾಧನೆಯ ಅಂಕಿ ಅಂಶಗಳು

2014–2015

		ವರದಿ ವರ್ಷ	ಇದುವರೆಗೆ
	ವಲಯ	10	10
	ಕಾರ್ಯಕ್ಷೇತ್ರ	64	64
	ಒಕ್ಕೂಟಗಳ ಸಂಖ್ಯೆ	148	148
ಕಾರ್ಯನಿರ್ವಹಿಸುತ್ತಿರುವ ತಂಡಗಳು	ಪ್ರಗತಿ ಬಂಧು	742	742
	ಸ್ವ–ಸಹಾಯ ಸಂಘ	2615	2615
	ಒಟ್ಟು	3357	3357
	ಪ್ರಬುದ್ಧಗೊಂಡ ಜ್ಞಾನವಿಕಾಸ ಕೇಂದ್ರಗಳು	22	22
ಪ್ರಗತಿನಿಧಿ ಕಾರ್ಯಕ್ರಮ	ಉಳಿತಾಯ	2.72 ಕೋಟಿ	17.86 ಕೋಟಿ
	ವಿತರಿಸಲಾದ ಪ್ರಗತಿನಿಧಿ	123.38 ಕೋಟಿ	497.78 ಕೋಟಿ
	ಚಾಲ್ತಿ ಪ್ರಗತಿ ನಿಧಿ	129.72 ಕೋಟಿ	129.72 ಕೋಟಿ
	ಕಂತು ಬಾಕಿ	0.00 ಲಕ್ಷ	0.00 ಲಕ್ಷ
	ಲಾಭಾಂಶ ವಿತರಣೆ	0	5.65 ಕೋಟಿ
ನಡೆಸಲಾದ ಅಭಿವೃದ್ಧಿ ಪರ ಕಾರ್ಯಕ್ರಮಗಳು	ಕೃಷಿ ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳು	18	1461
	ಕೃಷಿ ಅಧ್ಯಯನ ಪ್ರವಾಸ	22	188
	ನಡೆಸಿದ ಕೃಷಿ ವಿಚಾರ ಸಂಕಿರಣ	10	57
	ಶ್ರೀ ಭತ್ತ ಬೇಸಾಯ ಮಾಡಿದ ಕುಟುಂಬ	61	4144
	ನಾಗರಿಕ ಪ್ರಜ್ಞೆ, ಪರಿಸರ ಹಾಗೂ ಸ್ವಚ್ಛತಾ ಕಾರ್ಯಕ್ರಮ	20	154
ಹಸಿರು ಇಂಧನ ಕಾರ್ಯಕ್ರಮ	ಸೋಲಾರ್ ಅಳವಡಿಕೆ	565	1474
	ಗೋಬರ್ ಗ್ಯಾಸ್ ಅಳವಡಿಕೆ	81	842
	ಪೈರೋ ಒಲೆ		5
	ಕುಕ್ ಸ್ಟವ್	477	676

ಸಂಪೂರ್ಣ ಸುರಕ್ಷಾ ಕಾರ್ಯಕ್ರಮ	ಸುರಕ್ಷಾ ನೋಂದಾವಣೆ ಮಾಡಿದ ಕುಟುಂಬ		20814	222429
	ನೋಂದಾವಣೆ ಮಾಡಿದ ಸದಸ್ಯರು		78393	883999
	ಸಂಗ್ರಹಿಸಲಾದ ಪ್ರೀಮಿಯಂ ಮೊತ್ತ		2.97 ಕೋಟಿ	20.76 ಕೋಟಿ
	ನೀಡಲಾದ ಸೌಲಭ್ಯದ ಮೊತ್ತ		2.34 ಕೋಟಿ	17.45 ಕೋಟಿ
ಮಾಶಾಸನ	ಮಾಶಾಸನ ನೀಡುತ್ತಿರುವ ಕುಟುಂಬ		76	76
ಸುಜ್ಞಾನ ನಿಧಿ	ಸುಜ್ಞಾನ ನಿಧಿ ಪಡೆಯುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ		193	834
	ಸುಜ್ಞಾನ ನಿಧಿ ನೀಡಿದ ಒಟ್ಟು ಮೊತ್ತ		10.96 ಲಕ್ಷ	83.90 ಲಕ್ಷ
ಪ್ರಾಕೃತಿಕ ದುರಂತ	ನೆರೆ ಪರಿಹಾರ, ಅನಿಲ ದುರಂತ ಪ್ರಕೃತಿ ವಿಕೋಪಕ್ಕೆ ಮಂಜೂರಾದ ಅನುದಾನ		0.38 ಲಕ್ಷ	4.29 ಲಕ್ಷ
ವಿಮಾ ಕಾರ್ಯಕ್ರಮ	ಜೀವನ ಮಧುರ ಪಾಲಿಸಿಗಳು		0	28309
	ಜೀವನ ಮಧುರ ಪಾಲಿಸಿಯಲ್ಲಿ ಮರಣ ಸಾಂತ್ವಾನ ನೀಡಲಾದ ಕುಟುಂಬ		51	220
	ಜೀವನ ಮಧುರ ಪಾಲಿಸಿಯಲ್ಲಿ ನೀಡಲಾದ ಮರಣ ಸಾಂತ್ವಾನ ಮೊತ್ತ		9.96 ಲಕ್ಷ	38.28 ಲಕ್ಷ
	ರಾಷ್ಟ್ರೀಯ ಪಿಂಚಣಿ ಯೋಜನೆ			7366
ಜನಜಾಗೃತಿ ಕಾರ್ಯಕ್ರಮ	ಮದ್ಯವರ್ಜನ ಶಿಬಿರ		2	43
	ಭಾಗವಹಿಸಿದ ಸದಸ್ಯರು		106	2685
ಸಮುದಾಯ ಅಭಿವೃದ್ಧಿ ಕಾರ್ಯಕ್ರಮ	ದೇವಸ್ಥಾನಗಳಿಗೆ ದೇಣಿಗೆ	56.60ಲಕ್ಷ	75.67 ಲಕ್ಷ	173.55 ಲಕ್ಷ
	ಕಾಮಗಾರಿ	13.46ಲಕ್ಷ		34.29 ಲಕ್ಷ
	ರುದ್ರಭೂಮಿ	5.49ಲಕ್ಷ		12.74 ಲಕ್ಷ
	ಜ್ಞಾನದೀಪ (ಶಾಲಾ ಕಟ್ಟಡ ರಚನೆ/ದುರಸ್ತಿ)	4.41 ಲಕ್ಷ		24.51 ಲಕ್ಷ

ಮೂಲ : ವಾರ್ಷಿಕ ವರದಿ ಸಾಧನಾ – 2015

ಉಪಸಂಹಾರ : ಎಸ್.ಕೆ.ಡಿ.ಆರ್.ಡಿ.ಪಿ (ರಿ) ಬಂಟ್ವಾಳ ತಾಲೂಕು ಇದರ ಸ್ವ ಸಹಾಯ ಗುಂಪುಗಳು ಎಲ್ಲಾ ರೀತಿಯ ಅಭಿವೃದ್ಧಿಯಲ್ಲಿ ಪಾತ್ರ ವಹಿಸಿದ್ದು ಈ ಮೇಲಿನ ವಿಶ್ಲೇಷಣೆಯಲ್ಲಿ ತಿಳಿಯುತ್ತದೆ. ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯೆಡೆಗೆ ತಲುಪುವಲ್ಲಿ ಎಸ್.ಕೆ.ಡಿ.ಆರ್.ಡಿ.ಪಿ (ರಿ) ಬಂಟ್ವಾಳ ಇದು ಮಹತ್ತರ ಪಾತ್ರ ವಹಿಸಿದೆ.

ಅಧ್ಯಾಯ–4

ದತ್ತಾಂಶ ಮತ್ತು ಮಾಹಿತಿ ವಿಶ್ಲೇಷಣೆ

ಅಧ್ಯಾಯ-4

ದತ್ತಾಂಶ ಮತ್ತು ಮಾಹಿತಿ ವಿಶ್ಲೇಷಣೆ

ಈ ಹಿಂದಿನ ಅಧ್ಯಾಯದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳ ಪರಿಚಯ ಹಾಗೂ ಹಮ್ಮಿಕೊಂಡ ವಿವಿಧ ಕಾರ್ಯಗಳ ಕಿರುಪರಿಚಯವನ್ನು ಮಾಡಲಾಗಿದೆ. ಮುಂದುವರೆದ ಭಾಗವಾಗಿ ಈ ಅಧ್ಯಾಯದಲ್ಲಿ ವಿವಿಧ ಮೂಲಗಳಿಂದ ಸಂಗ್ರಹಿಸಿ ದತ್ತಾಂಶ ಮತ್ತು ಮಾಹಿತಿಗಳ ವಿಶ್ಲೇಷಣೆಯನ್ನು ಸಂಖ್ಯಾಶಾಸ್ತ್ರ ಉಪಕರಣಗಳ ಮೂಲಕ ಈ ಅಧ್ಯಾಯದಲ್ಲಿ ಮಾಡಲಾಗುತ್ತದೆ.

"ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ" ಎಂಬ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಬಂಟ್ವಾಳ ತಾಲೂಕಿನ ಸ್ವ ಸಹಾಯ ಗುಂಪುಗಳಿಗೆ ಭೇಟಿ ನೀಡಿದಾಗ ಅನೇಕ ಮಹಿಳಾ ಸ್ವಸಹಾಯ ಗುಂಪುಗಳು ನಿರಂತರವಾಗಿ ಕಾರ್ಯಪ್ರವೃತ್ತವಾಗಿವೆ. ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾದ ನಂತರ ಮಹಿಳೆಯ ಸ್ಥಾನಮಾನ ಗಣನೀಯವಾಗಿ ಉತ್ತಮ ಮಟ್ಟಕ್ಕೆ ಏರಿಕೆಯಾಗಿರುವುದು ಕಂಡು ಬರುತ್ತದೆ. ಅದಲ್ಲದೆ ಅವರು ಇತರರಿಗೆ ಉತ್ತೇಜನ ನೀಡುತ್ತಾರೆ. ಸ್ವಸಹಾಯ ಗುಂಪಿಗೆ ಸೇರಿದ ನಂತರ ಅವರ ವ್ಯಕ್ತಿತ್ವ ಕೂಡಾ ವಿಕಾಸಗೊಂಡು ಮಹಿಳೆಯರು ತಮ್ಮ ಕುಟುಂಬಕ್ಕೆ ಒಂದು ಆಧಾರದೀಪವಾಗಿದ್ದಾರೆ.

ಸ್ವಸಹಾಯ ಗುಂಪಿಗೆ ಸೇರಿದ ಅನೇಕ ಮಹಿಳಾ ಸದಸ್ಯರು ನಿರುದ್ಯೋಗ ನಿವಾರಣಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ತಮ್ಮ ಸ್ವ ಉದ್ಯೋಗ ಕೈಗೊಂಡು ಒಳ್ಳೆಯ ಭವಿಷ್ಯವನ್ನು ಕಂಡುಕೊಂಡಿದ್ದಾರೆ. ಅವರ ಜೀವನಮಟ್ಟ ಸುಧಾರಿಸುವುದರ ಜೊತೆಗೆ ಸಮಾಜದಲ್ಲಿ ಅವರು ಗೌರವಯುತ ಸ್ಥಾನವನ್ನು ಪಡೆದಿದ್ದಾರೆ. ಸ್ವಸಹಾಯ ಸಂಘಕ್ಕೆ ಸೇರಿದ ಮೇಲೆ ಮಹಿಳಾ ಸದಸ್ಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ. ಅದೇ ರೀತಿ ಸಂಘಕ್ಕೆ ಸೇರಿದ ನಂತರ ಆರ್ಥಿಕ ಅಭಿವೃದ್ಧಿ ಹೊಂದಿದವರು ಇತರರಿಗೆ ಈ ಯೋಜನೆಯ ಮಹತ್ವವನ್ನು ತಿಳಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಸ್ವಸಹಾಯ ಸಂಘಕ್ಕೆ ಸೇರಿದ ಮಹಿಳಾ ಸದಸ್ಯರು ವಿಮಾ ಯೋಜನೆ, ಕೃಷಿ ತರಬೇತಿ, ಜ್ಞಾನ ವಿಕಾಸ, ಗ್ರಾಮ ನೈರ್ಮಲ್ಯ ಮುಂತಾದ ಜಾಗೃತಿ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡಿದ್ದಾರೆ. ದುರ್ಬಲ ವರ್ಗದ ಮಹಿಳೆಯರು ಕುಟುಂಬ ನಿರ್ವಹಣಾ ಜಾಣ್ಮೆ, ಹಣಕಾಸು ವ್ಯವಹಾರ

ಜ್ಞಾನ, ಮಕ್ಕಳ ಶಿಕ್ಷಣ, ಪೌಷ್ಠಿಕ ಆಹಾರ ಮತ್ತು ವೈಯಕ್ತಿಕ ಶುಚಿತ್ವ, ಪರಿಸರ ಪ್ರಜ್ಞೆ, ಸ್ವ ಉದ್ಯೋಗ, ನಾಗರಿಕ ಸೌಲಭ್ಯಗಳ ಬಳಕೆ ಹಾಗೂ ಇನ್ನೂ ಹಲವಾರು ರೀತಿಯಲ್ಲಿ ಸಂಘಗಳಿಂದ ಪ್ರೇರಣೆ ಪಡೆದಿದ್ದಾರೆ. ರಾಜ್ಯದ ಸುಮಾರು 27 ಲಕ್ಷ ಮಹಿಳೆಯರಿಗೆ ತರಬೇತಿ, ಪ್ರೇರಣಾ ಕಾರ್ಯಕ್ರಮಗಳನ್ನು ನೀಡುವುದಕ್ಕಾಗಿ 1,53,000 ವಿವಿಧ ತರಬೇತಿಗಳನ್ನೂ ಹಮ್ಮಿಕೊಳ್ಳುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಫಲವಾಗಿದೆ. ಅಲ್ಲದೆ 2,300ಕ್ಕೂ ಮಿಕ್ಕಿದ ಗ್ರಂಥಾಲಯಗಳನ್ನು ಗ್ರಾಮ ಮಟ್ಟದಲ್ಲಿ ಮಹಿಳೆಯರು ತಮ್ಮ ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಸ್ವಸಹಾಯ ಸಂಘವನ್ನು ವೇದಿಕೆಯಾಗಿ ಬಳಸಿಕೊಂಡಿದ್ದಾರೆ.

ಸ್ವಸಹಾಯ ಸಂಘಗಳ ಸದಸ್ಯರಾದ ಬಳಿಕ ಮಹಿಳೆಯರು ಶೈಕ್ಷಣಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಮುನ್ನಡೆಯನ್ನು ಸಾಧಿಸಿದ್ದಾರೆ. ಈ ರೀತಿಯ ಸಬಲೀಕರಣದ ಹಿಂದೆ ಸದಸ್ಯರ ಶ್ರಮವು ಒಳಗೊಂಡಿದೆ. ಬಂಟ್ವಾಳ ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಬಹಳ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಘಗಳ ಮೂಲಕ ಸಿಕ್ಕ ವ್ಯವಹಾರಿಕ ಜ್ಞಾನ, ಇದರಿಂದ ಅವರಿಗೆ ಸಿಗುವ ಆತ್ಮಸ್ಥೈರ್ಯ ಅವರ ಜೀವನ ಕ್ರಮವನ್ನೇ ಬದಲಾಯಿಸಿದೆ. ಈ ಅಧ್ಯಾಯದಲ್ಲಿ ಸಮೀಕ್ಷೆ ಮೂಲಕ ಸಂಗ್ರಹಿಸಿದ ಮಾಹಿತಿ ಮತ್ತು ದತ್ತಾಂಶಗಳನ್ನು ಈ ಕೆಳಗೆ ವಿಮರ್ಶಿಸಿ ವಿಶ್ಲೇಷಿಸಿ ನಾನು ತಯಾರಿಸಿದ ಪ್ರಶ್ನಾವಳಿ ಮತ್ತು ಮುಖತ: ಭೇಟಿಯ ಅನುಭವಗಳನ್ನು ನಕ್ಷೆಯ ಮೂಲಕ ಕೆಳಗೆ ನೀಡಲಾಗಿದೆ.

ಕೋಷ್ಟಕ : 4.1 :ಮಾಹಿತಿದಾರರ ವಯಸ್ಸು

ಕ್ರಮಸಂಖ್ಯೆ	ವಯೋಮಾನ	ಸಂಖ್ಯೆ	ಪ್ರತಿಶತ
1	19 ರಿಂದ ಕಡಿಮೆ ವರ್ಷಗಳು	2	2
2	20 ರಿಂದ 30 ವರ್ಷಗಳು	12	12
3	31 ರಿಂದ 40 ವರ್ಷಗಳು	34	34
4	41 ರಿಂದ 50ವರ್ಷಗಳು	42	42
5	50 ಕ್ಕಿಂತ ಹೆಚ್ಚು	10	10
	ಒಟ್ಟು	100	

ಆಕರ : ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಕಂಡು ಬರುವಂತೆ ಅತೀ ಹೆಚ್ಚು ಮಾಹಿತಿದಾರರು 41 ರಿಂದ 50 ವರ್ಷಗಳ ಶ್ರೇಣಿಯಲ್ಲಿ ಕಂಡು ಬರುತ್ತಾರೆ. ಎರಡನೆಯ ಸ್ಥಾನದಲ್ಲಿ 34 ಪ್ರತಿಶತ (34 ಮಹಿಳೆಯರು) ನಂತರದ ಸ್ಥಾನದಲ್ಲಿ

ದ್ದಾರೆ. ಅತೀ ಕಡಿಮೆ ಮಾಹಿತಿದಾರರು ಶೇಕಡಾ 2 ಆಗಿದ್ದು, ಇವರು 19 ವರ್ಷದ ಕೆಳಗಿನ ಮಹಿಳಾ ಮಾಹಿತಿದಾರರು. ಮೇಲಿನ ಅಂಕಿ ಸಂಖ್ಯೆಗಳ ಪ್ರಕಾರ 75 ಪ್ರತಿಶತಕ್ಕಿಂತ ಜಾಸ್ತಿ 31–51 ವರ್ಷದ ಗುಂಪಿನಲ್ಲಿ ಕಾಣುತ್ತದೆ.

ವಿಶ್ಲೇಷಣೆ : ಒಟ್ಟಿನಲ್ಲಿ ಸ್ವಸಹಾಯ ಗುಂಪಿನ ಕಾರ್ಯಕರ್ತರಲ್ಲಿ 31 ವರ್ಷಕ್ಕಿಂತ ಹೆಚ್ಚಿನವರು ಕಂಡು ಬರುತ್ತಾರೆ. ಅಂದರೆ ಹೆಚ್ಚಾಗಿ ಮಧ್ಯ ವಯಸ್ಕ ಮಹಿಳೆಯರು ಸ್ವಸಹಾಯ ಗುಂಪಿನ ಸದಸ್ಯರೆಂದು ತಿಳಿಯಬಹುದು. ಅಂದರೆ ಹೆಚ್ಚಾಗಿ ಜವಾಬ್ದಾರಿ ಉಳ್ಳವರು ಆ ವಯಸ್ಸಿನಲ್ಲಿ ಕುಟುಂಬ ನಿರ್ವಹಣೆಯಲ್ಲಿ ಸಹಕಾರಿಯಾಗಿರುವುದು ಕಂಡುಬರುತ್ತದೆ. ಮೇಲಿನ ಕೋಷ್ಟಕದಲ್ಲಿ ಕಂಡು ಬಂದಂತೆ ಗುಂಪಿನಲ್ಲಿ 50 ವರ್ಷಕ್ಕಿಂತ ಹೆಚ್ಚಿನ ಮಹಿಳೆಯರು ಶೇಕಡಾ 10 ರಷ್ಟು ಮಾತ್ರ ಕಂಡುಬರುತ್ತಾರೆ. ಅಂತೆಯೇ 20 ವರ್ಷದಿಂದ ಕಡಿಮೆ ಇರುವ ಸದಸ್ಯರ ಸಂಖ್ಯೆ ಕೂಡಾ ಕನಿಷ್ಠವಾಗಿದೆ. ಇದರಿಂದಾಗಿ ಎರಡೂ ವರ್ಗದ ಮಹಿಳೆಯರು ಆರ್ಥಿಕ ಹಾಗೂ ದೈಹಿಕವಾಗಿ ಇರುವ ದುರ್ಬಲತೆಯೇ ಇವರ ಸಂಖ್ಯೆಯಲ್ಲಿ ಇಳಿತ ಕಂಡು ಬರಲು ಕಾರಣವಾಗಿದೆ ಎಂದು ಅರ್ಥೈಸಬಹುದು.

ಕೋಷ್ಟಕ 4.2 : ಮಾಹಿತಿದಾರರ ಮೀಸಲಾತಿಯ ವಿವರ

ಕ್ರಮಸಂಖ್ಯೆ	ಮೀಸಲಾತಿ	ಮಾಹಿತಿದಾರರ ಸಂಖ್ಯೆ	ಶೇಕಡಾ
1	ಇತರೆ ಹಿಂದುಳಿದ ವರ್ಗ	79	79
2	ಪರಿಶಿಷ್ಟ ಜಾತಿ	03	3
3	ಪರಿಶಿಷ್ಟ ಪಂಗಡ	04	4
4	ಇತರೆ	04	4

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಸಮೀಕ್ಷೆಯಲ್ಲಿ ಕಂಡುಬಂದ ಮೀಸಲಾತಿ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದಾಗ ಮೇಲ್ವರ್ಗಕ್ಕೆ ಸೇರಿದ ಮಹಿಳೆಯರು ಸ್ವಸಹಾಯ ಗುಂಪಿನ ಸದಸ್ಯರಾಗಿರುವುದು ಕಂಡು ಬರುವುದಿಲ್ಲ. ಮೇಲಿನ ಕೋಷ್ಟಕದಲ್ಲಿ ಕಾಣುವಂತಹ 4 ಪ್ರತಿಶತ (4 ಜನ ಮಹಿಳೆಯರು)ರಲ್ಲಿ ಕೇವಲ ಓರ್ವ ಮಹಿಳೆ ಮಾತ್ರ ಮೇಲ್ವರ್ಗಕ್ಕೆ ಸೇರಿದವರು ಎಂದು ಸಂದರ್ಶನದಲ್ಲಿ ತಿಳಿದು ಬಂದಿದೆ.

ವಿಶ್ಲೇಷಣೆ : ಮೇಲ್ವರ್ಗದ (ಉದಾ : ಬ್ರಾಹ್ಮಣ) ಮಹಿಳೆಯರು. ಸ್ವಸಹಾಯ ಗುಂಪಿನ ಸದಸ್ಯರಾಗಲು ಉತ್ಸಾಹ ತೋರಿಸುವುದಿಲ್ಲ ಎಂದು ತಿಳಿಯಬಹುದು. ಇದು ನಮ್ಮ ದೈನಂದಿನ ವ್ಯವಹಾರದಲ್ಲಿ ಕೂಡಾ ಕಂಡುಬರುತ್ತದೆ. ಸಾಮಾಜಿಕವಾಗಿಯೂ ಮೇಲ್ವರ್ಗದ ಜನರು ಹಿಂದುಳಿದ ವರ್ಗದೊಡನೆ ಬೆರೆಯುವುದು ಕಂಡುಬರುವುದಿಲ್ಲ. ಈ ವಿಷಯ ಅಧ್ಯಯನಕ್ಕಾಗಿ ಮಾಡಿದ ಸಮೀಕ್ಷೆಯಲ್ಲಿ ಕಂಡುಬರುತ್ತದೆ. ಆದುದರಿಂದಲೇ ಸಮೀಕ್ಷೆಯ ಒಟ್ಟು ಸಂಖ್ಯೆಯಲ್ಲಿ ಕೇವಲ ಓರ್ವ ಮಹಿಳೆ ಮಾತ್ರ ಮೇಲ್ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಕೋಷ್ಟಕ 4.3 :ಮಾಹಿತಿದಾರರ ವಿದ್ಯಾರ್ಹತೆಯ ವಿವರ

ಕ್ರಮಸಂಖ್ಯೆ	ವಿದ್ಯಾರ್ಹತೆ	ಸಂಖ್ಯೆ	ಶೇಕಡಾ
1	ಅನಕ್ಷರಸ್ಥರು	10	10
2	ಪ್ರಾಥಮಿಕ ಶಿಕ್ಷಣ	58	58
3	ಪ್ರೌಢಶಿಕ್ಷಣ	15	15
4	ಪದವಿಪೂರ್ವ ಶಿಕ್ಷಣ	10	10
5	ಪದವಿ	5	5
6	ಸ್ನಾತಕೋತ್ತರ	2	2

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಸಮೀಕ್ಷೆಯಲ್ಲಿ ಕಂಡುಬರುವಂತೆ ಮಾಹಿತಿದಾರರ ವಿದ್ಯಾರ್ಹತೆಯನ್ನು ಗಮನಿಸಿದಾಗ ಹೆಚ್ಚಿನವರು 90 ಪ್ರತಿಶತ ಸದಸ್ಯರು ಅಕ್ಷರಸ್ಥರು ಎಂದು ತಿಳಿಯುತ್ತದೆ. ಇವರಲ್ಲಿ ಹೆಚ್ಚಿನವರು ಪದವಿಪೂರ್ವ ಶಿಕ್ಷಣಕ್ಕಿಂತ ಕಡಿಮೆ ವಿದ್ಯಾಭ್ಯಾಸ ಹೊಂದಿದವರು. ಪದವಿಗಿಂತ ಹೆಚ್ಚು ವಿದ್ಯಾರ್ಹತೆ ಉಳ್ಳವರು ಕೇವಲ 7 ಪ್ರತಿಶತ. ಇದರಿಂದ ಪದವಿಪೂರ್ವಕ್ಕಿಂತ ಹೆಚ್ಚು ವಿದ್ಯಾರ್ಹತೆ ಉಳ್ಳವರು ಬೇರೆ ಉದ್ಯೋಗದತ್ತ ಹೋಗಿರುವುದನ್ನು ಗಮನಿಸಲಾಗಿದೆ.

ವಿಶ್ಲೇಷಣೆ : ಪದವಿಪೂರ್ವಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ಹೊಂದಿರುವವರು ಇತರೆ ಉದ್ಯೋಗಗಳನ್ನು ಮಾಡುತ್ತಿದ್ದು, ಕ್ಷೇತ್ರ ಬಿಟ್ಟು ಹೊರಗೆ ಹೋಗಿರುತ್ತಾರೆ. ಮತ್ತು ಸ್ವಸಹಾಯ ಗುಂಪುಗಳಲ್ಲಿ ಕಡಿಮೆ ಸಂಖ್ಯೆಗಳಲ್ಲಿ ಸದಸ್ಯತ್ವ ಹೊಂದಿದ್ದಾರೆ. ಅಂತೆಯೇ ಪದವಿಪೂರ್ವ ಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣ ಪಡೆದ ಸದಸ್ಯರು ಹೆಚ್ಚಾಗಿ ಕ್ಷೇತ್ರಗಳಲ್ಲೇ ಉಳಿಯುವ ಕಾರಣದಿಂದಾಗಿ ಅವರ ಸಂಖ್ಯೆ ಈ ಸ್ವಸಹಾಯ ಗುಂಪಿನಲ್ಲಿ ಹೆಚ್ಚಾಗಲು ಕಾರಣವಾಗಿರಬಹುದು ಎಂದು ವಿಶ್ಲೇಷಿಸಬಹುದು. ಪದವಿಪೂರ್ವ ಶಿಕ್ಷಣ ಹೊಂದಿದ ಮತ್ತು ಅದರಿಂದ ಕೆಳಗೆ ವಿದ್ಯಾರ್ಹತೆ ಪಡೆದ ಮಹಿಳೆಯರು

ಎಸ್.ಕೆ.ಡಿ.ಆರ್.ಡಿ.ಪಿ ಯ ಸಹಾಯ ಪಡೆದು ಸಬಲೀಕರಣವಾದುದು ಗಮನಕ್ಕೆ ಬರುತ್ತದೆ. ಅವರಿಗೆ ಸ್ವ ಉದ್ಯೋಗ ತರಬೇತಿ ಹಾಗೂ ಇನ್ನೂ ಹಲವು ವ್ಯಕ್ತಿತ್ವ ವಿಕಸನ ಶಿಬಿರಗಳ ಸಹಾಯದಿಂದ ವಿಕಸನವಾಗಲು ಸಹಕಾರಿಯಾಗಿದೆ.

ಕೋಷ್ಟಕ 4.4 : ಮಾಹಿತಿದಾರರ ವೈವಾಹಿಕ ಸ್ಥಿತಿಗತಿ

ಕ್ರಮಸಂಖ್ಯೆ	ವೈವಾಹಿಕ ಸ್ಥಾನಮಾನ	ಸಂಖ್ಯೆ	ಶೇಕಡಾ
1	ಅವಿವಾಹಿತೆಯರು	13	13
2	ವಿವಾಹಿತೆಯರು	73	73
3	ವಿಚ್ಛೇದಿತರು	1	1
4	ವಿಧವೆಯರು	04	04
	ಒಟ್ಟು	100	

ಮೂಲ : ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರ ವೈವಾಹಿಕ ಸ್ಥಾನಮಾನವನ್ನು ನೀಡಲಾಗಿದೆ. ಮಾಹಿತಿದಾರರು ಶೇಕಡಾ 73 ರಷ್ಟು ವಿವಾಹಿತರು. ಹಾಗೆಯೇ 13 ಪ್ರತಿಶತ ಮಂದಿ ಅವಿವಾಹಿತರು. ಈ ಮಾಹಿತಿ ವಿಶ್ಲೇಷಣೆಯ ಪ್ರಕಾರ ಸುಮಾರು ಶೇಕಡಾ 75 ರಷ್ಟು ಮಂದಿ ವಿವಾಹಿತರು ತಮ್ಮ ವಿರಾಮದ ಸಮಯದಲ್ಲಿ ಹೆಚ್ಚಾಗಿ ಸಂಘದ ಸದಸ್ಯರಾಗಿ ತಮ್ಮ ವಿಕಸನದಲ್ಲಿ ತೊಡಗಿದ್ದಾರೆ. ಅದರಲ್ಲೂ ಕೃಷಿ, ಬೀಡಿ ಕಾರ್ಮಿಕರು ತಮ್ಮ ಸದಸ್ಯತ್ವ ಪಡೆದುಕೊಂಡಿರುವುದು ಸಂದರ್ಶನದಲ್ಲಿ ಕಂಡು ಬಂದಿದೆ. ಶೇಕಡಾ 5 ರಷ್ಟು ಮಹಿಳೆಯರು ವಿಚ್ಛೇದಿತರು ಹಾಗೂ ವಿಧವೆಯರು.

ವಿಶ್ಲೇಷಣೆ : ಕೋಷ್ಟಕದ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಮೇಲೆ ತಿಳಿಸಿದಂತೆ ವಿವಾಹಿತ ಸದಸ್ಯೆಯರು ಹೆಚ್ಚಾಗಿದ್ದಾರೆ. ಹಾಗೆಯೇ ಕಡಿಮೆ ಪ್ರಮಾಣದಲ್ಲಿ ಅವಿವಾಹಿತರು ಇದ್ದಾರೆ ಎಂಬುದು ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ. ವಿವಾಹಿತ ಸದಸ್ಯೆಯರಿಗೆ ಉಪ ಉದ್ಯೋಗಗಳಿದ್ದರೂ ವಿರಾಮ ಸಮಯ ಹೆಚ್ಚಾಗಿರುವುದು ಸಂದರ್ಶನದಲ್ಲಿ ಕಂಡುಬಂದಿದೆ. ಈ ಕಾರಣದಿಂದಾಗಿ ವಿರಾಮದ ಸಮಯದ ಸದುಪಯೋಗಕ್ಕಾಗಿ ಅವರು ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದಿರುತ್ತಾರೆಂದು ಮಾಹಿತಿದಾರರಿಂದ ತಿಳಿದುಬರುತ್ತದೆ.

ಕೋಷ್ಟಕ 4.5 : ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಸ್ವಂತ ಮನೆ ಹೊಂದಿರುವವರ ವಿವರ

ಕ್ರಮಸಂಖ್ಯೆ	ಕುಟುಂಬದ ಸದಸ್ಯರ ಸಂಖ್ಯೆ	ಸಂಖ್ಯೆ	ಸ್ವಂತ ಮನೆ ಹೊಂದಿರುವವರು
1	01–05 ಮಂದಿ	74	74
2	05–10 ಮಂದಿ	26	26
3	10–15 ಮಂದಿ	–	–

ಮೂಲ : ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಕಂಡುಬರುವಂತೆ ಕುಟುಂಬದ ಸದಸ್ಯರ ಸಂಖ್ಯೆ ಶೇಕಡಾ 74 ಮಂದಿಯ ಮನೆಯ ಸದಸ್ಯರು ಒಂದರಿಂದ 5 ಜನರ ಒಳಗೆ. ಇದನ್ನು ವಿಶ್ಲೇಷಿಸಿದಾಗ ಇತ್ತೀಚಿನ ದಿನಗಳಲ್ಲಿ ಸೂಕ್ಷ್ಮ ಕುಟುಂಬಗಳು ಹೆಚ್ಚಾಗಿರುವುದು ಕಂಡುಬರುತ್ತದೆ. ಮನೆಯಲ್ಲಿ 5 ರಿಂದ 10 ಮಂದಿ ಇರುವವರು ಶೇಕಡಾ 26 ಸದಸ್ಯರಲ್ಲಿ ಮಾತ್ರ ಕಂಡುಬರುತ್ತದೆ. 10 ಜನರಿಂದ 15 ಮಂದಿ ಕುಟುಂಬ ಸದಸ್ಯರು ಇದ್ದದ್ದು ಸಂದರ್ಶನ ಸಂದರ್ಭದಲ್ಲಿ ಕಂಡುಬರಲಿಲ್ಲ.

ವಿಶ್ಲೇಷಣೆ : ಕೋಷ್ಟಕ 5.5 ರಲ್ಲಿ ತಿಳಿಸಿರುವಂತೆ ಸಮೀಕ್ಷೆಗೆ ಒಳಗಾದ ಎಲ್ಲಾ ಸದಸ್ಯರು ಸ್ವಂತ ಮನೆ ಹೊಂದಿರುತ್ತಾರೆ. ನೇರ ಸಂದರ್ಶನದಲ್ಲಿ ಕಂಡುಬಂದಂತೆ ಈ ಸದಸ್ಯರು ಒಂದಲ್ಲ ಒಂದು ರೀತಿಯಲ್ಲಿ ಸ್ವಸಹಾಯ ಗುಂಪಿನಿಂದ ಸ್ವಂತ ಮನೆಗಾಗಿ ಆರ್ಥಿಕ ಸಹಾಯವನ್ನು ಪಡೆದವರೇ ಆಗಿರುತ್ತಾರೆ. ಅಂದರೆ ಈ ಗುಂಪುಗಳು ಸದಸ್ಯರ ಆರ್ಥಿಕ ಉನ್ನತೀಕರಣಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸಹಕಾರ ನೀಡಿದ ವಿಷಯ ಗಮನಾರ್ಹವಾಗಿದೆ. ಆದುದರಿಂದ ವಿಶ್ಲೇಷಿಸುವುದೇನೆಂದರೆ, ಸದಸ್ಯರ ಮನೆಗಳಲ್ಲಿ ಒಂದರಿಂದ 5 ಮಂದಿ ಇದ್ದು, ಅವರೆಲ್ಲ ಆಗುಹೋಗುಗಳಲ್ಲಿ ಸದಸ್ಯರು ಪರಸ್ಪರ ಸಹಕಾರದಿಂದ ಅವಲಂಬಿತವಾಗಿ ಜೀವನ ನಡೆಸುತ್ತಿದ್ದಾರೆ.

ಕೋಷ್ಟಕ 4.6 : ಮಾಹಿತಿದಾರರ ಮನೆಯ ಸ್ವರೂಪ

ಕ್ರಮಸಂಖ್ಯೆ	ಮನೆಯ ಸ್ವರೂಪ	ಸಂಖ್ಯೆ	ಶೇಕಡಾ
1	ಆರ್.ಸಿ.ಸಿ	33	33
2	ಹಂಚಿನ ಮನೆ	67	67
3	ಇತರೆ	0	0
	ಒಟ್ಟು	100	

ಮೂಲ : ಕ್ಷೇತ್ರ ಕಾರ್ಯ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಸ್ವಸಹಾಯ ಸಂಘದ ಸದಸ್ಯರ ಮನೆಯ ಸ್ವರೂಪವನ್ನು ನೀಡಲಾಗಿದೆ. ಕೋಷ್ಟಕದಲ್ಲಿ ಕಾಣುವಂತೆ ಹೆಚ್ಚಿನ ಸದಸ್ಯರು ಹಂಚಿನ ಮನೆಯಲ್ಲಿ ವಾಸವಾಗಿದ್ದು, ಶೇಕಡಾ 33 ಸದಸ್ಯರು ಆರ್.ಸಿ.ಸಿ ಮನೆಯಲ್ಲಿ ವಾಸವಾಗಿರುತ್ತಾರೆ.

ವಿಶ್ಲೇಷಣೆ : ಸಂಘದ ಸದಸ್ಯರಾದ ಮೇಲೆ ಸಾಲದ ಸಹಕಾರದಿಂದ ಹಲವಾರು ಸದಸ್ಯರ ಮನೆಯ ಸ್ವರೂಪವೂ ಬದಲಾಗಿದೆ. ಸದಸ್ಯರಾದ ಬಳಿಕ ಉತ್ತಮ ಬೆಳವಣಿಗೆ ಕಂಡುಬಂದಿದೆ. ಜೀವನಮಟ್ಟ ಉತ್ತಮವಾಗಿದೆ ಎಂದು ತಿಳಿಯಬಹುದು. ಮಾಹಿತಿದಾರರು ಸಂದರ್ಶನದಲ್ಲಿ ನೀಡಿದ ಮಾಹಿತಿಯಂತೆ ಹಂಚಿನ ಮನೆ ಹೊಂದಿರುವ ಸದಸ್ಯರು ಸ್ವಸಹಾಯ ಗುಂಪಿನಿಂದ ಮನೆ ನಿರ್ಮಾಣಕ್ಕಾಗಿ ಸಾಲ ಪಡೆದವರೇ ಆಗಿರುತ್ತಾರೆ. ಆರ್.ಸಿ.ಸಿ. ಮನೆ ಹೊಂದಿದವರು ಹೆಚ್ಚಾಗಿ ತಮ್ಮ ಸ್ವಂತ ಆದಾಯದಿಂದ ಮನೆ ನಿರ್ಮಾಣ ಮಾಡಿದವರಾಗಿರುತ್ತಾರೆ. ಸಾಲದ ಮಿತಿಯಿಂದಾಗಿ ಹೆಚ್ಚಿನ ಸದಸ್ಯರಿಗೆ ಆರ್.ಸಿ.ಸಿ.ಮನೆ ಹೊಂದಲು ಸಾಧ್ಯವಾಗಿಲ್ಲ. ಇದರಿಂದ ತಿಳಿಯುವ ವಿಷಯವೇನೆಂದರೆ, ಹೆಚ್ಚಿನ ಸದಸ್ಯರಿಗೆ ಸಾಲ ರೂಪವಾಗಿ ಆರ್ಥಿಕ ಸಹಾಯ ನೀಡುವುದರ ಮೂಲಕ ಅವರ ಸಬಲೀಕರಣಕ್ಕೆ ಸ್ವಸಹಾಯ ಗುಂಪುಗಳು ಸಹಕರಿಸುತ್ತವೆ ಎಂದು ಅಭಿಪ್ರಾಯಪಡಬಹುದು.

ಕೋಷ್ಟಕ 4.7 : ಮಾಹಿತಿದಾರರ ಉದ್ಯೋಗದ ವಿವರ

ಕ್ರಮಸಂಖ್ಯೆ	ಉದ್ಯೋಗ	ಸಂಖ್ಯೆ	ಶೇಕಡಾ
1	ಬೀಡಿ	59	59
2	ಕೂಲಿ	10	10
3	ಖಾಸಗಿ	3	3
4	ಕೃಷಿ	13	13
5	ಸ್ವ ಉದ್ಯೋಗ	2	2
6	ಇತರೆ	13	13
7	ಸರಕಾರಿ	0	0
	ಒಟ್ಟು	100	

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಸಮೀಕ್ಷೆಯಲ್ಲಿ ಮಾಹಿತಿದಾರರ ಉದ್ಯೋಗವನ್ನು ವಿಶ್ಲೇಷಿಸಿದಾಗ ಸಾಮಾನ್ಯ ಅರ್ಧದಷ್ಟು ಅಂದರೆ ಶೇಕಡಾ 59 ಮಹಿಳೆಯರು ಬೀಡಿ ಉದ್ಯೋಗದಲ್ಲಿ ತೊಡಗಿರುವುದು ಗಮನಕ್ಕೆ ಬರುತ್ತದೆ. ಕೂಲಿ ಕೆಲಸದಲ್ಲಿ ತೊಡಗಿಸಿಕೊಂಡ

ಮಹಿಳೆಯರು ಶೇಕಡಾ 10 ಖಾಸಗಿ ಕೆಲಸದಲ್ಲಿ ಮತ್ತು ಸ್ವ ಉದ್ಯೋಗದಲ್ಲಿ ಉದ್ಯೋಗ ಮಾಡುತ್ತಾ ಇರುವವರು ಶೇಕಡಾ 5. ಶೇಕಡಾ 13 ಮಹಿಳೆಯರು ಕೃಷಿಯನ್ನು ತಮ್ಮ ಜೀವನಾಧಾರವಾಗಿ ನಂಬಿಕೊಂಡು ಬಂದಿರುವವರು.

ವಿಶ್ಲೇಷಣೆ : ಉದ್ಯೋಗಸ್ಥ ಮಹಿಳೆಯರು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವ ಕಾರಣ ಸರಕಾರಿ ಕೆಲಸದಲ್ಲಿರುವ ಮಹಿಳೆಯರು ಸ್ವಸಹಾಯ ಸಂಘದಲ್ಲಿ ಸದಸ್ಯತ್ವ ಹೊಂದಿರುವುದು ಕಂಡುಬರಲೇ ಇಲ್ಲ. ಆದುದರಿಂದ ಹೆಚ್ಚಾಗಿ ತಮ್ಮ ಉದ್ಯೋಗದಲ್ಲಿ (ವಿರಾಮದ) ಬಿಡುವಿನ ಸಮಯ ದೊರಕುವವರು ಮಾತ್ರ ಈ ಸಂಘದ ಸದಸ್ಯರಾಮುದನ್ನು ಗಮನಿಸಬಹುದು. ಕೃಷಿ ಕೆಲಸದಲ್ಲಿ ಅಥವಾ ಬೀಡಿ ಕಾರ್ಮಿಕ ಮಹಿಳೆಯರು ಹೆಚ್ಚಾಗಿ ಸದಸ್ಯರಾಗಿದ್ದಾರೆ ಮತ್ತು ಅವರ ಸರ್ವತೋಮುಖ ಅಭಿವೃದ್ಧಿಯಾಗಿ ಅವರ ಕುಟುಂಬದಲ್ಲಿ ಅವರಿಗೆ ಹೆಚ್ಚಿನ ಸ್ಥಾನಮಾನ ದೊರಕಿರುವುದು ಕಂಡುಬಂದಿದೆ.

ಕೋಷ್ಟಕ 4.8 : ಸದಸ್ಯರ ತಿಂಗಳ ಆದಾಯ

ಕ್ರಮಸಂಖ್ಯೆ	ತಿಂಗಳ ಆದಾಯ	ಮಾಹಿತಿದಾರರ ಸಂಖ್ಯೆ	ಶೇಕಡಾ
1	1000–5000	58	58
2	5000–10000	32	32
3	10000–15000	10	10
	ಒಟ್ಟು	100	100

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಕೋಷ್ಟಕದಲ್ಲಿ ಎಸ್.ಕೆ.ಡಿ.ಆರ್.ಡಿ.ಪಿ ಸ್ವ ಸಹಾಯ ಸಂಘದ ಕುಟುಂಬದ ತಿಂಗಳ ಆದಾಯವನ್ನು ತೋರಿಸಲಾಗಿದೆ. ಈ ಮಾಹಿತಿ ಪ್ರಕಾರ ಶೇಕಡಾ 58 ಸದಸ್ಯರ ತಿಂಗಳ ಆದಾಯ 1,000 ರೂಪಾಯಿಯಿಂದ 5,000 ರೂಪಾಯಿಯ ಒಳಗೆ ಆಗಿರುತ್ತದೆ. ಶೇಕಡಾ 32 ಸದಸ್ಯರ ಆದಾಯ ರೂ. 5,000 ದಿಂದ 10,000 ವರೆಗೆ ಮತ್ತು ಶೇಕಡಾ 10 ಮಂದಿ ಮಹಿಳಾ ಸದಸ್ಯರ ಕುಟುಂಬದ ಆದಾಯ 10,000 ದಿಂದ 15,000 ರಷ್ಟು ಆಗಿರುತ್ತದೆ. ಆದುದರಿಂದ ಶೇಕಡಾ 58 ಸದಸ್ಯರ ತಿಂಗಳ ಆದಾಯ 5,000 ರೂಪಾಯಿಗಿಂತ ಕಡಿಮೆ ಇದೆ.

ವಿಶ್ಲೇಷಣೆ : ಹೆಚ್ಚಿನ ಆದಾಯ ಇರುವವರು ಸ್ವಸಹಾಯ ಗುಂಪಿನ ಆರ್ಥಿಕ ಸಹಾಯ ಅಪೇಕ್ಷಿಸದಿರುವುದನ್ನು ಗಮನಿಸಬಹುದು. ಈ ಮೂಲಕ ತಿಳಿಯುವುದೇನೆಂದರೆ ಹೆಚ್ಚಿನ ಆದಾಯ ಆಗುತ್ತಾ ಹೋದಂತೆ ಸದಸ್ಯರ ಸಂಖ್ಯೆ ಇಳಿಮುಖವಾಗಿರುವುದು ಕಂಡುಬರುತ್ತದೆ. ಆದಾಯಕ್ಕೂ ಸದಸ್ಯತ್ವಕ್ಕೂ ಪರೋಕ್ಷ ಸಂಬಂಧ ಇರುವುದನ್ನು ನಾವು

ವಿಶ್ಲೇಷಿಸಬಹುದು. ಕಡಿಮೆ ಆದಾಯ ಹೊಂದಿರುವವರಿಗೆ ಸಂಘದ ಸವಲತ್ತು ಅಗತ್ಯವಿದೆ ಅವರ ಅಭಿವೃದ್ಧಿಗೆ ಸಂಘಗಳು ಸಹಕರಿಸುತ್ತವೆ ಎಂಬುದನ್ನು ಗಮನಿಸಬಹುದು.

ಕೋಷ್ಟಕ 4.9 : ಸದಸ್ಯರ ತಿಂಗಳ ಖರ್ಚು

ಕ್ರಮಸಂಖ್ಯೆ	ತಿಂಗಳ ಖರ್ಚು	ಸಂಖ್ಯೆ	ಶೇಕಡಾ
1	1,000 ರೂ. – 2,000 ರೂ.	50	50
2	2,000 ರೂ. – 3,000 ರೂ.	30	30
3	3,000 ರೂ. – 4,000 ರೂ.	15	15
4	4,000 ರೂ. – 5,000 ರೂ.	5	5
	ಒಟ್ಟು	100	

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸದಸ್ಯರ ತಿಂಗಳ ಖರ್ಚುಗಳನ್ನು ತಿಳಿಸಲಾಗಿದೆ. ಶೇಕಡಾ 50 ಸದಸ್ಯರ ಕುಟುಂಬದ ಖರ್ಚು 1,000 ರೂ. ರಿಂದ 2,000 ರೂ. ಒಳಗೆ ಆಗುತ್ತದೆ. ಅಂದರೆ ಅರ್ಧದಷ್ಟು ಸದಸ್ಯರ ಖರ್ಚು ಬಹಳ ಕಡಿಮೆ ಇರುತ್ತದೆ. 2,000 ರಿಂದ 3,000 ರೂಪಾಯಿಯ ಒಳಗೆ ಖರ್ಚು ಮಾಡುವ ಸದಸ್ಯರ ಸಂಖ್ಯೆ 30 ಶೇಕಡಾ ಆಗಿದೆ. 3,000 ರಿಂದ 4,000 ರವರೆಗೆ ಕೇವಲ ಶೇಕಡಾ 15 ಮಂದಿ ಸದಸ್ಯರದ್ದಾಗಿದೆ. ಖರ್ಚು ಹೆಚ್ಚಾದಂತೆ ಸದಸ್ಯರ ಸಂಖ್ಯೆಯಾಗುವುದನ್ನು ಗಮನಿಸಬಹುದು. ಶೇಕಡಾ 20 ಸದಸ್ಯರ ಖರ್ಚು 3,000 ರಿಂದ 5,000 ರೂಪಾಯಿಯಾಗಿದೆ.

ವಿಶ್ಲೇಷಣೆ : ಜಾಸ್ತಿ ಖರ್ಚು ಮಾಡುವ ಕುಟುಂಬದ ಸದಸ್ಯರ ಸದಸ್ಯತ್ವ ಬಹಳ ಕಡಿಮೆ ಕಂಡು ಬರುತ್ತದೆ. ಶೇಕಡಾ 50 ಸದಸ್ಯರ ಕುಟುಂಬದ ಖರ್ಚು ಸುಮಾರು 2,000 ರೂಪಾಯಿಯಿಂದ 5,000 ರೂಪಾಯಿ ಒಳಗೆ ಇದ್ದು 4,000 ರೂಪಾಯಿಂದ 5,000 ರೂಪಾಯಿ ವರೆಗೆ ಖರ್ಚು ಮಾಡುವವರು ಕೇವಲ ಶೇಕಡಾ 5 ಮಂದಿ ಸದಸ್ಯರಾಗಿದ್ದಾರೆ.

ಕೋಷ್ಟಕ : 4.10 : ಸ್ವಸಹಾಯ ಗುಂಪಿಗೆ ಸೇರಿರುವ ಉದ್ದೇಶ

ಕ್ರಮಸಂಖ್ಯೆ	ಉದ್ದೇಶ	ಮಾಹಿತಿದಾರರ ಸಂಖ್ಯೆ	ಶೇಕಡಾ
1	ಆರ್ಥಿಕ ಸುಧಾರಣೆ	60	60
2	ಶಿಕ್ಷಣ	25	25
3	ನಿರುದ್ಯೋಗ ನಿವಾರಣೆ	10	10
4	ಇತರೆ	5	5

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಸ್ವ ಸಹಾಯ ಸೇರಿರುವ ಉದ್ದೇಶ ಗಮನಿಸಿದಾಗ ಹೆಚ್ಚಿನ ಸದಸ್ಯರ ಆರ್ಥಿಕ ಸುಧಾರಣೆ ಮತ್ತು ಬಡತನ ನಿವಾರಣೆಗಾಗಿ ಎಂದು ಗಮನಿಸಬಹುದು. ಮೇಲಿನ ಕೋಷ್ಟಕದಲ್ಲಿ ಹೇಳಿರುವಂತೆ ಶೇಕಡಾ 60 ಮಂದಿ ಸದಸ್ಯರು ಆರ್ಥಿಕ ಸುಧಾರಣೆಯ ಉದ್ದೇಶದಿಂದ ಸದಸ್ಯತ್ವವನ್ನು ಆರಿಸಿಕೊಂಡಿದ್ದಾರೆ. ಶೇಕಡಾ 25 ಮಂದಿ ಸದಸ್ಯರು ಶಿಕ್ಷಣ ಮಟ್ಟ ಸುಧಾರಣಾ ಉದ್ದೇಶದಿಂದ ಹೊಂದಿರುವುದು ಗಮನಿಸಬಹುದು. ಅಂದರೆ ತಮ್ಮ ಮಕ್ಕಳು ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸದಸ್ಯತ್ವ ಪಡೆದುಕೊಂಡಿದ್ದಾರೆ. ಶೇಕಡಾ 10 ಮಂದಿ ಸದಸ್ಯರು ತಮ್ಮ ನಿರುದ್ಯೋಗ ನಿವಾರಣಾ ಉದ್ದೇಶದಿಂದ ಅಂದರೆ ಸ್ವ ಉದ್ಯೋಗ ಹೊಂದುವ ಸಲುವಾಗಿ ಕೈಗೊಂಡಿದ್ದಾರೆ. ಹಾಗೂ ಶೇಕಡಾ 5 ಮಂದಿ ಸದಸ್ಯರು ಇತರೆ ಉದ್ದೇಶ ಅಂದರೆ ಮದುವೆ, ಒಡವೆ ಖರೀದಿ, ವಾಹನ ಖರೀದಿ, ಮನೆ ರಿಪೇರಿ ಹಾಗೂ ಹಲವಾರು ಉದ್ದೇಶಗಳಿಗೋಸ್ಕರ ಸದಸ್ಯತ್ವವನ್ನು ಪಡೆದಿದ್ದಾರೆ.

ವಿಶ್ಲೇಷಣೆ : ಮೇಲಿನ ವಿವರಗಳನ್ನು ಗಮನಿಸಿದಾಗ ಸ್ವಸಹಾಯ ಗುಂಪಿಗೆ ಸೇರಿದವರ ಉದ್ದೇಶ ತಮ್ಮ ಆರ್ಥಿಕ ಸುಧಾರಣೆ ಎಂಬುದು ವೇದ್ಯವಾಗುತ್ತದೆ. ಏಕೆಂದರೆ, ಮಾಹಿತಿದಾರರು ತಿಳಿಸಿದ ಇತರ ಉದ್ದೇಶಗಳಾದ ಶಿಕ್ಷಣ, ನಿರುದ್ಯೋಗ ನಿವಾರಣೆ, ಒಡವೆ ಖರೀದಿ, ವಾಹನ ಖರೀದಿ ಇವೆಲ್ಲವೂ ಹಣಕಾಸು ಬೇಡಿಕೆಯ ಕಾರ್ಯಗಳಾಗಿವೆ. ಅಂದರೆ, ಎಲ್ಲಾ ಉದ್ದೇಶಗಳು ಆರ್ಥಿಕ ಸುಧಾರಣೆ ಎಂದು ತಿಳಿಯಬಹುದು.

ಕೋಷ್ಟಕ : 4.11 : ಸ್ವ ಸಹಾಯ ಸದಸ್ಯರಾದ ಬಳಿಕ ತೃಪ್ತಿ ತಂದ ಮಟ್ಟ

ಕ್ರಮಸಂಖ್ಯೆ	ತೃಪ್ತಿ ತಂದ ಮಟ್ಟ	ಸದಸ್ಯರ ಸಂಖ್ಯೆ	ಶೇಕಡಾ
1	ಉತ್ತಮ	60	60
2	ಅತ್ಯುತ್ತಮ	40	40
3	ಸಮಾಧಾನಕರ	0	0
	ಒಟ್ಟು	100	

ಮೂಲ : ಕ್ಷೇತ್ರ ಸಮೀಕ್ಷೆ

ಸ್ವ ಸಹಾಯದ ಸಂಘವಾದ ಎಸ್.ಕೆ.ಡಿ.ಆರ್.ಡಿ.ಪಿ ಯ ಸದಸ್ಯರಾದ್ದರಿಂದ ತೃಪ್ತಿ ತಂದ ಮಟ್ಟವನ್ನು ಮೇಲಿನ ಕೋಷ್ಟಕದಲ್ಲಿ ವ್ಯಕ್ತಪಡಿಸಲಾಗಿದೆ. ಶೇಕಡಾ 60 ಮಂದಿ ಸದಸ್ಯರ ತೃಪ್ತಿ ತಂದ ಮಟ್ಟ ಉತ್ತಮವಾಗಿದೆ ಹಾಗೂ 40 ಮಂದಿ ಸದಸ್ಯರು ಅತ್ಯುತ್ತಮ ಮಟ್ಟ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸಂಘದ ಯಾವುದೇ ಸದಸ್ಯರು ತಮ್ಮ ಜೀವನ ಮಟ್ಟ ಉತ್ತಮವಾಗಿಲ್ಲ ಎಂದು ತಿಳಿಸಿಲ್ಲ ಎಂಬುದು ಮೇಲಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಎಲ್ಲಾ ಸದಸ್ಯರ ಜೀವನಮಟ್ಟ ತೃಪ್ತಿ ತಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೋಷ್ಟಕ : 4.12 : ಸಾಲದ ಬಡ್ಡಿಯ ಕುರಿತು ಸದಸ್ಯರ ಅಭಿಪ್ರಾಯ

ಕ್ರಮಸಂಖ್ಯೆ	ಬಡ್ಡಿ ಕುರಿತು ಅಭಿಪ್ರಾಯ	ಸಂಖ್ಯೆ	ಶೇಕಡಾ
1	ತುಂಬಾ ಹೆಚ್ಚು	45	45
2	ಹೆಚ್ಚು	38	38
3	ಕನಿಷ್ಠ ಬಡ್ಡಿ	17	17
4	ಇಲ್ಲ	0	0

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ : ಒಟ್ಟು : 100

ಮೇಲಿನ ಕೋಷ್ಟಕದಲ್ಲಿ ಸದಸ್ಯರಿಗೆ ಸಾಲದ ಬಡ್ಡಿಯ ಬಗ್ಗೆ ಅವರ ಅಭಿಪ್ರಾಯವನ್ನು ವಿಮರ್ಶಿಸಲಾಗಿದೆ. ತುಂಬಾ ಹೆಚ್ಚು ಬಡ್ಡಿಯನ್ನು ಕಟ್ಟುತ್ತಿದ್ದೇವೆ ಎಂಬ ಭಾವನೆ ಹೊಂದಿರುವವರು ಶೇಕಡಾ 45 ಮಂದಿ ಸದಸ್ಯರಲ್ಲಿ ಕಂಡು ಬಂತು. ಹೆಚ್ಚು ಬಡ್ಡಿ ಕಟ್ಟುತ್ತೇವೆ ಎನ್ನುವವರು ಶೇಕಡಾ 38 ಮಂದಿ. ಆದರೆ ಕನಿಷ್ಠ ಬಡ್ಡಿ ನಾವು ಕಟ್ಟುತ್ತೇವೆ ಎನ್ನುವ ಅಭಿಪ್ರಾಯ ಹೊಂದಿರುವವರು ಶೇಕಡಾ 17 ಮಂದಿ ಸದಸ್ಯರಲ್ಲಿ ಕಂಡು ಬಂತು. ಬ್ಯಾಂಕುಗಳು ಹೆಚ್ಚಿನ ಬಡ್ಡಿಯನ್ನು ಹಾಕಿರೋದು ಹೆಚ್ಚಿನ ಸದಸ್ಯರಿಗೆ ಅರಿವಿರಲಿಲ್ಲ ಎಂಬುದು ಕಂಡು ಬಂತು. ಆದುದರಿಂದ ಬಡ್ಡಿಯ ಕುರಿತು ಅರ್ಧದಷ್ಟು ಮಂದಿ ಸದಸ್ಯರು ಹೆಚ್ಚಿನ ಬಡ್ಡಿಯ ದರ ಕಟ್ಟುವ ಬಗ್ಗೆ ಗಮನಕ್ಕೆ ಬಂದಿದೆ.

ವಿಶ್ಲೇಷಣೆ : ಬಡ್ಡಿದರ ತುಂಬಾ ಹೆಚ್ಚು ಎಂಬ ಅಭಿಪ್ರಾಯವಿದ್ದವರು ಮಾಹಿತಿ ಸಮೀಕ್ಷೆಯಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಪರಸ್ಪರ ಅಭಿಪ್ರಾಯ ವಿನಿಮಯದ ಸಮಯದಲ್ಲಿ ಈ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯದಂತೆ ಗುಂಪಿನ ಮೂಲಕ ಸಾಲ ಪಡೆಯುವುದು ಹಣಕಾಸು ಸಂಸ್ಥೆಗಳು ಅಥವಾ ಬ್ಯಾಂಕ್‌ಗಳಿಂದ ನೇರಸಾಲ ಪಡೆಯುದಕ್ಕಿಂತ ಸುಲಭವಾಗಿರುವುದು ಮುಖ್ಯ ಕಾರಣವಾಗಿದೆ. ಆದುದರಿಂದ ಬಡ್ಡಿ ತುಂಬಾ ಹೆಚ್ಚು ಎನ್ನುವ ಅಭಿಪ್ರಾಯವಿದ್ದರೂ ಗುಂಪಿನ ಮೂಲಕ ಸಾಲ ಪಡೆಯುವವರ ಸಂಖ್ಯೆ ಹೆಚ್ಚು ಎಂದು ಅರ್ಥೈಸಬಹುದಾಗಿದೆ.

ಕೋಷ್ಟಕ : 4.13 : ಸದಸ್ಯರು ಅಡುಗೆಗೆ ಉಪಯೋಗಿಸುವ ಇಂಧನಗಳು.

ಕ್ರಮಸಂಖ್ಯೆ	ಅಡುಗೆಗೆ ಉಪಯೋಗಿಸುವ ಇಂಧನಗಳು	ಸಂಖ್ಯೆ	ಶೇಕಡಾ
1	ಗ್ಯಾಸ್	72	72
2	ಕಟ್ಟಿಗೆ	22	22
3	ಗೋಬರ್ ಗ್ಯಾಸ್	6	6

ಮೂಲ: ಕ್ಷೇತ್ರ ಕಾರ್ಯಾಧಾರಿತ ಮಾಹಿತಿ : ಒಟ್ಟು : 100

ಮೇಲಿನ ಕೋಷ್ಟಕದಲ್ಲಿ ಮಹಿಳಾ ಸದಸ್ಯರು ಅಡುಗೆಗೆ ಉಪಯೋಗಿಸುವ ಇಂಧನಗಳ ಕೋಷ್ಟಕವನ್ನು ಕೊಡಲಾಗಿದೆ. ಅಂದರೆ ಅದರ ಮೂಲಕ ಅವರ ಜೀವನಮಟ್ಟದ ಬಗ್ಗೆಯೂ ತಿಳಿಯಬಹುದು. ಇತ್ತಿಚಿನ ದಿನಗಳಲ್ಲಿ ಗ್ಯಾಸ್ ಬಳಕೆದಾರ ಸದಸ್ಯರು ಜಾಸ್ತಿ ಇರೋದು ಅಂದರೆ ಶೇಕಡಾ 72 ಮಂದಿ ಕಂಡು ಬಂತು. ಶೇಕಡಾ 22 ಮಂದಿ ಸದಸ್ಯರು ಕಟ್ಟಿಗೆಯನ್ನು ಬಳಸಿ ಅಡುಗೆ ಮಾಡುವುದನ್ನು ಗಮನಿಸಬಹುದು. ಕೇವಲ ಶೇಕಡಾ 6 ಮಂದಿ ಮಹಿಳಾ ಸದಸ್ಯರು ಗೋಬರ್ ಗ್ಯಾಸ್ ಬಳಸಿ ಅಡುಗೆ ಮಾಡುವುದನ್ನು ಕ್ಷೇತ್ರ ಸಂದರ್ಶನದ ವೇಳೆ ಗಮನಿಸಲಾಗಿದೆ.

ಕೋಷ್ಟಕ : 4.14 : ಸರಕಾರಿ ಯೋಜನೆಗಳ ಬಗ್ಗೆ ಸದಸ್ಯರಿಗೆ ತಿಳುವಳಿಕೆ ಪಡೆಯುವಲ್ಲಿ ಸ್ವ ಸಹಾಯ ಸಂಘಗಳ ಸಹಕಾರದ ಬಗ್ಗೆ ಪ್ರತಿಕ್ರಿಯೆ.

ಕ್ರಮಸಂಖ್ಯೆ	ವಿವರಗಳು	ಸಂಖ್ಯೆ	ಶೇಕಡಾ
1	ಹೌದು	75	75
2	ಇಲ್ಲ	25	25

ಮೂಲ : ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸರಕಾರಿ ಯೋಜನೆಗಳ ಬಗ್ಗೆ ಸದಸ್ಯರಿಗೆ ತಿಳುವಳಿಕೆ ಪಡೆಯುವಲ್ಲಿ ಸ್ವ ಸಹಾಯ ಸಂಘಗಳ ಸಹಕಾರ ಬಗ್ಗೆ 'ಹೌದು' ಎಂಬುದು ಸಹಕರಿಸಿದ ಎಂಬರ್ಥದಲ್ಲಿ ಶೇಕಡಾ 75 ಮಂದಿ ಮಹಿಳಾ ಸದಸ್ಯರು ಸರಕಾರಿ ಯೋಜನೆಗಳ ಬಗ್ಗೆ ಸದಸ್ಯರಿಗ ಮಾಹಿತಿ ದೊರೆಯಲಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯೋಜನೆಯು ಅನುಷ್ಠಾನಿಸುತ್ತಿರುವ ಸರಕಾರದ ವಿಶೇಷ ಕಾರ್ಯಕ್ರಮಗಳೆಂದರೆ, ನಗರ ಕೊಳಚೆ ವಾಸಿಗಳ ಸಂಘಟನೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಲ್ಲಿ ತರಬೇತಿ ಸುವರ್ಣ ಗ್ರಾಮೋದಯ ತರಬೇತಿ, ಸ್ವರ್ಣ ಜಯಂತಿ ಶಹರೀ ಯೋಜನೆಯಲ್ಲಿ ತರಬೇತಿ, ಜಲ ಸಂವರ್ಧನಾ ಯೋಜನಾ ಸಂಘದ ಕೆರೆ ದುರಸ್ತಿ ಕಾರ್ಯಕ್ರಮ, ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಕಿರು ಆರ್ಥಿಕ ವ್ಯವಹಾರ ಮತ್ತು ತರಬೇತಿ ಕಾರ್ಯಕ್ರಮಗಳು; ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿಗೆ ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಿಸುತ್ತಿದೆ.

ಕೋಷ್ಟಕ : 4.15 : ಸದಸ್ಯರಾದ ಬಳಿಕ ಬ್ಯಾಂಕಿಂಗ್ ವ್ಯವಹಾರದ ತಿಳುವಳಿಕೆಯ ಬಗ್ಗೆ ಅಭಿಪ್ರಾಯ

ಕ್ರಮಸಂಖ್ಯೆ	ವಿವರಗಳು	ಸಂಖ್ಯೆ	ಶೇಕಡಾವಾರು
1	ಹೌದು	80	80
2	ಇಲ್ಲ	20	20

ಮೂಲ : ಕ್ಷೇತ್ರ ಸಮೀಕ್ಷೆ **ಒಟ್ಟು : 100**

ಮೇಲಿನ ಕೋಷ್ಟಕದಲ್ಲಿ ತೋರಿಸಿದಂತೆ ಸದಸ್ಯರು ಸ್ವಸಹಾಯ ಸಂಘಕ್ಕೆ ಸೇರಿದ ಮೇಲೆ ಶೇಕಡಾ 80 ಮಂದಿ ಸದಸ್ಯರ (ಶೇಕಡಾ 80) ಬ್ಯಾಂಕಿಂಗ್ ವ್ಯವಹಾರದ ಜ್ಞಾನ ಹೆಚ್ಚಾಗಿದೆ. ಯೋಜನೆಯು ಕುಗ್ರಾಮಗಳ ಬಡ ಜನರಿಗೆ ಬ್ಯಾಂಕ್ ವ್ಯವಹಾರವನ್ನು ತಲುಪಿಸಲು ಬ್ಯಾಂಕುಗಳ ಸೇವಾ ಪ್ರತಿನಿಧಿಯಾಗಿ ಸ್ವಸಹಾಯ ಸಂಘಗಳನ್ನು ರಚಿಸುತ್ತಿದೆ. ಯೋಜನೆಯು ಸದಸ್ಯರ ಹಣವನ್ನು ಬ್ಯಾಂಕಿಗೆ ಮುಟ್ಟಿಸುವುದಲ್ಲದೆ ಬ್ಯಾಂಕುಗಳು ನೀಡುವ ಸಾಲವನ್ನು ಸದಸ್ಯರಿಗೆ ಮುಟ್ಟಿಸುತ್ತದೆ. ಅಲ್ಲದೆ. ಯೋಜನೆಯು ಗ್ರಾಮದಲ್ಲಿರುವ ತನ್ನ ಕಚೇರಿಗಳಲ್ಲಿ ಹಣ ಸಂಗ್ರಹಣೆ ಮತ್ತು ಸಾಲ ವಿತರಣಾ ವ್ಯವಸ್ಥೆಯನ್ನೂ ಮಾಡುತ್ತದೆ. ಅಲ್ಲದೆ, ಸದಸ್ಯರು ಪಾವತಿಸುವ ಮತ್ತು ಲೆಕ್ಕಾಚಾರವನ್ನು ನಿರ್ವಹಿಸುತ್ತದೆ. ಆದುದರಿಂದ, ಮಹಿಳೆಯರು ಸಂಘಕ್ಕೆ ಸೇರಿದುದರಿಂದ ಅವರ ಬ್ಯಾಂಕಿಂಗ್ ವ್ಯವಹಾರದ ಜ್ಞಾನ ದ್ವಿಗುಣಗೊಂಡಿದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸ್ವಸಹಾಯ ಗುಂಪುಗಳು ಮಹಿಳಾ ಸದಸ್ಯರನ್ನು ಬೌದ್ಧಿಕವಾಗಿಯೂ ಉನ್ನತೀಕರಣ ಹೊಂದಲು ಸಹಕಾರಿಯಾಗಿದೆ ಎಂದು ಹೇಳಬಹುದಾಗಿದೆ.

ಆರ್ಥಿಕವಾಗಿ ನಿರ್ಬಲರಾದವರು ಹಾಗೂ ಮಹಿಳೆಯರ ಸಬಲೀಕರಣದ ಧ್ಯೇಯೋದ್ದೇಶಗಳನ್ನಿಟ್ಟು ಅಸ್ತಿತ್ವಕ್ಕೆ ಬಂದ ಸ್ವಸಹಾಯ ಗುಂಪುಗಳು ಉದ್ದೇಶಗಳನ್ನು ಹೆಚ್ಚಿನಮಟ್ಟಿಗೆ ಈಡೇರಿಸಿವೆ ಎನ್ನುವ ವಿಷಯವನ್ನು ಈ ಮೇಲಿನ ವಿಶ್ಲೇಷಣೆ ದೃಢಪಡಿಸುತ್ತದೆ. ನೀಡಿದ ಆರ್ಥಿಕ ಸಹಾಯವನ್ನು ಸದುಪಯೋಗಪಡಿಸಿಕೊಂಡು ಗುಂಪಿನ ಹೆಚ್ಚಿನ ಸದಸ್ಯರು ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಬಲವರ್ಧನೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಕೂಡಾ ಮೇಲೆ ಮಾಡಿದ ವಿಶ್ಲೇಷಣೆಗಳಿಂದ ನಾವು ತಿಳಿಯಬಹುದಾಗಿದೆ. ಒಟ್ಟಿನಲ್ಲಿ ಸ್ವಸಹಾಯ ಗುಂಪುಗಳ ಕಾರ್ಯನಿರ್ವಹಣೆಯು ತೃಪ್ತಿಕರವಾಗಿದೆ ಎನ್ನುವುದಂತೂ ಸತ್ಯ

ಅಧ್ಯಾಯ 5

ಸಾರಾಂಶ ಮತ್ತು ಸಮಾಪ್ತಿ

ಅಧ್ಯಾಯ 5 – ಸಾರಾಂಶ

ಪ್ರಸ್ತುತ ಈ ಅಧ್ಯಯನದಲ್ಲಿ ಗ್ರಂಥಗಳು, ಲೇಖನಗಳು, ವರದಿಗಳು ಮತ್ತು ಪೂರ್ವಾಧ್ಯಾಯಗಳ ಪರಾಮರ್ಶೆಯ ಮೂಲಕ ವಿಶ್ಲೇಷಣೆ ಮಾಡುವುದರ ಜೊತೆಗೆ ಕ್ಷೇತ್ರಾಧಾರಿತ ಅಧ್ಯಯನವನ್ನು ಮಾಡಲಾಗಿದೆ. ಇದು ಅಧ್ಯಯನದ ಕೊನೆಯ ಅಧ್ಯಯನವಾದುದರಿಂದ ಅಧ್ಯಯನದ ಆವಿಷ್ಕಾರಗಳ ಅವಲೋಕನಗಳ ಆಧಾರದ ಮೇಲೆ ನೀಡಿದ ಸಲಹೆಗಳು ಭವಿಷ್ಯದ ಸಂಶೋಧನಾ ಸಾಧ್ಯತೆಗಳನ್ನೊಳಗೊಂಡಿದೆ.

"ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಆರ್ಥಿಕ ಸಹಾಯ ಹಾಗೂ ಮಹಿಳಾ ಸದಸ್ಯರ ಸಬಲೀಕರಣ : ಬಂಟ್ವಾಳ ತಾಲೂಕಿನ ಸ್ವ ಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ" ಎಂಬ ಅಧ್ಯಯನದಲ್ಲಿ ಬಂಟ್ವಾಳ ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳ ಬಗ್ಗೆ ಅಧ್ಯಯನವನ್ನು ಮಾಡಲಾಗಿದೆ. ಅದರಲ್ಲೂ ಮುಖ್ಯವಾಗಿ ಮಹಿಳಾ ಸದಸ್ಯರ ಸಬಲೀಕರಣದ ಬಗ್ಗೆ ಮತ್ತು ಸ್ವ ಸಹಾಯ ಗುಂಪುಗಳಿಗೆ ಸೇರಿದ ಮಹಿಳೆಯರ ಅಭಿವೃದ್ಧಿಯ ಬಗ್ಗೆ ತಿಳಿಯಲಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಮಹಿಳೆಯರು ಆರ್ಥಿಕವಾಗಿ ಹಿಂದುಳಿದಿದ್ದು, ಅವರಿಗೆ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಅನೇಕ ಕಾರ್ಯಕ್ರಮಗಳ ಮೂಲಕ ಸಬಲೀಕರಣಗೊಳ್ಳಲು ಸಹಕಾರಿಯಾಗಿದೆ. ಆರ್ಥಿಕವಾಗಿ ನೆರವು, ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಗಳು, ಕೃಷಿ ತರಬೇತಿ, ಮಹಿಳಾ ಜ್ಞಾನ ವಿಕಾಸ ಕಾರ್ಯಕರಮ, ಪ್ರಗತಿನಿಧಿ ಕಾರ್ಯಕ್ರಮ, ಅನೇಕ ಜೀವ ವಿಮಾ ಕಾರ್ಯಕ್ರಮ, ಜನಜಾಗೃತಿ ಕಾರ್ಯಕ್ರಮ, ಗ್ರಾಮನೈರ್ಮಲ್ಯ ಕಾರ್ಯಕ್ರಮ. ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಅನೇಕ ತರಬೇತಿ ಕಾರ್ಯಕ್ರಮಗಳ ಮೂಲಕ ಮಹಿಳಾ ಸಬಲೀಕರಣದಲ್ಲಿ ದಾಪುಗಾಲು ಹಾಕಿವೆ.

ಮಹಿಳೆಯರ ಸಬಲೀಕರಣಕ್ಕಾಗಿ ದೇಶದೆಲ್ಲೆಡೆ ವಿವಿಧ ಸಂಘ ಸಂಸ್ಥೆಗಳು ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳು ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಕ್ರಿಯವಾಗಿ ಕಾರ್ಯ ಪ್ರವೃತ್ತವಾಗಿವೆ. ಇದರಿಂದಾಗಿ ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಹೊಸ ದಿಶೆಯೊಂದು ಆರಂಭವಾಗಿದೆ. ಇಂತಹ ಯೋಜನೆಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಡೆಸಲ್ಪಡುತ್ತಿರುವ ಜ್ಞಾನ ವಿಕಾಸ ಮಹಿಳಾ ಕಾರ್ಯಕ್ರಮವೂ ಪ್ರಮುಖವಾದುದು ಹಾಗೂ ಗಮನಾರ್ಹವಾದುದು. ಹೆಣ್ಣು ಮಕ್ಕಳು ಬದಲಾಗದ ಹೊರತು ಗ್ರಾಮೀಣಾಭಿವೃದ್ಧಿ ಸಾಧ್ಯವಿಲ್ಲವೆಂಬುದು ಸಾಬೀತಾದ ಮಾತಾಗಿದೆ.

ಅವಿದ್ಯಾವಂತ ನಿರುದ್ಯೋಗಿ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಸಬಲೀಕರಣದ ಮಾಧ್ಯಮ ಜ್ಞಾನವಿಕಾಸ ಕೇಂದ್ರಗಳು, ಜ್ಞಾನ ವಿಕಾಸ ಕೇಂದ್ರದಲ್ಲಿ ಮಹಿಳೆಯರು ಪರಸ್ಪರ ಸಂವಹನದ ಮೂಲಕ ಆರೋಗ್ಯ, ಕುಟುಂಬ ಕಲ್ಯಾಣ ಶುಚಿತ್ವ, ಮಕ್ಕಳ ಶಿಕ್ಷಣ, ಉತ್ತಮ ಜೀವನ ಗುಣಮಟ್ಟ ಇತ್ಯಾದಿಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ.

ಮಹಿಳೆಯರಿಗೆ ತಮ್ಮಲ್ಲಿರುವ ಸೂಕ್ತ ಪ್ರತಿಬೆಯನ್ನು ಹೊರಹೊಮ್ಮಿಸಲು ಜ್ಞಾನವಿಕಾಸ ಕೇಂದ್ರಗಳು ವೇದಿಕೆಯಾಗಿದೆ. ಸ್ವಚ್ಛತೆ, ಶಿಕ್ಷಣ, ಆರೋಗ್ಯ, ಪರಿಸರ ರಕ್ಷಣೆ, ಪೌಷ್ಠಿಕ ಆಹಾರ ತಯಾರಿಸುವುದು, ವೃತ್ತಿ ಶಿಕ್ಷಣ, ಕೌಟುಂಬಿಕ ಸಾಮರಸ್ಯ, ದುಶ್ಚಟಗಳ ವಿರುದ್ಧ ಜಾಗೃತಿ ಮೂಡಿಸುವುದು ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಮಾಹಿತಿ, ಪರಿಸರ ಮಾಹಿತಿ, ಮಕ್ಕಳ ಪಾಲನೆ, ಪೋಷಣೆ, ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ಸಂಘಗಳಿಂದ ನೀಡಲಾಗುತ್ತದೆ.

ಮಹಿಳೆಯರು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿಗೆ ಸೇರಿದ ನಂತರ ಕಂಡು ಬಂದ ಕೆಲವು ಬದಲಾವಣೆಗಳೆಂದರೆ,

- ದುರ್ಬಲ ವರ್ಗದ ಮಹಿಳೆಯರ ಸಂಘಟನೆ
- ಮಹಿಳೆಯರ ವ್ಯಕ್ತಿತ್ವ ವಿಕಸನ
- ಪ್ರತಿಭೆ ಸಾಂಪ್ರದಾಯಿಕ ಕಲೆಗಳಿಗೆ ಪ್ರೋತ್ಸಾಹ
- ಉಳಿತಾಯಕ್ಕೆ ಪ್ರೇರಣೆ
- ವ್ಯವಹಾರ ಜ್ಞಾನ ವೃದ್ಧಿ
- ಸ್ವ ಉದ್ಯೋಗಕ್ಕೆ ಅವಕಾಶ
- ವಿವಿಧ ವಿಷಯಗಳ ಬಗ್ಗೆ ಮಾಹಿತಿ, ಮಾರ್ಗದರ್ಶನ
- ಮಹಿಳಾ ಶೋಷಣೆ ಮತ್ತು ಅಸಮಾನತೆ ವಿಷಯಗಳಲ್ಲಿ ಜಾಗೃತಿ ಮೂಡಿಸುವುದು
- ಸದೃಢ ಸ್ವಾವಲಂಬಿ ಮಹಿಳೆ

ಹೀಗೆ ಹಲವಾರು ಬದಲಾವಣೆಯಾಗಲು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿಯಾಗಿದೆ. ಜನರಿಗೆ ಕೇವಲ ನೈತಿಕ ಮೌಲ್ಯಗಳು, ಶಿಕ್ಷಣ ಮತ್ತು ಸಾಮಾಜಿಕ ಅರಿವು ಮೂಡಿಸಿದರೆ

ಸಾಲದು. ಅವರ ಜೀವನೋಪಾಯಕ್ಕೆ ಹಣಕಾಸಿನ ವ್ಯವಸ್ಥೆಯೂ ಮುಖ್ಯ ಅವನ್ನೂ ಕೂಡಾ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಒದಗಿಸುವಲ್ಲಿ ಮಹಿಳೆಯರ ಅಭಿವೃದ್ಧಿಗೆ ಕಾರಣೀಭೂತವಾಗಿದೆ.

ಮಹಿಳಾ ಸಬಲೀಕರಣದ ಜೊತೆಗೆ ಗ್ರಾಮೀಣ ಜನರ ಅಭಿವೃದ್ಧಿಯೂ ಈ ಸಂಘಗಳಿಂದಾಗಿದೆ. ಯೋಜನೆಯು ಸಕಾರಾತ್ಮಕವಾಗಿ ಸಮಾಜದ ಎಲ್ಲಾ ಬಡಜನರ ಬದಲಾವಣೆಗೆ ಪ್ರಯತ್ನಿಸಿದೆ. ಬದಲಾವಣೆಯೇ ಸಾಧ್ಯವಿಲ್ಲವೆಂಬುದನ್ನು ಹುಸಿಗೊಳಿಸಿ ಮಹಿಳೆಯರ ವಿಕಸನದಲ್ಲಿ ಪ್ರೇರಣೆಯಾಗಿದೆ. ತಾಲೂಕಿನಲ್ಲಿ ಮಹಿಳಾ ಅಧಿಕಾರಿಯನ್ನು ನೇಮಕ ಮಾಡಿಕೊಂಡಿದ್ದು, ಅವರು ಮಹಿಳೆಯರ ಸಬಲೀಕರಣಕ್ಕಾಗಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಮುಖ್ಯವಾಗಿ ಕೌಟುಂಬಿಕ ಸಾಮರಸ್ಯ, ಆರೋಗ್ಯ ಮತ್ತು ನೈರ್ಮಲ್ಯ, ಮಕ್ಕಳ ಶಿಕ್ಷಣ, ಪೌಷ್ಠಿಕ ಆಹಾರ, ಸರಕಾರಿ ಯೋಜನೆಗಳು ಮತ್ತು ಸ್ವ ಉದ್ಯೋಗ ವಿಷಯಗಳ ಕುರಿತಂತೆ ಆದ್ಯತೆ ನೀಡುತ್ತಾರೆ.

ಅಧ್ಯಯನ ಶೋಧ

ಈ ಅಧ್ಯಯನದಿಂದ ಕಂಡು ಬಂದ ಫಲಿತಾಂಶ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

1. ಅಧ್ಯಯನದಲ್ಲಿ ಆರಿಸಿಕೊಂಡ ಉತ್ತರದಾರರನ್ನು ವಿಶ್ಲೇಷಿಸಿದಾಗ, ಹೆಚ್ಚಿನ ಮಹಿಳೆಯರು ಇತರೆ ಹಿಂದುಳಿದ ವರ್ಗದವರಾಗಿದ್ದು (79 ಪ್ರತಿಶತ) ಅವರಲ್ಲಿ 59 ಪ್ರತಿಶತ ಮಂದಿ ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದಿದವರಾಗಿದ್ದಾರೆ. ಗುಂಪುಗಳಲ್ಲಿ ಮೇಲ್ವರ್ಗದ ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ. ಅದರಲ್ಲೂ ಹೆಚ್ಚು ವಿದ್ಯಾಭ್ಯಾಸ ಹೊಂದಿದ ಮಹಿಳೆಯರು ಬೇರೆ ಉದ್ಯೋಗಕ್ಕೆ ಒತ್ತುಕೊಟ್ಟಿದ್ದಾರೆ. ಆದುದರಿಂದ ಹೆಚ್ಚಿನ ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸ ಹೊಂದಿದವರಾಗಿದ್ದಾರೆ.

2. ಮಹಿಳೆಯರ ಸ್ವಸಹಾಯ ಸಂಘದ ಸದಸ್ಯರಾದ ಬಳಿಕ ಅವರ ಜೀವನಮಟ್ಟ ಉತ್ತಮವಾಗಿದೆ. ಶೇಕಡಾ 60 ಮಂದಿ ಮಹಿಳೆಯರು ಗುಂಪುಗಳಿಗೆ ಸೇರಿದ ಉದ್ದೇಶವೇನೆಂದರೆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ತಮ್ಮ ಜೀವನಗುಣಮಟ್ಟ ಹೆಚ್ಚಾಗಲು ಎಂಬುದು ಕಂಡುಬರುತ್ತದೆ.

3. ಸ್ವ ಸಹಾಯ ಸಂಘಕ್ಕೆ ಸೇರಿದ ಮಹಿಳೆಯರ ತೃಪ್ತಿ ಮಟ್ಟ ಉತ್ತಮವಾಗಿದ್ದು, ಅವರ ಎಲ್ಲಾ ರೀತಿಯ ವಿಕಸನದಲ್ಲೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಹಕಾರಿಯಾಗಿದೆ ಎಂಬುದು ಕಂಡು ಬಂತು.

4. ಸದಸ್ಯತ್ವ ಪಡೆದುಕೊಂಡ ಬಳಿಕ ಬ್ಯಾಂಕಿಂಗ್ ವ್ಯವಹಾರದ ತಿಳುವಳಿಕೆ ಶೇಕಡಾ 80 ರಷ್ಟು ಜಾಸ್ತಿಯಾಗಿದೆ. ಉಳಿತಾಯ ಪ್ರವೃತ್ತಿಯೂ ಹೆಚ್ಚಾಗಿದೆ. ಅಲ್ಲದೆ, ಆರ್ಥಿಕ ವ್ಯವಹಾರದ ಜ್ಞಾನ ದ್ವಿಗುಣಗೊಂಡಿದೆ.

5. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳೆಯರಲ್ಲಿ ನಾಚಿಕೆ, ಅಂಜಿಕೆ, ಕೀಳರಿಮೆಯನ್ನು ಹೋಗಲಾಡಿಸಿ ಅವರಲ್ಲಿ ಆತ್ಮಧೈರ್ಯವನ್ನು ತುಂಬುವಲ್ಲಿ ಆಧುನಿಕ ಸಮಾಜದಲ್ಲಿ ಯಾವ ರೀತಿ ಜೀವನ ನಡೆಸಬೇಕು ಕುಟುಂಬದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಂಸ್ಥೆಯು ಮಹಿಳೆಯರ ಪಾತ್ರದ ಬಗ್ಗೆ ಅರಿವು ಮೂಡಿಸಿದೆ.

6. ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯರಲ್ಲಿ ಶೇಕಡಾ 75 ಕ್ಕಿಂತ ಜಾಸ್ತಿ 31 ರಿಂದ 51 ವರ್ಷದ ಸದಸ್ಯರಿರುವುದು ಕಂಡು ಬರುತ್ತದೆ. ಅವರಲ್ಲಿ ಶೇಕಡಾ 73 ರಷ್ಟು ವಿವಾಹಿತ ಮಹಿಳೆಯರು ಗುಂಪಿನಲ್ಲಿ ಇರುವುದು ಕಂಡುಬರುತ್ತದೆ.

7. ಮಹಿಳಾ ಸದಸ್ಯರು ತಮ್ಮ ವಿರಾಮದ ಸಮಯದ ಸದುಪಯೋಗಕ್ಕಾಗಿ ಮತ್ತು ಆರ್ಥಿಕ ಉನ್ನತೀಕರಣಕ್ಕಾಗಿ ಪರಸ್ಪರ ಸಹಾಯ ಸಹಕಾರದಿಂದ ಜೀವನ ನಡೆಸಲು ಪ್ರೇರಣೆ ದೊರೆಯಲು ಸಂಘದ ಸದಸ್ಯರಾದುದು ಮತ್ತು ಅವರಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿರುವುದು ಕಂಡುಬಂದಿದೆ.

8. ಸದಸ್ಯರಿಗೆ ಬ್ಯಾಂಕ್ ಸಾಲ ಸುಲಭವಾಗಿ ದೊರೆಯುವುದರಿಂದ ಹೆಚ್ಚಿನ ಸದಸ್ಯರು ಆರ್ಥಿಕ ಸಹಾಯ ಗುಂಪಿನಿಂದ ಪಡೆದವರೇ ಹೆಚ್ಚಿರುವುದು ಕಂಡುಬಂದಿದೆ. ಮತ್ತು ಸದಸ್ಯರಾದ ಬಳಿಕ ಅವರ ಬ್ಯಾಂಕ್ ವ್ಯವಹಾರದ ತಿಳುವಳಿಕೆಯು ದ್ವಿಗುಣಗೊಂಡಿರುವುದು ಕಾಣಬಹುದಾಗಿದೆ.

9. ಸದಸ್ಯರು ಅನೇಕ ಸರಕಾರೀ ಯೋಜನೆಗಳ ಸಹಾಯವನ್ನು ಸ್ತ್ರೀಶಕ್ತಿ ಸಂಘಗಳ ಕಾರ್ಯಕ್ರಮಗಳ ಮುಖಾಂತರ ಸಹಕಾರವನ್ನು ಪಡೆದವರೇ ಆಗಿರುತ್ತಾರೆ.

ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮೀಣ ಮಹಿಳೆಯರಲ್ಲಿ ಮಹತ್ತರ ಬದಲಾವಣೆ ತಂದಿದೆ.

ಸಲಹೆ ಸೂಚನೆಗಳು

ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಇನ್ನು ಅನೇಕ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಭಿವೃದ್ಧಿ ಸಾಧಿಸುವಂತಾಗಬೇಕು. ಇನ್ನೂ ಅನೇಕ ಗ್ರಾಮೀಣ ಬಡ ಮಹಿಳೆಯರಿಗೆ ಈ ಯೋಜನೆಯ ಲಾಭ ಸಮರ್ಪಕವಾಗಿ ನಡೆದಿಲ್ಲ. ಗ್ರಾಮೀಣ ಮಹಿಳೆಯರು ಇಂತಹ ಯೋಜನೆಗಳಿಂದ ಸಂಪೂರ್ಣ ಸಹಕಾರ ಪಡೆದು ಎಲ್ಲಾ ಮಹಿಳೆಯರ ಅಭಿವೃದ್ಧಿಯಾಗಲು ಪ್ರಯತ್ನಿಸಬೇಕಾಗಿದೆ. ನಾಲ್ಕು ಗೋಡೆಗಳ ಮಧ್ಯೆ ಬಾಳನ್ನು ಸವೆಸುತ್ತಿದ್ದ ಮಹಿಳೆ ಅದರಿಂದ ಹೊರಬಂದು ತನ್ನಂತಹ ನಾಲ್ಕು ಮಹಿಳೆಯರೊಂದಿಗೆ ಬೆರೆಯುವ ಸದವಕಾಶ ಹಾಗೂ ಯೋಜನೆಗಳ ಮೂಲಕ ಹೊರ ಪ್ರಪಂಚದ ಬಗೆಗೆ ಅರಿತು ಎಲ್ಲಾ ಜಾತಿ ಮತಗಳ ಬಗೆಗೆ ಅಂತರ ಉಳಿಯದೆ ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳಾ ಸಬಲೀಕರಣವಾಗಬೇಕಾಗಿದೆ. ಅವರಲ್ಲಿ ಕೀಳರಿಮೆ ತೊಲಗಿ, ಆತ್ಮವಿಶ್ವಾಸ, ಧೈರ್ಯ, ವ್ಯವಹಾರಿಕ ಜ್ಞಾನ ಹೆಚ್ಚಿಸುವಂತಾಗಬೇಕಾಗಿದೆ. ನಕಾರಾತ್ಮಕ ಧೋರಣೆ ಹೋಗಿ ಸಕಾರಾತ್ಮಕ ಮನೋಭಾವನೆ ಬೆಳೆಯಬೇಕಾಗಿದೆ. ಅಧ್ಯಯನ ವೇಳೆ ದೊರಕಿದ ಪ್ರಾಥಮಿಕ, ಅನುಷಂಗಿಕ ಮಾಹಿತಿಗಳ ಆಧಾರದಲ್ಲಿ ಹಾಗೂ ಸೇವಾ ನಿರತರ ಸಂದರ್ಶನದ ಆಧಾರದಲ್ಲಿ ಕೆಲವು ಸಲಹೆ ಸೂಚನೆಗಳನ್ನು ನೀಡಲು ಬಯಸುತ್ತೇನೆ.

- ಬಡ್ಡಿದರ ಇಳಿಕೆ : ಮಹಿಳೆಯರಿಗೆ ಸಂಘದ ವತಿಯಿಂದ ನೀಡುವ ಸಾಲದ ಬಡ್ಡಿದರ ಕಡಿಮೆ ಮಾಡುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪ್ರಯತ್ನಿಸಬೇಕು. ಈ ಸರಕಾರೇತರ ಸಂಸ್ಥೆಗಳ ಪ್ರಾಯೋಜಕತ್ವ ಪಡೆದವರ ಸಹಾಯದಿಂದ ಬಡ್ಡಿದರ ಇಳಿಸುವ ಪ್ರಯತ್ನ ಮಾಡಬೇಕು.
- ಸಾಲದ ಸದ್ವಿನಿಯೋಗ : ಸ್ವಸಹಾಯದಿಂದ ಪಡೆದ ಸಾಲವನ್ನು ಅನುಪಯೋಗಿ ಕಾರ್ಯಗಳಿಗೆ ಬಳಸುವುದು ಕಂಡು ಬರುತ್ತದೆ. ಆದುದರಿಂದ ಸಾಲವನ್ನು ಯಾವ ಉದೇಶಕ್ಕಾಗಿ ಪಡೆಯಲಾಗಿದೆಯೋ, ಅದಕ್ಕಾಗಿಯೇ ವಿನಿಯೋಗಿಸುವಂತೆ ಮಾಡಬೇಕು. ಮತ್ತು ಪಡೆದ ಉದ್ದೇಶಕ್ಕಾಗಿಯೇ ವಿನಿಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸಲು ಅಧಿಕಾರಿಗಳನ್ನು ನೇಮಿಸಬಹುದು.
- ಸ್ವ ಸಹಾಯ ಗುಂಪುಗಳು ಕೆಲವು ಕಾರ್ಖಾನೆಗಳ ಜೊತೆ ಸೇರಿ ಕೆಲಸ ಕೇಂದ್ರಗಳನ್ನು ತೆರೆಯಬಹುದು ಮತ್ತು ಆ ಮೂಲಕ ಮಹಿಳೆಯರಿಗೆ ಉದ್ಯೋಗಾವಕಾಶ ದೊರೆಯುವಂತೆ ಮಾಡಬಹುದು. ಈ ಮೂಲಕ

ಕೆಲಸ ಕೇಂದ್ರಗಳಲ್ಲಿ ಕೆಲಸ ಪಡೆಯುವಾಗ ವ್ಯವಸ್ಥೆ ಮಾಡಿದರೆ ಮಹಿಳೆಯರಿಗೆ ಕೆಲಸದ ಹುಡುಕುವಿಕೆ ಕಡಿಮೆ ಮಾಡಬಹುದು.

- ಮಹಿಳೆಯರ ಉಳಿತಾಯ ಪ್ರವೃತ್ತಿ ಹೆಚುವಂತೆ ಮಾಡಲು ಅನೇಕ ಕಾರ್ಯಕ್ರಮಗಳನ್ನುಪ್ರಾರಂಭ ಮಾಡಬಹುದು. ಉದಾಹರಣೆಗೆ ಕೆಲವು ಬ್ಯಾಂಕುಗಳಲ್ಲಿ ಹಿಂದೆ ಇದ್ದ "ಪಿಗ್ಮಿ" ಅಥವಾ "ಹನಿ ಯೋಜನೆ" ಯನ್ವಯ ದಿನಕ್ಕೆ ಒಂದು ರೂಪಾಯಿ ಕನಿಷ್ಠ 25 ಪೈಸೆ ಸಂಗ್ರಹಿಸುತ್ತಿದ್ದರು. ಅಂತೆಯೇ ದಿನಕ್ಕೆ ಒಂದು ರೂಪಾಯಿ ಎಂಬ ಘೋಷಣೆಯಂತೆ ದಿನಾ ರೂಪಾಯಿ ಎರಡು ಅಥವಾ ರೂಪಾಯಿ ಐದು ಸಂಬಳದಲ್ಲಿ ಕಡಿತ ಮಾಡಬಹುದು. ನಂತರ ಒಟ್ಟಾಗಿ ಬಡ್ಡಿ ಸಮೇತ ಗಣನೀಯ ಮೊತ್ತ ನೀಡಬಹುದು.

ಮುಂದಿನ ಅಧ್ಯಯನಕ್ಕೆ ದಿಕ್ಸೂಚಿ

ಪ್ರತಿಯೊಂದು ಸಂಶೋಧನಾ ಅಧ್ಯಯನದಲ್ಲಿ ಆಯ್ದುಕೊಂಡ ವಿಷಯದ ಬಗ್ಗೆ ಹೊಸ ಹೊಸ ವಿಷಯವನ್ನು ತಿಳಿಯುವ ಪ್ರಯತ್ನ ಮಾಡಲಾಗುತ್ತದೆ. ಹಾಗೇ ಮುಂದೆ ಇನ್ನಷ್ಟು ಅಧ್ಯಯನದ ಸಾಧ್ಯತೆಯನ್ನು ತಿಳಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕೈಗೊಳ್ಳಬಹುದಾದ ಇನ್ನಷ್ಟು ಅಧ್ಯಯನ ವಿಚಾರಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ಇದೇ ಅಧ್ಯಯನವನ್ನು ಇನ್ನೂ ಹೆಚ್ಚಿನ ಸಮಯಾವಧಿ ಮತ್ತು ಹೆಚ್ಚಿನ ಪ್ರದೇಶ ವ್ಯಾಪ್ತಿಯೊಂದಿಗೆ ಕೈಗೊಂಡರೆ ಇನ್ನೂ ಹೆಚ್ಚಿನ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು.

- ಸ್ವ ಸಹಾಯ ಸಂಘಗಳ ಸಾಲ ವಸೂಲಾತಿಯ ಬಗ್ಗೆ ಅಧ್ಯಯನ ನಡೆಸಬಹುದು. ಅದರಲ್ಲೂ ಕೆಟ್ಟ ಸಾಲದ ಬಗ್ಗೆ ಅಧ್ಯಯನ ಮಾಡಬಹುದು.

- ಮಹಿಳೆಯರು ಸ್ವ ಸಹಾಯ ಸಂಘದ ಸಹಾಯ ಪಡೆದು ಸ್ವ ಉದ್ಯೋಗವನ್ನು ಮಾಡುತ್ತಿರುವ ಬಗ್ಗೆ ಅಧ್ಯಯನ ಕೈಗೊಳ್ಳಬಹುದು.

- ಉದ್ಯೋಗ ಸೃಷ್ಟಿಸುವಲ್ಲಿ ಮತ್ತು ಮಹಿಳಾ ಸಬಲೀಕರಣಕ್ಕೆ ಸರಕಾರೇತರ ಸಂಸ್ಥೆಗಳ ಪಾತ್ರಗಳ ಬಗ್ಗೆ ಅಧ್ಯಯನ ಮಾಡಬಹುದು.

ಉಪಸಂಹಾರ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಸಮಗ್ರ ರೂಪದ ಗ್ರಾಮಿಣಾಭಿವೃದ್ಧಿಗೆ ಮಾದರಿಯಾಗಿದೆ. ಭಾರತದ ಗ್ರಾಮೀಣ ಪ್ರದೇಶದ ಮಹಿಳೆಯರು ಸರಳರು, ಮುಗ್ಧರು ಮತ್ತು ಅಮಾಯಕರು. ಸುಖವನ್ನು ಅರಸಿಕೊಂಡು ಹೋಗುವುದಕ್ಕಿಂತ ಇದ್ದುದರಲ್ಲಿ ತೃಪ್ತಿ ಪಡೆಯುವ ಜಾಯಮಾನ ಅವರದು. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳೆಯರ ಅಸಹಾಯಕತೆಯನ್ನು ಹೋಗಲಾಡಿಸಿ ಸಮಾಜದಲ್ಲಿ ಎಲ್ಲರಂತೆ ಇವರು ಗೌರವದ ಬದುಕನ್ನು ಕಾಣುವಂತೆ ಮಾಡಿದೆ. ಗ್ರಾಮೀಣ ಮಹಿಳೆಯರಿಗೆ ಬಾಳಿನಲ್ಲಿ ಬೆಳಕನ್ನು ಕಾಣುವಂತಾಗಿದೆ. ಈ ಯೋಜನೆಯ ಫಲವಾಗಿ ಗಳಿಕೆಯ ಸಾಮರ್ಥ್ಯದ ಜೊತೆಗೆ ತಮಗೆ ಸರಕಾರದ ಮೂಲಕ ಸಿಗುವ ಸೌಲಭ್ಯ, ಬ್ಯಾಂಕಿಂಗ್ ವ್ಯವಹಾರ, ಶಿಕ್ಷಣದ ಮಹತ್ವ, ಆರೋಗ್ಯ ಕಾಪಾಡುವಿಕೆ, ಪರಿಸರ ಕಾಳಜಿ, ವ್ಯಕ್ತಿತ್ವ ವಿಕಸನ ಮುಂತಾದ ವಿಷಯದ ಕುರಿತು ಸಾಕಷ್ಟು ಪ್ರಮಾಣದಲ್ಲಿ ಜಾಗೃತಿ ಕೂಡ ಬಂಟ್ವಾಳ ತಾಲೂಕಿನಲ್ಲಿ ಆಗಿದೆ. ಭಾರತದಂತಹ ಬೆಳೆಯುತ್ತಿರುವ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಪ್ರಮುಖವಾದ ಕ್ಷೇತ್ರವಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈ ನಿಟ್ಟಿನಲ್ಲಿ ಒಂದು ಮಾದರಿಯಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವತ್ತ ಮಹಿಳೆಯರನ್ನು ಸಬಲೀಕರಿಸುವ ಮೂಲಕ ಜನರನ್ನು ಸಂಘಟಿಸಿದೆ. ಇನ್ನೂ ಅನೇಕ ಮಜಲುಗಳಲ್ಲಿ ಅಭಿವೃದ್ಧಿ ಹೊಂದಲು ಸ್ವಸಹಾಯ ಸಂಘಗಳು ಯಶಸ್ವಿಯಾಗಿದೆ. ನಮ್ಮ ದೇಶದ ಸಂಪೂರ್ಣ ಆರ್ಥಿಕತೆಯ ಸಮಗ್ರ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿಯಾಗಲಿ.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

1. ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಮೌಲ್ಯಮಾಪನ ಮತ್ತು ಮೌಲ್ಯವರ್ಧನೆ - ಪ್ರೊ : ಜಿ.ವಿ.ಜೋಶಿ
2. ಸ್ವಾವಲಂಬಿ ಮಹಿಳೆ – ಸಮಾನತೆ– ಡಾ ॥ ಲೀಲಾವತಿ.ಆರ್.ಪ್ರಸಾದ್
3. ತೃತೀಯ ರಂಗದ ಉಪಕ್ರಮಗಳ ಮುಖಾಂತರ ಮಹಿಳಾ ಸಬಲೀಕರಣ – ಡಾ॥ ಸುಜಾತಾ.ಕೆ.ಎಸ್
4. ಗ್ರಾಮೀಣ ಮಹಿಳೆಯರ ಸಬಲೀಕರಣ – ಡಾ॥ ಜಯಶೀಲ ಮತ್ತು ಸುಧಾಕರ.ಎನ್
5. ಗ್ರಾಮಾಭಿವೃದ್ಧಿಯಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರ – ಡಾ॥ ಜಯವಂತ ನಾಯಕ್
6. ಸಮಗ್ರ ಗ್ರಾಮೀಣಾಭಿವೃದ್ಧಿಗೆ ಮಾದರಿ –ಪ್ರೋ. ಜಿ.ವಿ.ಜೋಶಿ
7. ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು –ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ – ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ - ದಿವ್ಯ 2012
8. ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳ ಪಾತ್ರ
9. ದಿ.ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವಿಮೆನ್ ಇನ್ ರೂರಲ್ ಆ್ಯಂಡ್ ಅರ್ಬನ್ ಏರಿಯಾಸ್ : ಡಾ॥ ವಜೀದಾ
10. ಕರ್ನಾಟಕದ ಆರ್ಥಿಕತೆ – ಕುಮಾರ್.ಎಸ್
11. ಕಿರು ಹಣಕಾಸು ಮತ್ತು ಮಹಿಳಾ ಸಬಲೀಕರಣ – ಡಾ॥ ಜಿ.ಪಿ. ಕಪೂರ್
12. ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2014–15
13. ಪತ್ರಿಕೆಗಳು : ಉದಯವಾಣಿ
14. ಸಹಕಾರ : ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಪ್ರಕಟಣೆ
15. ನಿರಂತರ ಪತ್ರಿಕೆ – ಇದು ಪ್ರಗತಿಯ ಹರಿಕಾರ
16. ಡಾ॥ ರವೀಂದ್ರ ಕೆ. – ಸೆಲ್ಪ್ ಹೆಲ್ಪ್ ಗ್ರೂಪ್ ಟು ಪವರ್ಟಿ ಇರಾಡಿಕೇಶನ್ ಎವಿಡೆನ್ಸ್ ಪ್ರಂ ಇಂಡಿಯನ್ ಸ್ಟೇಟ್ಸ್
17. ಡಾ॥ ಜಿ.ವಿ.ಜೋಶಿ, ಬಡತನ ನಿರ್ಮೂಲನ ಮತ್ತು ಮಹಿಳಾ ಸಬಲೀಕರಣದಲ್ಲಿ ಕಿರುಹಣಕಾಸಿನ ಪಾತ್ರ,
18. ಸರ್ವಸಾಮಾನ್ಯ – 2008
19. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಪಕ್ಷಿನೋಟ – 2014–15


ಅನುಬಂಧ

ಚಿತ್ರಮುಖಿ



KARNATAKA
DISTRICT MAP
N
MAHARASHTRA
Bidar
BIDAR
Gulbarga
GULBARGA
Bijapur
BIJAPUR
Yadgir
YADGIR
TELANGANA
BELGAUM
Bagalkot
BAGALKOT
Raichur
RAICHUR
Belagavi
DHARWAD
Dharwad
Gadag
GADAG
KOPPAL
Koppal
BELLARY
Bellary
GOA
LEGEND
State Boundary
District Boundary
State Capital
District HQ
Karwar
Haveri
UTTAR
KANNADA
HAVERI
Davangere
DAVANGERE
Chitradurga
CHITRADURGA
ANDHRA
PRADESH
SHIMOGA
Shimoga
Udupi
UDUPI
CHIKMAGALUR
Chickamagaluru
TUMKUR
Tumkuru
CHICKBULAPUR
Chickbulapur
BANGALORE RURAL
Kolar
KOLAR
HASSAN
Hassan
BENGALURU
BANGALORE
Mangalore
DAKSHIN
KANNADA
MANDYA
Mandya
Channapatna
RAMANAGARA
Coorg
KODAGU
Mysore
MYSORE
TAMIL NADU
CHAMRAJNAGAR
Chamrajnagar
KERALA
Map not to Scale
Copyright © 2014 www.mapsofworld.com

BANTWAL TALUK




Beltangadi
ಬೆಳ್ತಂಗಡಿ
Bantval
ಬಂಟ್ವಾಳ
Puttur
ಪುತ್ತೂರು

ಎಸ್.ಕೆ.ಡಿ.ಆರ್.ಡಿ.ಪಿ(ರಿ) ಬಂಟ್ವಾಳ ತಾಲೂಕಿನ ಸ್ವ ಸಹಾಯ ಗುಂಪಿನ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಚಿತ್ರಾವಳಿ

























ಅನುಬಂಧ

ಪ್ರಶ್ನಾವಳಿ

ಪ್ರಶ್ನಾವಳಿ

ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳ ಆರ್ಥಿಕ ಸಹಾಯ ಹಾಗೂ

ಮಹಿಳಾ ಸದಸ್ಯರ ಸಬಲೀಕರಣ

ಬಂಟ್ವಾಳ ತಾಲೂಕಿನ ಸ್ವಸಹಾಯ ಗುಂಪುಗಳ ಕುರಿತು ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ ಪದವಿಗಾಗಿ ರಚಿಸಲ್ಪಟ್ಟ ಪ್ರಶ್ನಾವಳಿ)

ಸಂಶೋಧಕರು : ಮಂಜುಶ್ರೀ ಎಸ್
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕರ್ನಾಟಕ ಥಿಯೋಲಾಜಿಕಲ್
ಸಂಶೋಧನಾ ಕೇಂದ್ರ, ಬಲ್ಮಠ.

ಸ್ಥಳ :
ದಿನಾಂಕ :

<u>ಪೀಠಿಕೆ :</u> ಪ್ರಸ್ತುತ ಅಧ್ಯಯನ ಮುಖ್ಯ ಉದ್ದೇಶವೆಂದರೆ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಲ್ಲಿ ಸ್ವಸಹಾಯ ಗುಂಪುಗಳ ಪಾತ್ರದ ಬಗ್ಗೆ ಪರಾಮರ್ಶೆ ನಡೆಸುವುದು.

ಸೂಚನೆಗಳು : ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳಿವೆ. ಕೆಲವು ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಬಹುದು. ಇನ್ನು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಿದರಾಯಿತು.

- ಈ ಸಮೀಕ್ಷೆಯನ್ನು ಕೇವಲ ಅಧ್ಯಯನ ಉದ್ದೇಶಕ್ಕಾಗಿ ಮಾತ್ರ ಮಾಡಲಾಗುತ್ತಿದೆ.
- ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ನಿಮ್ಮ ಇತರೆ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯವಿದ್ದಲ್ಲಿ ಕೃತಜ್ಞಾಪೂರ್ವಕವಾಗಿ ಸ್ವೀಕರಿಸಲಾಗುವುದು.
- ನಿಮ್ಮ ಸಹಕಾರಕ್ಕಾಗಿ ಅನಂತ ಕೃತಜ್ಞತೆಗಳು.

1. ಸ್ವಸಹಾಯ ಗುಂಪಿನ ಹೆಸರು :
2. ಸ್ವ ಸಹಾಯ ಗುಂಪಿನ ಸದಸ್ಯನ ಹೆಸರು ಮತ್ತು ವಿಳಾಸ :
3. ಮತ
4. ಪ್ರಾಯ
5. ಜಾತಿ
6. ಮೀಸಲಾತಿಯಲ್ಲಿ ಬಂದರೆ ಯಾವ ಗುಂಪು ?

   (a) OBC (b) SC (c) ST (d) ಇತರೆ

7. ನೀವು ಅನಕ್ಷರಸ್ಥರೇ ? ಹೌದು / ಇಲ್ಲ
8. ವಿದ್ಯಾರ್ಹತೆ :

   (a) ಅನಕ್ಷರಸ್ಥ (b) ಪ್ರಾಥಮಿಕ ಶಿಕ್ಷಣ (c) ಸ್ನಾತಕೋತ್ತರ

   (d) (ಪದವಿಪೂರ್ವ (e) ಪದವಿ ಶಿಕ್ಷಣ (f)ಇತರೆ

9. ವೈವಾಹಿಕ ಸ್ಥಿತಿಗತಿ :

   (a) ವಿವಾಹಿತರು(b) ಅವಿವಾಹಿತರು (c) ವಿಚ್ಛೇದಿತೆ (d) ವಿಧವೆ

10. ಕುಟುಂಬದ ವಿವರ :

ಹೆಸರು	ಕುಟುಂಬದ ಯಜಮಾನರೊಡನೆ ಸಂಬಂಧ	ಲಿಂಗ	ಪ್ರಾಯ	ವಿದ್ಯಾರ್ಹತೆ	ಉದ್ಯೋಗ	ಸಂಘದ ಸದಸ್ಯರೇ

11. ಕುಟುಂಬದ ಸದಸ್ಯರ ಸಂಖ್ಯೆ :
12. ನೀವು ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದೀರಾ? ಹೌದು / ಇಲ್ಲ
13. ಮನೆಯ ಸ್ವರೂಪ

    (a) ಆರ್.ಸಿ.ಸಿ (b) ಹಂಚಿನ ಮನೆ (c) ಸೋಗೆ/ಮುಳಿ (d) ಇತರೆ

14. ಉದ್ಯೋಗ :
15. ನೀವು ಸ್ವಂತ ಭೂಮಿ ಹೊಂದಿದ್ದರೆ ಅದರ ಒಟ್ಟು ವಿಸ್ತೀರ್ಣ :
16. ನೀವು ತಿಂಗಳ ಆದಾಯ :
17. ನಿಮ್ಮ ತಿಂಗಳ ಖರ್ಚು :

18. ನಿಮ್ಮ ಸ್ವಸಹಾಯ ಸಂಘ ಸದಸ್ಯರ ಸಂಖ್ಯೆ :

19. ಎಷ್ಟು ವರ್ಷದಿಂದ ನೀವು ಸ್ವಸಹಾಯ ಸಂಘದ ಸದಸ್ಯರು?

20.ಸ್ವಸಹಾಯ ಗುಂಪಿಗೆ ಸೇರಿರುವ ಉದ್ದೇಶ :

21.ನಿಮ್ಮ ಗುಂಪಿನಲ್ಲಿ ನಿರ್ಧಾರವನ್ನು ಯಾರು ತೆಗೆದುಕೊಳ್ಳುತ್ತಾರೆ ?

22.ನಿಮ್ಮ ಗುಂಪಿನ ಸದಸ್ಯರಲ್ಲಿ ವೈಮನಸ್ಸು ಇದೆಯಾ ? ಹೌದು/ ಇಲ್ಲ

23.ನಿಮ್ಮ ಗುಂಪಿನ ಕಾರ್ಯನಿರ್ವಹಣೆಯ ಬಗ್ಗೆ ನಿಮಗೆ ತೃಪ್ತಿ ಇದೆಯಾ ? ಹೌದು/ಇಲ್ಲ

24. ತೃಪ್ತಿ ತಂದಿದ್ದರೆ ಅದರ ಮ ಟ್ಟ

(a) ಉತ್ತಮ (b) ಅತ್ಯುತ್ತಮ (c) ಸಮಾಧಾನಕರ (d) ತೃಪ್ತಿ ಇಲ್ಲ

25. ನೀವು ಸ್ವಸಹಾಯ ಗುಂಪಿನಿಂದ ಸಾಲ ಪಡೆದಿದ್ದೀರಾ ? ಹೌದು/ಇಲ್ಲ

26. ನೀವು ಕೇಳಿದಷ್ಟು ಸಾಲ ನಿಮಗೆ ಸಿಕ್ಕಿದೆಯಾ ಹೌದು/ ಇಲ್ಲ

27. ನೀವು ಕೋರಿದ ಸಾಲದ ಮೊತ್ತ ಎಷ್ಟು ?

28. ನಿಮಗೆ ನೀಡಿದ ಸಾಲದ ಮೊತ್ತ ಎಷ್ಟು ?

29. ಸಾಲದ ಮರುಪಾವತಿ ಕಂತು ಯಾವ ರೀತಿ ?

(a) ತಿಂಗಳಿಗೊಮ್ಮೆ (b) ವಾರಕ್ಕೊಮ್ಮೆ (c) ಎರಡು ವಾರಕ್ಕೊಮ್ಮೆ (d) ಇತರೆ

30. ಸಾಲದ ಮರುಪಾವತಿ ಸಮಯದ ಬಗ್ಗೆ ನಿಮ್ಮ ಅಭಿಪ್ರಾಯ

(a) ತೃಪ್ತಿಕರ (b) ತೃಪ್ತಿಕರವಾಗಿಲ್ಲ

31. ಸಾಲದ ಬಡ್ಡಿಯ ಬಗ್ಗೆ ನಿಮ್ಮ ಅಭಿಪ್ರಾಯ

(a) ತುಂಬಾ ಹೆಚ್ಚು (b) ಹೆಚ್ಚು (c) ಕನಿಷ್ಠ ಬಡ್ಡಿ (d) ಇಲ್ಲ

32. ನೀವು ಸ್ವಸಹಾಯ ಸಂಘದ ಸಾಲದ ಹೊರತು ಯಾವುದಾದರೂ ಇತರೆ
ಬ್ಯಾಂಕುಗಳಿಂದ ಸಾಲ ಪಡೆದಿದ್ದೀರಾ ? ಹೌದು/ ಇಲ್ಲ

33. ನೀವು ಪಡೆದ ಸಾಲವನ್ನು ಯಾವ ರೀತಿ ವಿನಿಯೋಗಿಸುತ್ತಿದ್ದೀರಿ ?

(a) ಹೊಸ ಉದ್ಯಮ ಪ್ರಾರಂಭಿಸಲು (b) ಸ್ವ ಉದ್ಯೋಗ ಅಭಿವೃದ್ಧಿ

(c) ಮನೆ/ಕುಟುಂಬ ಸಮಾರಂಭಕ್ಕೆ (d) ಮಕ್ಕಳ ವಿದ್ಯಾಭ್ಯಾಸಕ್ಕೆ

(e)ಮನೆ ಸರಿಪಡಿಸಲು/ಗೃಹ ನಿರ್ಮಾಣ (f)ಒಡವೆ ಖರೀದಿಸಲು

(g)ಇತರೆ (ವಿವರ ತಿಳಿಸಿ : ಉದಾ :- ದನ, ಎತ್ತು, ಖರೀದಿ ಇತ್ಯಾದಿ)

34. ನೀವು ಪಡೆದ ಸಾಲದಿಂದ ನಿಮ್ಮ ಮೇಲೆ ಏನು ಪರಿಣಾಮ ಉಂಟಾಗಿದೆ?

(a) ನನ್ನ ಉದ್ಯೋಗ / ವ್ಯವಹಾರ ಮೊದಲಿಗಿಂತ ಹೆಚ್ಚಾಗಿದೆ.

(b) ನನ್ನ ಆರ್ಥಿಕ ಸ್ಥಾನಮಾನ ಹೆಚ್ಚಿದೆ

(c) ನನ್ನ ಸಾಮಾಜಿಕ ಸ್ಥಾನಮಾನ ಹೆಚ್ಚಿದೆ

(d) ಕುಟುಂಬದಲ್ಲಿ ನನ್ನ ಸ್ಥಾನ ಹೆಚ್ಚಿದೆ (e)ಇತರ

35 ಸ್ವಸಹಾಯ ಗುಂಪು ನಿಮಗೆ ಯಾವುದಾದರೂ ವಿಷಯದಲ್ಲಿ ತರಬೇತಿ ನೀಡಿದೆಯೇ ?

ಹೌದು/ಇಲ್ಲ.

36. ನಿಮ್ಮ ಸ್ವಸಹಾಯ ಗುಂಪಿನ ಕಾರ್ಯನಿರ್ವಹಣೆಯ ಬಗ್ಗೆ ನಿಮ್ಮ ಅಭಿಪ್ರಾಯ

(a) ಅತ್ಯುತ್ತಮ (b) ಉತ್ತಮ (c) ಸಾಧಾರಣ (d) ಕೆಳಮಟ್ಟ

37. ನಿಮ್ಮ ಸಾಲದ ಈಗಿನ ಸ್ಥಿತಿ

(a) ಪೂರ್ತಿ ಮರುಪಾವತಿ ಆಗಿದೆ (b) ಮರುಪಾವತಿ ಆಗುತ್ತಾ ಇದೆ.

	ಸದಸ್ಯರಾದ ಮೊದಲು	ಸದಸ್ಯರಾದ ನಂತರ
38. ನಿಮ್ಮ ತಿಂಗಳ ಆದಾಯ :		
39. ನಿಮ್ಮ ತಿಂಗಳ ಖರ್ಚು :	________	________
40. ಆಹಾರಕ್ಕಾಗಿ ಬಾಬ್ತು :	________	________
41. ಇತರ ಮೇಲು ಖರ್ಚು :	________	________
42. ತಿಂಗಳ ಉಳಿತಾಯ :	________	________

43. ನೀವು ಸದಸ್ಯರಾದ ಮೇಲೆ ನಿರ್ಧಾರಗಳನ್ನು ಯಾರು ತೆಗೆದುಕೊಳ್ಳುತ್ತಾರೆ ?

(a) ನೀವು (b) ಪತಿ (c) ಇಬ್ಬರೂ ಸೇರಿ

44. ನಿಮ್ಮ ಮನಸ್ಥೈರ್ಯ ಹೆಚ್ಚಾಗಿದೆ ________ ________

45. ನೀವು ಅಡುಗೆಗೆ ಉಪಯೋಗಿಸುವ ಇಂಧನ

(a) ಗ್ಯಾಸ್ (b) ಕಟ್ಟಿಗೆ (c) ಗೋಬರ್ ಗ್ಯಾಸ್ (d) ವಿದ್ಯುತ್ (e)ಇತರೆ

46. ನೀವು ಸದಸ್ಯರಾದ ಮೇಲೆ ನಿಮ್ಮ ಮನೆಯ ಪರಿಸ್ಥಿತಿ ಉತ್ತಮವಾಗಿದೆಯೇ ?

ಹೌದು / ಇಲ್ಲ ಹೌದು ಆಗಿದ್ದರೆ ಯಾವ ರೀತಿ ತಿಳಿಸಿ

ರೂಂಗಳು ____________ ____________

ಶೌಚಾಲಯ ____________ ____________

ಮಾಡು ____________ ____________

47. ನೀವು ಸಂಘದ ಸದಸ್ಯರಾದ ಮೇಲೆ ನಿಮ್ಮ ಸಂಬಂಧ ಇತರರೊಡನೆ ಉತ್ತಮವಾಗಿದೆ

ಹೌದು / ಇಲ್ಲ

48. ನೀವು ಸ್ವಸಹಾಯ ಸಂಘದ ಸದಸ್ಯರಾದ ಮೇಲೆ ನಿಮ್ಮ ಸಾಮಾಜಿಕ ಚಟುವಟಿಕೆಗಳು ಹೆಚ್ಚಾಗಿವೆಯೇ ? ಹೌದು / ಇಲ್ಲ

49. ಸದಸ್ಯರಾದ ಮೇಲೆ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ತಿಳುವಳಿಕೆ ಜಾಸ್ತಿ ಆಗಿದೆಯೇ ?

ಹೌದು / ಇಲ್ಲ

50. ನೀವು ಸ್ವಸಹಾಯ ಸಂಘದ ಸದಸ್ಯರಾದ ಮೇಲೆ ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರಾಗಿದ್ದೀರಾ ?

51. ನಿಮ್ಮ ಅನಾರೋಗ್ಯ ಸಂಬಂಧ ಚಿಕಿತ್ಸೆ ಎಲ್ಲಿ ಪಡೆಯುತ್ತೀರಿ ?

(a) ಸರಕಾರಿ ಆಸ್ಪತ್ರೆ (b) ಖಾಸಗಿ ಆಸ್ಪತ್ರೆ

52. ಸರಕಾರಿ ಯೋಜನೆಗಳ ಬಗ್ಗೆ ತಿಳುವಳಿಕೆ ಹಾಗೂ ಅನುಷ್ಠಾನ ಮಾಡುವಲ್ಲಿ ಸ್ವಸಹಾಯ ಗುಂಪು ಸಹಕರಿಸಿದೆಯೆ? ಹೌದು / ಇಲ್ಲ ವಿವರ ತಿಳಿಸಿ

53. ಸ್ವಸಹಾಯ ಗುಂಪಿನಿಂದ ಯಾವ ಸಹಾಯಗಳನ್ನು ಪಡೆದಿದ್ದೀರಿ ?